
ಜಾನಪದ ಗಂಗೋತ್ರಿ



ಕರ್ನಾಟಕ ಜಾನಪದ
ಮತ್ತು
ಯಕ್ಷಗಾನ ಅಕಾಡೆಮಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಮುಖಪುಟ : ಗೋಪಾಲಗೌಡ

ಛಾಯಾಚಿತ್ರಗಳು : ವಿ. ಶ್ರೀನಿವಾಸಮೂರ್ತಿ

ಸಂಪುಟ ೩ ಜನವರಿ–ಮಾರ್ಚ್ ೧೯೮೯ ಸಂಚಿಕೆ ೨

ಜಾನಪದ ಗಂಗೋತ್ರಿ

ಪ್ರಧಾನ ಸಂಪಾದಕ
ಎಸ್. ಕೆ. ಕರೀಂಖಾನ್

ಸಂಪಾದಕರು
ಡಾ. ದೇವೇಂದ್ರಕುಮಾರ ಹಕಾರಿ
ರಂಗಾರೆಡ್ಡಿ ಕೋಡಿರಾಂಪುರ

ವ್ಯವಸ್ಥಾಪಕ ಸಂಪಾದಕ
ಹಿ. ಚಿ. ಬೋರಲಿಂಗಯ್ಯ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು - ೫೬೦ ೦೦೨

JANAPADA GANGOTRI - A Half yearly on Karnataka Folklore
Published by Karnataka Janapada and Yakshagana Academy
Bangalore-560 002. Chief Editor, S. K. Kareem Khan, Editors
Dr. Devendrakumar Hakari, Ranga Reddy Kodirampura, Managing
Editor Hi. Chi. Boralingaiah, Vol. 3 Copy-2, Pages 92+viii,
January-March 1989

ಬೆಲೆ : ಐದು ರೂಪಾಯಿಗಳು

ಚಂದಾ ಮತ್ತು ಪ್ರತಿಗಳು :
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೧೪/೩, ಕೆನರಾ ಫೈನಾನ್ಸ್ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨

ಮುದ್ರಕರು :
ರಶ್ಮಿ ಮುದ್ರಣ
ಸುಧಾಮನಗರ, ಬೆಂಗಳೂರು-೨೭

ಪ್ರಧಾನ ಸಂಪಾದಕರ ಮಾತು

ಜಾನಪದದ ವೈಜ್ಞಾನಿಕ ಅಧ್ಯಯನ, ಜನಪದ ಕಲೆಗಳ ಸಂರಕ್ಷಣೆ, ಸಾಹಿತ್ಯವನ್ನು ಸುಭದ್ರಗೊಳಿಸುವುದು ಹಾಗೂ ಕರ್ನಾಟಕದ ಗಿರಿಜನರ ಸಾಂಸ್ಕೃತಿಕ ಜೀವನ ವಿಧಾನಗಳನ್ನು ದಾಖಲಾತಿಗೊಳಿಸುವುದು ಮುಂತಾದ ವಿಶೇಷ ಯೋಜನೆಗಳನ್ನು ಹಮ್ಮಿಕೊಂಡು ಮುನ್ನಡೆ ಯುತ್ತಿರುವ ಅಕಾಡೆಮಿ ಈ ದಿಸೆಯಲ್ಲಿ ಸರ್ಕಾರ, ಸಾರ್ವಜನಿಕರು ಮತ್ತು ಸಹೃದಯರ ಸಹಕಾರ ಕೋರುತ್ತದೆ. ಪ್ರಕಟಣೆ ಕಲಾಸಂರಕ್ಷಣೆ ಮತ್ತು ಪ್ರಗತಿಪರವಾದ ಯಾವುದೇ ವಿಚಾರದಲ್ಲಾಗಲೀ ಆಸಕ್ತರು ಸಲಹೆ ಮತ್ತು ಮಾರ್ಗದರ್ಶನ ನೀಡುವ ಮೂಲಕ ಅಕಾಡೆಮಿಯ ಜೊತೆಗೆ ಇರಬೇಕೆಂಬುದು ನನ್ನ ಕಳಕಳಿಯ ಮನವಿ.

ಈ ಸಂಚಿಕೆಯ ಲೇಖನಗಳನ್ನು ಸಂಗ್ರಹಿಸಿ ಸಂಪಾದಿಸಿ ಅಚ್ಚುಕಟ್ಟಾಗಿ ಹೊರತಂದಿರುವ ಮಾನ್ಯ ಸಂಪಾದಕರು ಗಳಿಗೆ ನನ್ನ ಕೃತಜ್ಞತೆಗಳು.

ಎಸ್. ಕೆ. ಕರೀಂಖಾನ್
ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಸಂಪಾದಕರ ಮಾತು

'ಜಾನಪದ ಗಂಗೋತ್ರಿ' ಅರ್ಧವಾರ್ಷಿಕದ ಎರಡನೆಯ ಸಂಚಿಕೆ ಜಾನಪದ ಆಸಕ್ತರ ಕೈಲಿದೆ.

ಈ ಸಂಚಿಕೆಯಲ್ಲಿ ವೈಜ್ಞಾನಿಕ ಹಿನ್ನೆಲೆಯ ಜಾನಪದ ಅಧ್ಯಯನ ಕುರಿತ ಲೇಖನಗಳಿವೆ. ಜನಪದ ಸಾಹಿತ್ಯದ ಮಾನವೀಯ ಸಂವೇದನೆಗಳ ಅಭಿವ್ಯಕ್ತಿಗೆ ಸಂಬಂಧಿಸಿದ ಟಿಪ್ಪಣಿ ಕೂಡ ಇದೆ. ಜನಾಂಗ ಸಂಸ್ಕೃತಿಯ ಅಮೂಲ್ಯ ಆಕರ ಜಾನಪದ. ಜನಪದ ಸಾಹಿತ್ಯ ಒಂದು ಸ್ತರವಾದರೆ ಸಾಹಿತ್ಯೇತರ ಜಾನಪದ ಅದರ ಮತ್ತೊಂದು ಸ್ತರ. ವಿಭಿನ್ನ ಮಾನವ ವೃಂದ, ಸಮುದಾಯ, ಕುಲಗುಂಪು, ಬುಡಕಟ್ಟು ಅಲೆಮಾರಿ - ಅರೆಅಲೆಮಾರಿ ಸಮೂಹಗಳ ಆರ್ಥಿಕ ಶ್ರೇಣಿ, ಸಮಾಜ ಸಂಘಟನೆ ಸಂಘರ್ಷ ಪರಿವರ್ತನೆಗಳು ಕ್ರಿಯಾತ್ಮಕ ಪಾತಳಿಯ ಭೌತಿಕ ಸಂಸ್ಕೃತಿಯ ನಿರ್ಮಾಣಕ್ಕೆ ಕಾರಣವಾಗಿದ್ದರೆ, ಸಾಹಿತ್ಯಿಕ ಸಂವೇದನೆ ಧಾರ್ಮಿಕ ಕಲಾತ್ಮಕ ಪರಿಕಲ್ಪನೆಗಳ ಭಾವನಾತ್ಮ ಸೃಷ್ಟಿ ಮಾನವ ಜೀವನದ ಸಮಷ್ಟಿ ಪ್ರಜ್ಞೆಯಾಗಿ ಆಂತರಿಕ ಸಂಸ್ಕೃತಿ(ಆಧ್ಯಾತ್ಮಿಕ)ಯ ಆವಿಷ್ಕಾರಕ್ಕೆ ಪ್ರೇರಣೆಯಾಗಿದೆ.

ಜನಪದ ಕನ್ನಡದ ಮಣ್ಣಿನ ಬೆವರನ್ನು ಕರ್ನಾಟಕ ಜನಪದ ಸಂಸ್ಕೃತಿಯ ಗಂಧವನ್ನು ಉಸಿರಾಡಿಸುತ್ತ ಕನ್ನಡ ಜನಪದ ಜೀವನಕ್ಕೆ ತಮ್ಮನ್ನು ತಾವು ಮುಕ್ತವಾಗಿ ತೆರೆದಿಟ್ಟುಕೊಂಡ ಜನಪದ ಹಾಡು ಲಾವಣಿಗಳನ್ನು ಸಂಗ್ರಹಿಸಿ ಅದರ ಸೊಬಗು ಸೌಂದರ್ಯಗಳನ್ನು ಕನ್ನಡಿಗರಿಗೆ ಎಷ್ಟೋ ದಶಕಗಳ ಪೂರ್ವದಲ್ಲಿಯೇ ಕೈಕೊಂಡ ಇಂದಿನ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಶ್ರೀ ಎಸ್. ಕೆ. ಕರೀಂ ಖಾನ್ ಅವರು ಒಬ್ಬ ವಿರಳ ಅಪೂರ್ವವ್ಯಕ್ತಿ. ಭಾರತ ಸ್ವಾತಂತ್ರ್ಯದ ಹೋರಾಟಗಾರ. ಕನ್ನಡ ಜಾನಪದ ಲಾವಣಿಗಳನ್ನು ಹಾಡಿ ನಾಡಿನ ಉದ್ದಗಲಕ್ಕೂ ಸಂಚರಿಸಿ ಜನರನ್ನು ಹುರಿದುಂಬಿಸಿದ ಸಮ್ಮೋಹಕ ಜನಪದ ಹಾಡುಗಾರ. ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿ ಜೈಲುವಾಸದ ಕುಲುಮೆಯಲ್ಲಿ ಬೆಂದುಬಂದ ಅಪರಂಜಿ. ಕರ್ನಾಟಕ ಏಕೀಕರಣದ ಹೋರಾಟದಲ್ಲಿ ಅಖಂಡ ಕರ್ನಾಟಕದ ನಿರ್ಮಾಣದ ಕರೆಗೆ ಓಗೊಟ್ಟು ಶ್ರಮಿಸಿದ ದೂರದರ್ಶಿ. ರಾಜಕೀಯ ತಂತ್ರಶೈಲಿಗಳಿಂದ ದೂರ ಸರಿದು ಸಿನಿಮಾ

ರಂಗಕ್ಕೂ ಸೇವೆಸಲ್ಲಿಸಿದ ಚಿತ್ರರಂಗದ ಕವಿ. ಕಥೆ ಹಾಡು ಸಂಭಾಷಣೆಗಳನ್ನು ಒದಗಿಸಿ ಕನ್ನಡ ಚಿತ್ರರಂಗದ ಉತ್ತಮಿಕೆಗಾಗಿ ದುಡಿದ ಆದರ್ಶವಾದಿ. ಇಂದಿಗೂ ಅಪ್ಪಟ ಜನಪದ ವ್ಯಕ್ತಿತ್ವ ಹೊಂದಿರುವ ಶ್ರೀ ಕರೀಂಖಾನ್ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿ ನೇಮಕಗೊಂಡುದು ಒಂದು ಸಂಯೋಗ. ಹೆಮ್ಮೆಯ ಉನ್ನತ ಶಿಕ್ಷಣ ಸಂಸ್ಥೆಯಾದ ಕಲಬುರ್ಗಿ ವಿಶ್ವವಿದ್ಯಾಲಯ ಶ್ರೀ ಕರೀಂಖಾನರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿದ್ದು ಒಂದು ಉಲ್ಲೇಖನೀಯ ಸಂಗತಿ. ಅವರಿಗೆ ಸಂದ ಈ ಗೌರವ ಕರ್ನಾಟಕ ಜಾನಪದ ಪ್ರಪಂಚಕ್ಕೆ ಸಂದ ಗೌರವ.

ಕಳೆದ ವರ್ಷ ಜಾನಪದದ ವಿಶೇಷ ರಾಜ್ಯಪ್ರಶಸ್ತಿ ಪಡೆದ ಮಹನೀಯರಲ್ಲಿ ಶ್ರೀ ಸಿಂಪಿ ಲಿಂಗಣ್ಣ ಒಬ್ಬರು. ಬಿಜಾಪುರ ಪ್ರದೇಶದ ಅಚ್ಚಗನ್ನಡ ನೆಲದ ಮಗನಾದ ಲಿಂಗಣ್ಣ ಮೂವತ್ತರ ದಶಕದಲ್ಲಿ ಹಲಸಂಗಿ ಗೆಳೆಯ ಗುಂಪಿನ ಜೀವನಾಡಿಯಾಗಿದ್ದ ವರು. ಜನಪದ ಹಾಡುಗಳ ದಾಟಿ ಲಯಗಳಿಗೆ ಮನಸೋತವರು. ಜನಪದರಂಗ ಭೂಮಿಯ ಸಣ್ಣಾಟ ದೊಡ್ಡಾಟಗಳ ಕಥೆ, ಕಣಿತ, ಹಾಡುಗಳಿಗೆ ಮಾರುಹೋದವರು, ಕನ್ನಡ ಜನಪದರ ಬಕುಕಿನ ವಿವಿಧ ಮಗ್ಗಲುಗಳನ್ನು ಕಣ್ಣಾರೆ ಕಂಡವರು. ಕೈಬಾಯಿ ಸುಟ್ಟುಕೊಂಡು ಜನಪದರ ಜೊತೆಗೇ ಬೆಳೆದವರು, ಬಾಳಿದವರು. ಉತ್ತರ ಕರ್ನಾಟಕದ ಜನಪದ ಸತ್ವ, ಸೊಗಡುಗಳನ್ನು ಇಡೀ ಕರ್ನಾಟಕದ ವಿದ್ವಾಂಸರಿಗೆ ಪರಿಚಯಿಸಿ ಅವರೆಲ್ಲರ ಕಣ್ಣು ತೆರೆಸಿದವರು. 'ಜನಾಂಗದ ಜೀವಾಳ'ದ ಮೂಲಕ ಅಧಿಕ ವೈಜ್ಞಾನಿಕ ಅಧ್ಯಯನಕ್ಕೆ ದಿಕ್ಸೂಚಿಯಾದವರು.

ಈ ವರ್ಷ ಗುಲಬರ್ಗಾ ವಿಶ್ವವಿದ್ಯಾಲಯ ಈ ಇಬ್ಬರೂ ಮಹನೀಯವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಕರ್ನಾಟಕದ ಜಾನಪದ ಪ್ರಪಂಚ ದಲ್ಲಿ ಇದೊಂದು ಅಪೂರ್ವ ಘಟನೆ, ಹೆಮ್ಮೆಯ ಸಂದರ್ಭ. ಈ ಗೌರವಕ್ಕಾಗಿ ಅವರಿಬ್ಬರಿಗೂ ಹೃತ್ಪೂರ್ವಕ ಅಭಿನಂದನೆಗಳು. ಜಾನಪದ ಕ್ಷೇತ್ರದಲ್ಲಿ ಕಾರ್ಯ ಮಾಡುತ್ತಿರುವ ಎಲ್ಲರಿಗೂ ಇದರಿಂದ ಸ್ಫೂರ್ತಿ ಪ್ರೇರಣೆಗಳು ಒದಗಲಿ ಎಂದು ಹಾರೈಸುತ್ತೇವೆ.

೧ ಮಾರ್ಚ್ ೮೯

ದೇವೇಂದ್ರಕುಮಾರ ಹಕಾರಿ
ರಂಗಾರೆಡ್ಡಿ ಕೋಡಿರಾಂಪುರ

ಲೇಖನ ಸೂಚಿ

ಸಣ್ಣಾಟಗಳ ಹುಟ್ಟು, ಸ್ವರೂಪ ಮತ್ತು ಹೈದ್ರಾಬಾದ ಕರ್ನಾಟಕದ ಸಣ್ಣಾಟಗಳು

ಡಾ. ವ್ಹಿ. ಜಿ. ಪೂಜಾರ

ಬಯಲಿನಲ್ಲಿ ಅಟ್ಟಹಾಕಿ ಇಲ್ಲವೆ ಕಟ್ಟೆಯ ಮೇಲೆ ಆಡುವ ಆಟಗಳೇ ಬಯಲಾಟಗಳು. ಇವುಗಳಲ್ಲಿ ದೊಡ್ಡಾಟ ಮತ್ತು ಸಣ್ಣಾಟವೆಂಬೆರಡು ಪ್ರಕಾರಗಳು. ಸಣ್ಣಾಟಗಳಲ್ಲಿ ಡಪ್ಪು ಬಾರಿಸುವುದರಿಂದ ಇವಕ್ಕೆ ಡಪ್ಪಿನಾಟಗಳೆಂದೂ ಕರೆಯುವರು. ದೊಡ್ಡಾಟಗಳನ್ನು ದಕ್ಷಿಣ ಕರ್ನಾಟಕದಲ್ಲಿ ಕ್ವಚಿತ್ತಾಗಿ ಕಾಣಬಹುದಾದರೂ ಸಣ್ಣಾಟಗಳನ್ನು ಮಾತ್ರ ಅಲ್ಲಿ ಕಾಣಲಾರೆವು. ಇವನ್ನು ಉತ್ತರ ಕರ್ನಾಟಕದ ಬಳ್ಳಾರಿ, ಧಾರವಾಡ, ಬೆಳಗಾವಿ, ವಿಜಾಪುರ, ರಾಯಚೂರ, ಗುಲಬರ್ಗಾ ಮತ್ತು ಬೀದರ ಜಿಲ್ಲೆಗಳಲ್ಲಿ ಕಾಣಬಹುದು. ಅದರಲ್ಲೂ ವಿಶೇಷವಾಗಿ ಇವು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಪ್ರಚಲಿತವಾದಂಥವು. ಈ ಪ್ರದೇಶದ ಸಣ್ಣಾಟಗಳ ರೂಪ ಸ್ವರೂಪಗಳನ್ನು ಪ್ರಸ್ತಾಪಿಸುವ ಮೊದಲು ಸಣ್ಣಾಟಗಳ ಹುಟ್ಟನ್ನು ಕುರಿತು ಒಂದೆರಡು ಮಾತು ;

ಸಣ್ಣಾಟಗಳು ಯಾವಾಗ ಹುಟ್ಟಿದುವು ಎಂಬುದನ್ನು ಖಚಿತವಾಗಿ ಸಂಶೋಧಕರಿಗಿನ್ನೂ ಗುರುತಿಸುವುದಾಗಿಲ್ಲ. ಲಿಖಿತ ಆಧಾರಗಳು ಅಷ್ಟಾಗಿ ಲಭಿಸದ್ದರಿಂದ ಇದು ಕಷ್ಟದ ಕೆಲಸ. ಆದರೂ ಕೆಲ ವಿದ್ವಾಂಸರು ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಉಲ್ಲೇಖಗೊಂಡ 'ಪಗರಣ'ವೆಂಬ ರೂಪಕ ಮತ್ತು ಬಹುರೂಪಿಗಳ ಆಟಗಳಿಂದ ಸಣ್ಣಾಟ

ಹುಟ್ಟಿರಬಹುದೆನ್ನುವರು. 'ಕವಿರಾಜಮಾರ್ಗ', 'ವಡ್ಡಾರಾಧನೆ' ಮತ್ತು 'ಧರ್ಮಾಮೃತ' ಕಾವ್ಯಗಳಲ್ಲಿ ಉಲ್ಲೇಖಗೊಂಡ 'ಪಗರಣ', ಪಜ್ಜೆ[3] ಹಾಗೂ ಶೃತಿಯ ಮೇಳದೊಂದಿಗೆ ಆಡುವ, ಕುಣಿತ, ಸಂಭಾಷಣೆ ಹಾಗೂ ಹಾಡುಗಳಿಂದ ಕೂಡಿದ ಕಲಾಪ್ರಕಾರವಾದರೂ, ಇದರಲ್ಲಿ ಸಣ್ಣಾಟಗಳಲ್ಲಿರುವಂತೆ ಒಂದು ನಿಶ್ಚಿತ ಕಥಾವಸ್ತು ಇರುವುದಿಲ್ಲ. ಇದೊಂದು ಲಘುಪ್ರಹಸನ. ಇದರಲ್ಲಿ ಪಜ್ಜೆ[3] ವಾದ್ಯ ಬಳಸಿದರೆ, ಸಣ್ಣಾಟದಲ್ಲಿ ಇದನ್ನೇ ಹೋಲುವ ಡಪ್ಪನ್ನು ಬಾರಿಸುವರು. ಇದೊಂದೇ ಎರಡರಲ್ಲಿರುವ ಸಮಾನಾಂಶ. ಇದಿಷ್ಟರಿಂದಲೇ 'ಪಗರಣ'ದಿಂದ ಸಣ್ಣಾಟ ಹುಟ್ಟಿದೆಯೆನ್ನಲು ಬಾರದು. ಇನ್ನು ಹನ್ನೆರಡನೆಯ ಶತಮಾನದ ಬಹುರೂಪಿ ಚೌಡಯ್ಯ ಶಿವನ ಇಪ್ಪತ್ತೈದು ಲೀಲೆಗಳನ್ನು ಚಿತ್ರಿಸುವ ಆಟ. ಆಡಿ ತೋರಿಸುತ್ತಿದ್ದ ವಿಷಯ ಕೆಲ ಕೃತಿಗಳಿಂದ ತಿಳಿದು ಬರುವುದು. ಅನಂತರ ಕರ್ನಾಟಕದಲ್ಲಿ ಬಹುರೂಪಿಗಳ ತಂಡವೇ ಹುಟ್ಟಿಕೊಂಡಂತಿದೆ. ಈ ತಂಡಗಳು ಶರಣರ ಚರಿತ್ರೆಯನ್ನು ಸರಳ ಸಂಭಾಷಣೆ ಹಾಗೂ ಹಾಡುಗಳ ಮೂಲಕ ಸಂಯೋಜನಗೊಳಿಸಿ ಊರೂರು ಅಲೆದು ವೇಷಧರಿಸಿ ಬಣ್ಣ ಬಳಿದು ಸೋಗು ಹಾಕಿ ಬಯಲಲ್ಲೇ ಆಡಿ ಜನರನ್ನು ರಂಜಿಸುವುದರ ಮೂಲಕ ಅವರಿಗೆ ಭಕ್ತಿ, ಜ್ಞಾನ, ವೈರಾಗ್ಯ ಮತ್ತು ನೀತಿಬೋಧೆ ಮಾಡುತ್ತ ಬಂದರು. ಇಂಥ ವೇಷಗಾರರ ತಂಡವೊಂದು 'ಪದಿನೆಂಟು ಜಾತಿಯ ನೂರೊಂದು ಕುಲದ ವೇಷವುಂ ತೊಟ್ಟು ಭಾಷೆಯನ್ನಾಡುವಲ್ಲಿ' ಸೋಲಲು ಬಹುರೂಪಿ ಚೌಡಯ್ಯ ಅವೆಲ್ಲವನ್ನಾಡಿ ಗೆದ್ದನೆಂದು ಉಲ್ಲೇಖಿಸಲಾಗಿದೆ.[1] ಇಂಥ ವೃತ್ತಿಯನ್ನೇ ತಮ್ಮ ಜೀವನಕ್ಕೆ ಆಧಾರವಾಗಿಸಿಕೊಂಡ ಬಹುರೂಪಿಗಳ 'ಸೋಗು'ಗಳೇ ಮುಂದೆ ಸಣ್ಣಾಟ, ದೊಡ್ಡಾಟಗಳಾಗಿ ಬೆಳೆದು ಬಂದಂತಿವೆಯೆಂದು ಡಾ. ಮ.ಗು. ಬಿರಾದಾರ ಅವರು ಅಭಿಪ್ರಾಯ ಪಡುವರು.[2] 'ಈ ಆಟಗಳಿಗೆ ಉಪಯೋಗಿಸುವ ಕಥಾವಸ್ತು ನೋಡಿದರೆ ಸಣ್ಣಾಟ ೧೨ನೆಯ ಶತಮಾನದಿಂದ ಇತ್ತೀಚೆಗೆ ಹುಟ್ಟಿರಬೇಕೆನಿಸುತ್ತದೆ'[3]ಯೆಂದು ಡಾ. ಸುಂಕಾಪುರ ಅಭಿಪ್ರಾಯಪಟ್ಟರೆ, ಡಾ. ಕಲಬುರ್ಗಿಯವರು ಸಣ್ಣಾಟ ಸೃಷ್ಟಿಯ ಪ್ರಬಲ ಕಾರಣ ೧೨ನೆಯ ಶತಮಾನದ ಭಕ್ತಿ ಸಂವೇದನೆಯೇ ಆಗಿದೆಯೆನ್ನುವರು.[4] ಈ ಹೇಳಿಕೆಗಳು ಗಮನಿಸುವಂತಹವಾದರೂ ಇವುಗಳನ್ನು ಕುರಿತ ಅಧಿಕ ಸಂಶೋಧನೆ ಅಗತ್ಯ ಅನಿಸುತ್ತದೆ.

---

1 ಹಿರೇಮಠ ಆರ್.ಸಿ., ಸುಂಕಾಪುರ ಎಂ.ಎಸ್. (ಸಂ) : ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ಭಾಗ-೧, ಪುಟ-೨೨೩.

2 ಹಿರೇಮಠ ಆರ್.ಸಿ. (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ-೧, ಪುಟ-೮೮.

3 ಸುಂಕಾಪುರ ಎಂ.ಎಸ್. (ಸಂ) : ಕನ್ನಡ ಬಯಲಾಟ, ಅಲ್ಲಮಪ್ರಭು, ಪ್ರಸ್ತಾವನೆ, ಪುಟ-೨.

4 ಲಕ್ಕೆ ಎಂ.ಎಸ್. (ಸಂ) : ಜಾನಪದ ಸಂಪದ, ಪುಟ-೧೬೧.

ಇನ್ನು ಸಣ್ಣಾಟ, ದೊಡ್ಡಾಟ ಇವುಗಳಲ್ಲಿ ಯಾವುದು ಮೊದಲು ರಂಗಭೂಮಿಯ ಮೇಲೆ ಬಂತೆಂಬುದರ ಬಗ್ಗೆ ಕೂಡ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಡಾ. ದೇವೇಂದ್ರಕುಮಾರ ಹಕಾರಿಯವರು 'ಸಣ್ಣಾಟವೇ ಮೊದಮೊದಲು ಜನಪದ ರಂಗ ಭೂಮಿಯಲ್ಲಿ ತಲೆದೋರಿ, ಅದರ ಹಿಗ್ಗಿದ ಭವ್ಯರೂಪವೇ ದೊಡ್ಡಾಟವೆಂದು ಹೇಳು ವುದು ಸೂಕ್ತವಾದೀತು'[5] ಎಂದರೆ, ಡಾ. ಸುಂಕಾಪುರ ಅವರು ಮೊದಮೊದಲು ರಂಗ ಭೂಮಿಗೆ ಬಂದುದು ದೊಡ್ಡಾಟವೆನ್ನುವರು.[6]

ಮೊದಲು ನಮ್ಮಲ್ಲಿದ್ದುದು 'ಬಯಲಾಟ'. ಅನಂತರ ಇದಕ್ಕಿಂತ ಸ್ವರೂಪ ದಲ್ಲಿ ಭಿನ್ನವಾದುದೊಂದು ಹುಟ್ಟಿಕೊಂಡಾಗ ಬಯಲಾಟದ ಎರಡು ಕವಲುಗಳಾಗಿ 'ದೊಡ್ಡಾಟ' 'ಸಣ್ಣಾಟ'ಗಳು ಮೂಡಿ ಬಂದುವೆಂದು ಹೇಳಬಹುದು.

ದೊಡ್ಡಾಟ ಹೆಸರಿಗೆ ತಕ್ಕಂತೆ ದೊಡ್ಡದೇ! ಭರ್ಜರಿ ವೇಷಭೂಷಣ, ಭವ್ಯ ರಂಗಸಜ್ಜಿಕೆ, ಕುಣಿತ, ಜಾಗಟೆ, ದೇವತಾ ಪಾತ್ರಗಳ ಠೀವಿ, ರಾಕ್ಷಸ ಪಾತ್ರಗಳ ಆರ್ಭಟ ಮುಂತಾದವು ಪ್ರೇಕ್ಷಕರಿಗೆ ಭವ್ಯತೆಯ ಅನುಭವವನ್ನುಂಟು ಮಾಡುವಂಥವು. ದೊಡ್ಡಾಟಗಳಿಗೆ ಬಳಸಿಕೊಂಡ ಕಥೆ ಹೆಚ್ಚಾಗಿ ಪುರಾಣಗಳಿಂದಾಯ್ದುಂಥದು. ಇಲ್ಲಿ ವೀರ, ರೌದ್ರರಸಗಳಿಗೇ ಪ್ರಾಧಾನ್ಯ. ಈ ಆಟದ ಭವ್ಯತೆ ಬರಬರುತ್ತ ಜನತೆಯಲ್ಲಿ ಒಂದು ವಿಧದ ಏಕತಾನತೆಯನ್ನುಂಟು ಮಾಡಿದಂತಿದೆ. ಜನ ವೀರ ರೌದ್ರ ರಸಗಳ ಬದಲು ಶೃಂಗಾರ, ಭಕ್ತಿ, ಹಾಸ್ಯ ಮುಂತಾದ ರಸಗಳನ್ನು ಹೊಮ್ಮಿಸುವ ಆಟಗಳನ್ನು ಬಯಸತೊಡಗಿದರೆಂದು ಕಾಣುತ್ತದೆ. ಇದರ ಫಲವೇನೋ ಎನ್ನುವಂತೆ 'ದೊಡ್ಡಾಟ'ದ ಗಂಭೀರ ತಂತ್ರಗಳು ಸಡಿಲಗೊಂಡು ಜಾನಪದ ರಂಗಭೂಮಿ 'ಸಣ್ಣಾಟ'ದ ಸ್ವರೂಪ ವನ್ನು ರೂಪಿಸಿಕೊಂಡಿರುವ ಸಾಧ್ಯತೆಯೂ ಇದೆ. ಮಹಾರಾಷ್ಟ್ರದ ತಮಾಶಾ ಮಾದರಿ ಕೂಡ ರಾಧಾನಾಟ ಮುಂತಾದವು ಸಣ್ಣಾಟಕ್ಕೆ ಪ್ರೇರಣೆ ನೀಡಿರಬೇಕು.

ಒಟ್ಟಾರೆ ಈ ಎರಡೂ 'ಪ್ರಕಾರ'ಗಳ ಹುಟ್ಟಿನ ಬಗ್ಗೆ ಸಧ್ಯ ನಡೆದ ಕಾರ್ಯಗಳ ಆಧಾರದ ಮೇಲೆ ಇದಮಿತ್ಥಂ ಎಂದು ಹೇಳಲಿಕ್ಕಾಗದು.

ಸಣ್ಣಾಟ - ಸಾಹಿತ್ಯ ಸಂಗೀತ, ಗಾಯನ, ವಾದ್ಯವಾದನ, ನೃತ್ಯ ಮತ್ತು ಅಲಂಕರಣಗಳ ಒಂದು ಸಮ್ಮಿಶ್ರಕಲೆ. ಇವೆಲ್ಲ ಹದವರಿತು ಬೆರೆತಾಗ ಆಟಕ್ಕೆ ಮೆರುಗು ಬರುವುದು. ಇವು ನಡೆಯುವುದು ಹಳ್ಳಿಗಳಲ್ಲೇ. ಸಾಮಾನ್ಯ ಜನರೇ ಇವುಗಳ ಪ್ರೇಕ್ಷಕರು. ಇವುಗಳ ಕಥಾವಸ್ತು ಸಾಮಾನ್ಯಜನರಿಗೆ ಸುಲಭವಾಗಿ ಗ್ರಾಹ್ಯವಾಗು

---

5 ಪರಮಶಿವಯ್ಯ ಜೀ.ಶಂ. (ಸಂ) : ಜಾನಪದ ಸಮೀಕ್ಷೆ, ಪುಟ-೨೦೨.
6 ಸುಂಕಾಪುರ ಎಂ.ಎಸ್. (ಸಂ) : ಕನ್ನಡ ಬಯಲಾಟ ಅಲ್ಲಮಪ್ರಭು, ಪ್ರಸ್ತಾವನೆ, ಪು-೧.

ವಂಥದೇ. ಹನ್ನೆರಡನೆಯ ಶತಮಾನದ ಶರಣರ ಮತ್ತು ಹದಿನೈದನೆಯ ಶತಮಾನದ ಅನಂತರ ಬಂದ ದಾಸರ ಚರಿತ್ರೆ ಇವುಗಳ ಕಥಾವಸ್ತು. ಇವುಗಳಲ್ಲಿ ಮುಖ್ಯವಾಗಿ ಕಾಣಿಸಿಕೊಂಡ ವಿಷಯಗಳೆಂದರೆ ಪಾಪ - ಪುಣ್ಯಗಳ ಚರ್ಚೆ ಜೀವನ ಅಶಾಶ್ವತವೆಂಬ ನಂಬಿಕೆ, ಹೆಣ್ಣು - ಗಂಡುಗಳ ತರ್ಕ, ಪತಿವ್ರತಾ ಧರ್ಮದ ಮಹತಿ, ನೀತಿಯಂತ, ಭಕ್ತಿಯಂತ ಜೀವನದ ಮೇಲ್ಮೆ ಮುಂತಾದವು.

ದೊಡ್ಡಾಟಕ್ಕೆ ಹೋಲಿಸಿದಾಗ ಸಣ್ಣಾಟದ ಪಾತ್ರಗಳ ಸಂಖ್ಯೆ ಕಡಮೆ. ದೊಡ್ಡಾಟದಲ್ಲಿ ಸಾರಥಿ ಇರುವಂತೆ ಸಣ್ಣಾಟದಲ್ಲಿ ದೂತೆ. 'ದೂತೆ' ಈ ಹೆಸರು ಸ್ತ್ರೀಪಾತ್ರವನ್ನು ಸೂಚಿಸಿದರೂ ಪುರುಷರೇ - ಬಣ್ಣ ಬಳಿದುಕೊಳ್ಳದೆ – ಸಹಜ ಸಾದಾ ವೇಷದಲ್ಲೇ ಇದನ್ನು ನಿರ್ವಹಿಸುವರು. ಆಟ ನಡೆಸುವ ಸೂತ್ರಧಾರ ದೂತೆಯೇ. ಈ ಪಾತ್ರ ಎಲ್ಲ ಪಾತ್ರಗಳನ್ನು ಪ್ರೇಕ್ಷಕರಿಗೆ ಪರಿಚಯಿಸುವುದರೊಂದಿಗೆ ಹಾಸ್ಯ ಚಟಾಕಿ ಗಳನ್ನು ಹಾರಿಸಿ ಅವರಿಗೆ ರಂಜನೆಯನ್ನೊದಗಿಸುವುದು. ಈ ಪಾತ್ರಧಾರಿ ಇನ್ನುಳಿದ ಪಾತ್ರಗಳನ್ನು ಮಾತಾಡಿಸುವ ರೀತಿ ಹೀಗೆ : ತಾವು ದಾರು ? ಎಲ್ಲಿಂದ ಬಂದ್ರಿ ? ಬಂದ ಕೆಲಸದಾವುದು ? ಇದಕ್ಕುತ್ತರವಾಗಿ ಬಂದ ಪಾತ್ರ 'ನಾವು ಇಂಥವರು (.....) ದೇವಲೋಕದಿಂದ ಬಂದೆವು ಎನ್ನಲು, ಆ ಕ್ಷಣವೇ ಅಲ್ಲಿಂದಿಲ್ಲಿಗೆ ಹೆಂಗ ಬಂದ್ರಿ ಅಷ್ಟುದ್ದ ನಿಚ್ಚಣಿಕಿ ಎಲ್ಲಿಂದ ತಂದ್ರಿ ಇತ್ಯಾದಿ ಕೇಳಿದ ದೂತೆ ಪ್ರೇಕ್ಷಕರನ್ನು ನಗಿಸುವನು. ಕೆಲ ಸಲ ಪಾತ್ರಧಾರಿಯ ವೇಷಭೂಷಣ ನೋಡಿ ಹಾಸ್ಯಮಯ ಸರಸಮಾತು ಬಳಸುವನು. ಆಟದುದ್ದಕ್ಕೂ ಪ್ರೇಕ್ಷಕರು ಉತ್ಸುಕರಾಗಿರಲೆಂದು ಅಲ್ಲಿಯೇ ಸಂದರ್ಭಕ್ಕೆ ತಕ್ಕಂತೆ ಎಷ್ಟೋ ಮಾತುಗಳನ್ನು ಪ್ರಾಸಬದ್ಧವಾಗಿ ಹೆಣೆದು ಹೇಳುವನು. ಅಂಥ ಕೆಲ ಮಾತು ಗಳನ್ನಿಲ್ಲಿ ಉದಾಹರಿಸಬಹುದು. 'ಮುಕ್ಕಟ ಕೊಡದಿದ್ರ ಕೆಲಸ ಪುಕ್ಕಟ ಮಾಡ ಬೇಕೇನ' ಪಾತ್ರಧಾರಿ ದಪ್ಪಗಿದ್ದರೆ 'ದೊರೆಯೆ ಚಿಟ್ಟಾನಿಮ ಮರಿಯೆ' ಎಂದು, ಕಳ್ಳ ನಾಗಿದ್ದರೆ 'ದೊರೆಯೆ ಗುಡ್ಡದೊಳಗಿನ ನರಿಯೆ' ಎಂದು ಅನೀತಿ ಮಾರ್ಗದಲ್ಲಿ ನಡೆವ ಸ್ತ್ರೀ ಪಾತ್ರವನ್ನು 'ಹೇ ! ತಾಯಿ ಹಣ್ಣ ಮೆಣಸಿನಕಾಯಿ' ಅಥವಾ 'ಹೇ ! ತಾಯಿ ಕೊಳಕ ಟೆಂಗಿನಕಾಯಿ' ಎಂದೆಂದು ಪ್ರೇಕ್ಷಕರನ್ನು ನಗಿಸುತ್ತ ಆಟದಲ್ಲಿ ಅವರ ಮನಸ್ಸು ಕೇಂದ್ರೀಕೃತವಾಗಿರುವಂತೆ ನೋಡಿಕೊಳ್ಳುವನು. ಇನ್ನುಳಿದ ಪಾತ್ರಗಳ ಮಾತುಗಳು ಜನಸಾಮಾನ್ಯರಾಡುವ ಸಹಜ ಮಾತುಗಳಂತೆಯೇ ಇರುತ್ತವೆ.

ಸಣ್ಣಾಟಗಳು ಹಬ್ಬ, ಜಾತ್ರೆ, ಗ್ರಾಮದೇವತೆಯ ಪಲ್ಲಕ್ಕಿ ಉತ್ಸವ ಮತ್ತು ಓಕಳಿ ಮುಂತಾದ ಸಂದರ್ಭಗಳಲ್ಲಿ ಪ್ರಯೋಗಗೊಳ್ಳುತ್ತ ಬಂದುದನ್ನರಿಯಬಹುದು. ಇವು ವೃತ್ತಿ ಕಲಾವಿದರಿಂದ ಬೆಳೆದು ಬರದೆ ಇಂಥ ವಿಶೇಷ ಸಂದರ್ಭಗಳಲ್ಲಿ ಮಾತ್ರ ಪ್ರಯೋಗ ಮಾಡುತ್ತಿದ್ದ ಹವ್ಯಾಸಿ ಕಲಾವಿದರಿಂದ ಬೆಳೆದು ಬಂದಿವೆ.

ಸಣ್ಣಾಟಗಳೆಂದಾಗ ನಮ್ಮ ಕಣ್ಣೆದುರು 'ಶ್ರೀಕೃಷ್ಣ ಪಾರಿಜಾತ' 'ಸಂಗ್ಯಾಬಾಳ್ಯಾ' 'ಕಡ್ಲಿಮಟ್ಟಿ ಕಾಶೀಬಾಯಿ' 'ಅಲ್ಲಮಪ್ರಭು' 'ತಿರುನೀಲಕಂಠ' ಮುಂತಾದ ಪ್ರಕಟಗೊಂಡ ಕೆಲವೇ ಆಟಗಳು ಗೋಚರಿಸುತ್ತವೆ. ಆದರೆ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಎಪ್ಪತ್ತಕ್ಕೂ ಮಿಕ್ಕಿ ಸಣ್ಣಾಟಗಳು ರಚನೆಗೊಂಡುದು ತಿಳಿದು ಬರುವುದು.[7] ಆದರೆ ಇವೆಲ್ಲ ಕೈಬರಹದ ಚೋಪಡಿಯಲ್ಲಿವೆ. ಇವೆಲ್ಲ ಪ್ರಕಟವಾಗಬೇಕಿದೆ. ಇವುಗಳಲ್ಲಿ 'ಅರಬರಾಟ' ಮತ್ತು 'ಭೂಕೈಲಾಸ' ಮತ್ತು 'ಚಂದ್ರಶಿರೋಮಣಿ'ಗಳನ್ನು ಡಾ. ಎಂ.ಎಸ್. ಲಠ್ಠೆಯವರು ಇತ್ತೀಚೆಗೆ ಪ್ರಕಟಿಸಿರುವರು. ಸಣ್ಣಾಟಗಳ ರಾಜನೆಂದು ಕರೆಸಿಕೊಂಡ 'ಶ್ರೀಕೃಷ್ಣ ಪಾರಿಜಾತ'ವನ್ನು ರಚಿಸಿದವ ರಾಯಚೂರು ಜಿಲ್ಲೆಯ ಅಪರಾಳ ತಮ್ಮಣ್ಣನೆಂಬುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಗೀತರೂಪದಲ್ಲಿದ್ದ ಇದನ್ನು ಅನಂತರ ಬೆಳಗಾವಿ ಜಿಲ್ಲೆಯ ಕುಲಗೋಡ ತಮ್ಮಣ್ಣ ಪದ್ಯ-ಗದ್ಯ ರೂಪದಲ್ಲಿ ಬರೆದು ಜನಪ್ರಿಯ ಆಟವಾಗಿಸಿದ್ದು ಎಲ್ಲರಿಗೂ ತಿಳಿದ ಸಂಗತಿ.

ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ಈ ಬಗೆಯ ವಸ್ತುವನ್ನೊಳಗೊಂಡ ಸಣ್ಣಾಟಗಳು ಇಲ್ಲಿ ರಚನೆಗೊಂಡುದನ್ನು ಮತ್ತು ಅವು ಒಳಗೊಂಡ ವಸ್ತು ವೈವಿಧ್ಯವನ್ನು ಗಮನಿಸಿದಾಗ, ಈ ಭಾಗ ಸಣ್ಣಾಟಕ್ಕೆ ಗಮನಾರ್ಹ ಕಾಣಿಕೆ ಸಲ್ಲಿಸಿದೆಯೆನ್ನಬಹುದು.

ಪುರಾಣ ಪುರುಷರ ಚರಿತ್ರೆಯನ್ನು ಸಾಮಾನ್ಯ ಜನರಿಗೆ ತಿಳಿಸಲೋಸುಗ ರಚಿತವಾದ ಪೌರಾಣಿಕ ಸಣ್ಣಾಟಗಳಲ್ಲಿ ಬೀದರ ಜಿಲ್ಲೆಯ ಧುಮ್ಮನಸೂರ ಗ್ರಾಮದ ಸಿದ್ಧಪ್ರಭು ಶಿವರಾಮ ಇವರು ರಚಿಸಿದ 'ಭೂಕೈಲಾಸ', 'ಮಾನಸರಾಜ', ಗುಲಬರ್ಗಾ ಜಿಲ್ಲೆಯ ಮಹಾಗಾಂವ ಗುರುಲಿಂಗಸಿದ್ಧ ರಚಿಸಿದ 'ವಿಭೂತಿ ಮಹಿಮೆ', 'ರುದ್ರಾಕ್ಷಿ ಮಹಿಮೆ', ಅಂಬಲಗಿ ಜಗದೇವಪ್ಪ ರಚಿಸಿದ 'ಶುಕಮುನಿ' ಮುಂತಾದವು ಪ್ರಮುಖವಾದುವು. 'ಭೂಕೈಲಾಸ' ಬೀದರ ಜಿಲ್ಲೆಯಾದ್ಯಂತ ಅನೇಕ ಸಲ ಪ್ರಯೋಗಗೊಂಡ ಜನಪ್ರಿಯ ಪೌರಾಣಿಕ ಸಣ್ಣಾಟ. ಇದು ರಾವಣನ ಕಥೆಯನ್ನೊಳಗೊಂಡಿದೆ. ಹನ್ನೆರಡು ವರ್ಷ ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡ ರಾವಣನಿಗೆ ಗರ್ವ ಬರುವುದು. ಆತ ಪಾರ್ವತಿಯನ್ನೇ ಮೋಹಿಸುವನು. ವಿಷ್ಣು - ನಾರದರ ಯುಕ್ತಿಯಿಂದ ಪಾರ್ವತಿ ಮಂಡೋದರಿಯಾದಾಗ ರಾವಣ ಅವಳನ್ನು ಮದುವೆಯಾಗುವನು. ತಾಯಿಯು ಕಳೆದು ಹೋದ ಇಷ್ಟಲಿಂಗವನ್ನು ಮರಳಿ ಪಡೆಯಲು ಆತ ಕೈಲಾಸಕ್ಕೆ ಹೋದನಂತೆ! ಅಲ್ಲಿ ಶಿವನಿಂದ ಆತ್ಮಲಿಂಗ ಪಡೆಯಲು, ಶಿವ ಅದನ್ನು ನೆಲದ ಮೇಲೆ ಇರಿಸಬೇಡವೆಂದು ಹೇಳಿಕಳಿಸಿದನಂತೆ. ಆದರೆ ರಾವಣ ಬರುವಾಗ ಒಬ್ಬ ಹುಡುಗನ

7 ಪೋಲಿಸ ಪಾಟೀಲ ಬಿ.ಎಸ್. : 'ಜಾನಪದ ಭಾರತಿ', ಪುಟ-೮೩.

ಕೈಯಲ್ಲಿ ಅದನ್ನು ಕೊಟ್ಟು ಮೂತ್ರಮಾಡಲು ಹೋಗುವನು. ಆತ ತಿರುಗಿ ಬರುವಷ್ಟರಲ್ಲಿ ಆ ಹುಡುಗ ಅದನ್ನು ನೆಲದ ಮೇಲಿಟ್ಟು ಹೋಗಿದ್ದ. ರಾವಣ ಅದನ್ನೆತ್ತಲು ಎಷ್ಟು ಪ್ರಯತ್ನಿಸಿದರೂ ಅದು ಎತ್ತದಾಗಲು, ಆತನ ಗರ್ವಭಂಗವಾಗುವುದು. ಇದರಿಂದ ಆತ ನಿರಾಶನಾಗಿ ಪ್ರಾಣ ತ್ಯಜಿಸಲು ಸಿದ್ಧನಾಗುವನು. ಆಗ ಶಿವ ಬಂದು ಸ್ವಾಂತನ ಹೇಳಿ, ನೀತಿ ಮಾರ್ಗದಲ್ಲಿ ನಡೆಯಬೇಕೆನ್ನುವನು. ಲಂಕಾದ ಆಳ್ವಿಕೆಯೇ ನನಗಿನ್ನು ಸಾಕು ನೀಲಕಂಠನೇ ನನಗೆ ಮುಕ್ತಿ ದಯಪಾಲಿಸೆಂದು ಬೇಡಿಕೊಳ್ಳುವನು. ಮುಕ್ತಿ ಪದವಿ ಕೊಡಲಿಕ್ಕೆ ನಿನಗೀಗ ಸ್ಥಳವೇ ಇಲ್ಲ. ನಿನ್ನ ಕಾರ್ಯಕ್ಕೆ ಪ್ರತಿಫಲವಾಗಿ ಅದು ಮುಂಧೆ ಲಭಿಸುವುದೆಂದು ಹೇಳಿ ಶಿವ ಅದೃಶ್ಯನಾಗುವನು. ಇದಿಷ್ಟು ಈ ಆಟದ ಕಥೆ.

ಈ ಪ್ರದೇಶದಲ್ಲಿ ಉರ್ದು ಮಾತಾಡುವ ಜನ ವಿಫುಲವಾಗಿರುವುದರಿಂದ ವಾಗಿರುವುದರಿಂದ ಅವರಿಗೂ ತನ್ನ ಆಟ ತಿಳಿಯಲೆಂದು ಕವಿ ಅನೇಕ ಉರ್ದು ಶ್ಲೋಕಗಳನ್ನು ನಡುನಡುವೆ ಔಚಿತ್ಯವರಿತು ಸೇರಿಸಿದ್ದಾನೆ. ಒಂದನ್ನಿಲ್ಲಿ ನೋಡಬಹುದು-
'ಮೇರಾ ನಜರಮೆ ಕೋಹಿ ಚೀಜ ನಹಿ ಸೋಚ ಸಮಜಕರ ಚಲನಾ ಪಾರ್ಬತಿ ಛೋಟೆ ಬಡೆ ದೇವತಾಕೆ ಸಾಮನೆ ಹೋ ಜಾಯೇಂಗೆ ಫಜೀತಿ'[8]

ಐತಿಹಾಸಿಕ ವ್ಯಕ್ತಿಗಳಾದ ಶರಣರ, ಸಂತರ, ಕವಿಗಳ ಮತ್ತು ಸತ್ಪುರುಷರ ಉದಾತ್ತ ಬದುಕಿನ ಆದರ್ಶಗಳು ಈ ನಾಡಿನ ಸಾಮಾನ್ಯಜನತೆಯ ಬಾಳಿಗೆ ದಾರಿ ದೀವಿಗೆಯಾಗಲಿ ಎಂದು ಕೆಲಕವಿಗಳು ಐತಿಹಾಸಿಕ ಸಣ್ಣಾಟಗಳನ್ನು ರಚಿಸಿದುದುಂಟು. ಅವುಗಳಲ್ಲಿ ಮುಡುಬಿಯ ಅಂದಯ್ಯಪ್ಪನ 'ಭಕ್ತಕುಂಬಾರ' ಬೇಡ ತುಕಾರಾಮ ಮತ್ತು ಮಾಡ್ಯಾಳ ಕೃಷ್ಣಾಜಿಯವರ 'ಖಂಡಿಕವಿ ಕಬೀರದಾಸ' ಓಕಳಿಯ ಚೆನ್ನಬಸಯ್ಯಸ್ವಾಮಿ, ಕಾಂಭಾಸಗಿಯ ರೇವಣಸಿದ್ಧಯ್ಯಸ್ವಾಮಿ ಮತ್ತು ಸಾವಳಗಿ ಮಹಮ್ಮದಸಾಬ ಈ ಮೂವರೂ ರಚಿಸಿದ 'ಜಗಜ್ಯೋತಿ ಬಸವಣ್ಣ' ಅಂಬಲಗಿ ಜಗದೇವಪ್ಪನ 'ಪ್ರಭುಲಿಂಗ' ಪ್ರಮುಖವಾದುವು. ಮತ್ತು ಹುಚ್ಚಗಂಡನೊಡನೆ ಪತಿವ್ರತಾಧರ್ಮದಿಂದ ಬಾಳಿದ 'ಹೇಮರಡ್ಡಿಮಲ್ಲಮ್ಮ'ನನ್ನು ಕುರಿತು ಸರೋನಾದ ಹೈದರಸಾಬನು ರಚಿಸಿದ ಸಣ್ಣಾಟವಂತೂ ಈ ಭಾಗದಲ್ಲಿ ಅತ್ಯಂತ ಜನಪ್ರಿಯವಾಗಿದೆ.

ಸಾಮಾಜಿಕ ಸಣ್ಣಾಟಗಳಿಗಂತೂ ಇಲ್ಲಿ ಕೊರತೆಯಿಲ್ಲ. ಜೀವನದ ವಿವಿಧ ಮುಖಗಳನ್ನು ಪ್ರದರ್ಶಿಸುವ, ವಿವಿಧ ಸಮಸ್ಯೆಗಳನ್ನು ಬಿಂಬಿಸುವ ಆಧುನಿಕ ಸಾಮಾ

---

8. ಲತ್ತೆ ಎಂ. ಎಸ್. ಕಾಶೀನಾಥರೆಡ್ಡಿ. (ಸಂ) ಭೂಕೈಲಾಸ ಮತ್ತು ಚಂದ್ರಶಿರೋಮಣಿ ಪುಟ ೨೪.

ಕ ನಾಟಕಗಳನ್ನು ಹೋಲುವ ಸಣ್ಣಾಟಗಳು ಇಲ್ಲಿ ಅಧಿಕ ಸಂಖ್ಯೆಯಲ್ಲಿ ರಚನೆಗೊಂಡು ಂದು ವೈಶಿಷ್ಟ್ಯವೇ ಆಗಿದೆ. ಅವುಗಳಲ್ಲಿ ಪ್ರಮುಖವಾದುವೆಂದರೆ ನಾಗೂರ ಯಿಬಣ್ಣನ ನೀಲಕಂಠರಾಜ ಬೇನೂರ ಭವಾನಸಿಂಗನ 'ಮದನಮಂಜರಿ', 'ತಾರಾ ಲಿ' ಮತ್ತು 'ನನ್ನ ಭೂಮಿ' ಐನಾಪುರ ಮಾರುತಿಯ 'ಗುಣವಂತಿ', ಕುರಕೋಟಾ ಸವಣ್ಣನ 'ಗುಣಶೇಖರರಾಜ', ಹೆಬ್ಬಾಳ ಗುರುಪಾದಪ್ಪ ಜೋಗಟೆಯ 'ಗುಣವಂತಿ- ಣರೂಪ', ದೊಡ್ಡಗೋರಟಾದ ಶಿವಲಿಂಗಸ್ವಾಮಿಯ 'ಸತ್ವಪರೀಕ್ಷೆ', ದೇಗಾಂವ ಹಾಲಿಂಗನ 'ಶಿವಿ' ಸಲಗರ ಸಿದ್ರಾಮಪ್ಪನ 'ಧರ್ಮಪಾಲ-ಗುಣಶೀಲ' ಖೇಳಗಿ ರಪ್ಪನ 'ನಂದಗೋಪಾಲ' ಧುಮ್ಮನಸೂರ ಸಿದ್ಧಪ್ರಭುವಿನ 'ಚಂದ್ರಶಿರೋಮಣಿ' ಕಳಿ ಚೆನ್ನಬಸವಯ್ಯನ 'ಶಿವಕಾಂತರಾಜ', ಅಂಬಲಗಿ ಜಗದೇವಪ್ಪನ 'ಚಿತರಂಗಿ', ೇನ್ ಚಿಂಚೋಳಿ ಗಿರೆಪ್ಪ ಜಮಾದಾರನ 'ಬಂಧುಪ್ರೇಮ' ಮುಂತಾದುವು.

ಜನಪದರು ಸತ್ಯ, ನ್ಯಾಯ, ನಿಷ್ಠೆ, ಪ್ರಾಮಾಣಿಕತೆ, ಪ್ರೀತಿ, ವಿಶ್ವಾಸ, ಕರುಣೆ ಮುಂತಾದ ಮೌಲ್ಯಗಳನ್ನು ನಂಬಿ ಇವನ್ನೆಲ್ಲ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಂದವರು. ಸ್ತ್ರೀಯರಂತೂ ಪತಿಯೇ ದೈವವೆಂದು ನಂಬಿದವರು. ಜೀವನಕ್ಕಿಂತಲೂ ಪತಿವ್ರತಾಧರ್ಮಕ್ಕೇ ಮಹತ್ವವಿತ್ತವರು. ಪಾತಿವ್ರತ್ಯದ ಪ್ರಭಾವವನ್ನು ಬಿಂಬಿಸುವ ಸಣ್ಣಾಟಗಳೂ ಇಲ್ಲಿ ರಚನೆಗೊಂಡಿವೆ. ಅವುಗಳಲ್ಲಿ 'ಗುಣವಂತಿ' ಮತ್ತು 'ನನ್ನ ಭೂಮಿ'ಗಳನ್ನು ಹೆಸರಿಸಬಹುದು. ಗುಣವಂತಿಯ ತಂದೆ ಗುಣಶೀಲ. ಆತ ಒಮ್ಮೆ ಮಗಳೊಬ್ಬಳನ್ನೇ ಮನೆಯಲ್ಲಿ ಬಿಟ್ಟು ವ್ಯಾಪಾರಕ್ಕೆ ಹೋಗಿದ್ದ. ಆಗ ಗುಣವಂತಿಯ ಮೇಲೆ ಆ ಊರಿನ ಅರಸ ಕಣ್ಣಿಟ್ಟು ಬಲಾತ್ಕಾರ ಮಾಡಲೆಳಸುವನು. ಆಗ ಆಕೆ ಉಪಾಯ ಮಾಡಿ ಆತನಿಂದ ಪಾರಾಗಿ ಅಡವಿ ಸೇರುವಳು. ಅಲ್ಲಿ ಅವಳು ವೇಷ ಬದಲಿಸಿಕೊಂಡು ಕಾಲಹರಣ ಮಾಡುವಳು. ಪಾತಿವ್ರತ್ಯ ಕಾಯ್ದುಕೊಳ್ಳಲು ಗುಣ ವಂತಿ ಅಡವಿ ಸೇರಿ ಒದುಕಿದಂದು ಮಹಿಳೆಯರಿಗೆ ಆದರ್ಶವಾಗಿದೆ.

ಸಮಾಜವೆಂದಾಗ ಒಳ್ಳೆಯವರೂ ಕೆಟ್ಟವರೂ ಇರುವವರೇ. ಸ್ತ್ರೀಯರೆಲ್ಲರೂ ಪತಿವ್ರತೆಯರೇ ಇರುತ್ತಾರೆಂದಲ್ಲ, ಪಾತಿವ್ರತ್ಯ ಜೀವಕ್ಕಿಂತಲೂ ಮಿಗಿಲೆಂದು ತಿಳಿದು ಅದನ್ನು ಕಾಪಾಡಿಕೊಂಡು ಬಂದ ಸ್ತ್ರೀಯರಿದ್ದಂತೆ ಪರಪುರುಷರನ್ನು ಕಂಡು ಮೋಹ ಗೊಂಡು ಹಾದರಕ್ಕೆಳಸುವ ಕೆಲ ಸ್ತ್ರೀಯರೂ ಇರುವುದುಂಟು. ಇಂಥವರನ್ನು ಕುರಿತು ರಚನೆಗೊಂಡ ಸಣ್ಣಾಟಗಳೆಂದರೆ 'ತಾರಾಮಲಿ', 'ಮದನಮಂಜರಿ' ಮತ್ತು 'ಶಿವಕಾಂತ ರಾಜ' ತಾರಾಮಲಿಯು ಪತಿ ಮಕ್ಕಳನ್ನು ಪಡೆಯಲು ತಪಸ್ಸಿಗೆ ತೆರಳಿದಾಗ ಆಕೆ ತನ್ನ ಮೈದುನನನ್ನು ಮೋಹಿಸಿ ಸರಸಕ್ಕೆ ಕರೆಯುವಳು. ಆತ ನಿರಾಕರಿಸುವನು. ನಾರಿ ಮುನಿದರೆ ಮಾರಿ ಎನ್ನುವಂತೆ ತನ್ನ ಪತಿ ಬಂದೊಡನೆ ಮೈದುನ ಬಲಾತ್ಕರಿಸಲು ಬಂದಿದ್ದನೆಂದು ಆತನ ಮೇಲೆ ಅಪವಾದ ಹೊರಿಸಿ ಆತನನ್ನು ಹೊರಗೆ ಹಾಕಿಸುವಳು.

ಮಂಜರಿ ಎಂಬ ಗುರುವಿನ ಮಗಳು ತನ್ನ ತಂದೆಯ ಶಿಷ್ಯ ಮದನನನ್ನು ಮೋಹಿಸಿ ಸರಸಕ್ಕೆ ಕರೆಯುವಳು. ಆತ ನಿರಾಕರಿಸಲು ಆತನನ್ನು ಬಲಾತ್ಕರಿಸಲು ಹೋಗಿ ವಿಫಲಳಾಗುವಳು. ಈ ಅವಮಾನ ಸಹಿಸದ ಆಕೆ ಆತನ ಮೇಲೆ ಅಪವಾದ ಹೊರಿಸಿ ಶಿರಛೇದನ ಮಾಡಿಸುವಳು. 'ಶಿವಕಾಂತರಾಜ' ಎಂಬ ಸಣ್ಣಾಟದಲ್ಲಿ, ಮಲಮಗನ ಮೇಲೆ ಮೋಹಗೊಂಡ ತಾಯಿಯೊಬ್ಬಳು ಆತನನ್ನು ಸರಸಕ್ಕೆ ಕರೆಯುವಳು. ಆಗ ಆತನು ನಿರಾಕರಿಸಲು, ಪತಿಯ ಕಿವಿಯೂದಿ ಆಕೆ ಆತನನ್ನು ಕಾಡಿಗಟ್ಟುವಳು. ಸ್ತ್ರೀಯ ಕಾಮವಾಸನೆ ಮಧುರವಾದ ಕುಟುಂಬವನ್ನು ಛಿದ್ರಗೊಳಿಸಿ ಅತ್ಯಂತ ಧಾರುಣ ಗೊಳಿಸುವ ಚಿತ್ರವನ್ನು ಈ ಸಣ್ಣಾಟಗಳು ಪರಿಣಾಮಕಾರಿಯಾಗಿ ಹಿಡಿದಿಟ್ಟಿವೆ. ಕಾಮುಕರಾದ ಬಿಡುನಡೆಯ ಸ್ತ್ರೀಕುಲಕ್ಕೇ ಇವು ಬುದ್ಧಿವಾದ ನೀತಿಬೋಧೆ ಮಾಡುವ ಗುರಿ ಹೊಂದಿರುವುದು ಸ್ಪಷ್ಟವಿದೆ.

ಈ ಪ್ರದೇಶದಲ್ಲಿ ಅತ್ಯಂತ ಪ್ರಸಿದ್ಧಿ ಪಡೆದ ಸಣ್ಣಾಟವೆಂದರೆ 'ಗುಣವಂತಿ - ಗುಣಲೋಪ' ಗುಣವಂತಿ ಹೆಸರಿಗೆ ತಕ್ಕಂತೆ ಆದರ್ಶ ಸತಿ, ಗುಣಲೋಪ ವಿಷಯ ಲಂಪಟ, ವೇಶ್ಯಾಗಮನಿ. ಈತ ಪತ್ನಿಯನ್ನು ತವರಿನಲ್ಲೇ ಬಿಟ್ಟು ಸಿಂತ್ರಾಸೈನಿ ಎಂಬ ಬೆಲೆವೆಣ್ಣಿನ ಬೆನ್ನು ಹತ್ತಿ ಆಕೆ ಬೇಡಿದ್ದನ್ನೆಲ್ಲಾ ಕೊಡುತ್ತಾ ಹೋಗುವನು. ಈತನ ಹತ್ತಿರವಿದ್ದ ಧನವೆಲ್ಲ ತೀರಲು ಹೆಂಡತಿಯ ಮೈಮೇಲಿನ ಒಡವೆಗಳನ್ನೆಲ್ಲ ಕದ್ದೊಯ್ದು ಕೊಡುವನು. ಕೊನೆಗೆ ಈತನ ಹತ್ತಿರ ಏನೂ ಇಲ್ಲದಾಗಲು, ಆ ವೇಶ್ಯೆ ಇವನನ್ನು ತಿರಸ್ಕರಿಸುವಳು. ಸಾಹುಕಾರನಾಗಿ ಮೆರೆದ ಈತ ಆ ಊರಲ್ಲೇ ಭಿಕ್ಷೆ ಬೇಡತೊಡಗು ವನು. ಇದನ್ನು ಕಂಡು ಗುಣವಂತಿ ತಾನು ದುಡಿದು ಈತನನ್ನು ಸಾಕುವಳು. ವೇಶ್ಯಾ ಸಂಗದಿಂದ ಮನುಷ್ಯ ಹೇಗೆ ಅಧಃಪತನಹೊಂದುವನೆಂಬುದನ್ನು ಈ ಆಟ ಅತ್ಯಂತ ಮಾರ್ಮಿಕವಾಗಿ ತಿಳಿಸುವುದು. ಇಟ್ಟುಕೊಂಡವಳೆಷ್ಟು ದಿನ? ಕಟ್ಟಿಕೊಂಡವಳೇ ಕಡೆ ತನಕ ಎಂಬ ಸಾರ್ವತ್ರಿಕ ಸತ್ಯವನ್ನು, ನೀತಿಯನ್ನು ಇದು ಸಾರುವುದು.

ಸಣ್ಣಾಟಗಳು ಈ ಭಾಗದಲ್ಲಿ ಒಂದು ಕಾಲಕ್ಕೆ ರಚನೆಗೊಂಡು ಈಗ ನಿಂತಿವೆ ಯೆಂದಲ್ಲ. ಈಗಲೂ ಇವು ರಚನೆಗೊಳ್ಳುತ್ತಲೇ ಇವೆ. ಇದಕ್ಕೆ ಇತ್ತೀಚೆಗೆ ರಚನೆ ಗೊಂಡ ಡಾ. ಚೆನ್ನಣ್ಣ ವಾಲೀಕಾರ ಅವರ 'ಸೋಮರಾಯ-ಭೀಮರಾಯ' ಮತ್ತು 'ಅಯ್ಯ ಮಾಡಿದ್ದು ಕೈಯ್ಯಮ್ಯಾಲೆ'ಂಬ ಡಪ್ಪಿನಾಟಗಳೇ ಸಾಕ್ಷಿ. ಸೋಮರಾಯ ಭೀಮರಾಯರು ಆತ್ಮೀಯ ಗೆಳೆಯರು. ಕುಸ್ತಿಪಟುಗಳು ಭೀಮರಾಯನದು ಮದುವೆ ಆಗಿತ್ತು. ಸೋಮರಾಯನದು ಆಗಿರಲಿಲ್ಲ. ಒಂದು ದಿನ ಸೋಮರಾಯ ಬಟ್ಟೆ ಒಗೆಯಲೆಂದು ಬಂದ ಭೀಮರಾಯನ ಹೆಂಡತಿಯನ್ನು ಕಂಡ. ಅವಳ ಸೌಂದರ್ಯಕ್ಕೆ ಮರುಳಾಗಿ ಆಕೆಯ ಮನೆಯನ್ನೂ ಗುರುತುಮಾಡಿಕೊಂಡ. ಈ ವಿಷಯವನ್ನು ಗೆಳೆಯ ಭೀಮರಾಯನಿಗೆ ತಿಳಿಸಲು, ಆತ ಆಕೆ ಯಾರು ತೋರಿಸೆನ್ನುವನು. ಆಗಲಿ

ಎಂದು ಸೋಮರಾಯ ಆಕೆಯ ಮನೆಗೆ ಕರೆದೊಯ್ಯಲು ಭೀಮರಾಯನಿಗೆ ವ್ಯಥೆ ಯಾದರೂ ಅದನ್ನು ತೋರಗೊಡದೆ ಒಳಹೋಗಿ ಪತ್ನಿಯನ್ನು ಒಪ್ಪಿಸಿ ಬಂದ. ಪತಿ ಯಾಣತಿಯನ್ನು ಮೀರದೆ ಆಕೆ ಒಪ್ಪಿಕೊಳ್ಳುವಳು. ಸೋಮರಾಯನಿಗೆ ಭೀಮರಾಯ ನೀನು ಬೆಳಿಗ್ಗೆ ಐದು ಗಂಟೆಗೆ ಗರಡಿಮನೆಗೆ ಬಾ ಎಂದು ಹೇಳಿ ಹೋಗುವನು. ಸೋಮ ರಾಯ ಆಕೆಯ ಮನೆ ಒಳಗಡೆ ಹೋಗುವನು. ಅಲ್ಲಿರುವ ತಲವಾರ, ತಂಬಿಗೆ ಇವನ್ನೆಲ್ಲ ನೋಡಿ ಆತನಿಗೆ ಆಶ್ಚರ್ಯವಾಗುವುದು. ಅದು ತನ್ನ ಗೆಳೆಯನ ಮನೆಯೇ ಎಂದು ಖಚಿತವಾಗುವುದು. ನಾನೆಂಥ ಹೇಯ ಕೆಲಸಕ್ಕೆಳಿಸಿದನಲ್ಲಾ, ಇನ್ನು ಆತನಿಗೆ ಹೇಗೆ ಮುಖ ತೋರಿಸಲಿ ಎಂದು ಪಶ್ಚಾತ್ತಾಪ ಪಡುತ್ತ ಅಲ್ಲಿಯೇ ಇದ್ದ ಖಡ್ಗದಿಂದ ಇರಿದುಕೊಂಡುಬಿಡುವನು. ತಾನೇ ಆತನನ್ನು ಕೊಂದನೆಂಬ ಜನಾಪವಾದ ಬರುವು ದೆಂದು ಆಕೆಯೂ ಅದೇ ಖಡ್ಗದಿಂದಿರಿದುಕೊಳ್ಳುವಳು. ಅತ್ತ ಭೀಮರಾಯ ಸೋಮರಾಯ ಬರಲಿಲ್ಲವೆಂದು ಮನೆಗೆ ಬರುವನು. ಅಲ್ಲಿ ಶವವಾಗಿ ಬಿದ್ದ ಈರ್ವರನ್ನೂ ಕಂಡು ಸಹಿಸಲಾಗದೆ ತಾನೂ ಖಡ್ಗದಿಂದಿರಿದುಕೊಳ್ಳುವನು. ಇದಿಷ್ಟು ಸ್ಥೂಲವಾಗಿ ಇದರ ಕಥೆ.

ಈ ಸಣ್ಣಾಟವನ್ನು ಡಾ. ವಾಲೀಕಾರರು ಈ ಭಾಗದಲ್ಲಿ ಪ್ರಚಲಿತವಿದ್ದ ಜನಪದ ಕಥೆಯೊಂದನ್ನಾಧರಿಸಿ ರಚಿಸಿರುವರು. ಮೂಲಕಥೆಯಲ್ಲಿ ಭೀಮರಾಯ ಈರ್ವರೂ ಶವವಾಗಿ ಬಿದ್ದದನ್ನು ಕಂಡು ತಾನೂ ಖಡ್ಗದಿಂದಿರಿದುಕೊಳ್ಳಲಣಿಯಾದಾಗ ಶಿವ ಪ್ರತ್ಯಕ್ಷನಾಗಿ ಅವರನ್ನು ಬದುಕಿಸಿದನೆಂದಿದೆ. ಈ ಅಂಶವನ್ನು ಕೈಬಿಟ್ಟು ಡಾ. ವಾಲೀ ಕಾರರು ಭೀಮರಾಯನೂ ಆತ್ಮಾಹುತಿಮಾಡಿಕೊಳ್ಳುವನೆಂದು ಮಾರ್ಪಾಟು ಮಾಡಿ ಕೊಳ್ಳುವುದರ ಮೂಲಕ ಸುಖಾಂತವಾಗುವುದನ್ನು ದುಃಖಾಂತವಾಗಿಸಿದ್ದಾರೆ. ಇದ ರಿಂದ ಸಣ್ಣಾಟಕ್ಕೆ ವಾಸ್ತವಿಕ ಕಳೆ ಬಂದಿದೆ. ಗದ್ಯ ಪದ್ಯಗಳ ಸಮ್ಮಿಶ್ರಣದೊಂದಿಗೆ ಕಥೆ ಮುಂದುವರಿದರೂ ಇಲ್ಲಿ ಪದ್ಯಕ್ಕೆ ಪ್ರಾಶಸ್ತ್ಯ ಸಿಕ್ಕಿದೆ. ಗೆಳೆಯರ ಪರಸ್ಪರ ತ್ಯಾಗ ಮನೋಭಾವನೆಯೇ ಈ ಸಣ್ಣಾಟದ ತಿರುಳು. ಜನಪದರು ಸ್ನೇಹಕ್ಕಾಗಿ ಏನೆಲ್ಲವನ್ನೂ ಅಂಥ ಬಿಕ್ಕಟ್ಟಿನ ಪ್ರಸಂಗವೊದಗಿದರೆ ಜೀವವನ್ನೂ ತ್ಯಜಿಸಲು ಹಿಂದೆಗೆಯರೆಂಬುದನ್ನು ಈ ಸಣ್ಣಾಟ ಅತ್ಯಂತ ಪರಿಣಾಮಕಾರಿಯಾಗಿ ತಿಳಿಯಪಡಿಸುವುದು.

ಇವರ 'ಅಯ್ಯಮಾಡಿದ್ದು ಕೈಯ್ಯಮ್ಯಾಲೆಂಬ' ಡಪ್ಪಿನಾಟವೂ ಜನಪದ ಕಥೆ ಯೊಂದನ್ನಾಧರಿಸಿ ರಚಿಸಿದಂಥದು. ಕುರುಬನೊಬ್ಬ ಎತ್ತು ತರಲೆಂದು ಮೂರು ಸಾವಿರ ರೂಪಾಯಿ ತೆಗೆದುಕೊಂಡು ತೆರೆಯೂರಿಗೆ ಹೊರಟುನಿಂತಾಗ ಆತನಿಗೆ ರಾತ್ರಿ ಅಲ್ಲಿ ಎಲ್ಲಿ ಇಳಿದುಕೊಳ್ಳಬೇಕೆಂಬ ಚಿಂತೆಯಾಗುವುದು. ಆ ಊರಿನ ಸ್ವಾಮಿಯೊಬ್ಬ ನನಗೊಬ್ಬ ಅಯ್ಯನ ಪರಿಚಯವಿದೆ ನಿನಗೊಂದು ಪತ್ರ ಕೊಡುವೆನೆನ್ನುವನು. ಕುರುಬ ಆತನಿಂದ ಪತ್ರ ಪಡೆದುಕೊಂಡು ಆ ಊರಿಗೆ ಬರುವನು, ಆ ಪತ್ರ ಕೊಟ್ಟು ಅಯ್ಯ

ನಿಗೆ ತಾನು ಬಂದ ಕಾರಣ ತಿಳಿಸುವನು. ಈತ ಮೂರು ಸಾವಿರ ರೂಪಾಯಿ ತಂದುದನ್ನು ತಿಳಿದು ಅಯ್ಯನ ಬಾಯಲ್ಲಿ ನೀರೂರುವವು. ಮಲಗಿಕೊಳ್ಳಲು ಆತನಿಗೊಂದು ಸ್ಥಳ ತೋರಿಸುವನು. ಹಣದಾಸೆಗಾಗಿ ಆತನನ್ನು ಅಲ್ಲೇ ಮುಗಿಸಿಬಿಡಬೇಕೆಂದು ಅಯ್ಯ ಕೆಲ ಗೂಂಡಾಗಳನ್ನು ಕರೆಸಿ ಆತ ಮಲಗಿಕೊಂಡ ಸ್ಥಳವನ್ನು ತೋರಿಸುವನು. ಅಂದೇ ರಾತ್ರಿ ತನ್ನ ಪ್ರೇಯಸಿಯೊಂದಿಗೆ ಓಡಿಹೋಗಬೇಕೆಂದು ಮೊದಲೇ ಯೋಜಿಸಿದ ಅಯ್ಯನ ಮಗ ರಾತ್ರಿ ಎದ್ದು ಆ ಕುರುಬನನ್ನು ಆಚೆ ಸರಿಸಿ ಆ ಸ್ಥಳದಲ್ಲಿ ತಾನು ಮಲಗಿಕೊಳ್ಳುವನು. ಆತನ ಪ್ರೇಯಸಿಯ ಮನೆಯಲ್ಲಿ ಆದಿನ ಒಬ್ಬರಿಗೆ ಚೇಳು ಕಡಿದುದರಿಂದ ಆಕೆ ಬರಲಿಲ್ಲ. ಗೂಂಡಾಗಳು ರಾತ್ರಿ ಬಂದ ಮೊದಲೆ ಮಾತು ಕೊಟ್ಟಂತೆ ಅಯ್ಯನ ಮಗನನ್ನೇ ಕುರುಬನೆಂದು ತಿಳಿದು ಆತನ ರುಂಡವನ್ನು ಕತ್ತರಿಸಿ ಅಯ್ಯನ ಬಳಿಗೊಯ್ದು ತೋರಿಸುವರು. ತಾನು ಮಾಡಿದ್ದು ತನಗೇ ತಿರುಮಂತ್ರವಾಯ್ತೆಂದು ಅಯ್ಯ ಗೋಳಾಡುವನು. ಅಯ್ಯನ ಮಗ ತನ್ನ ಪ್ರೇಯಸಿಯೊಂದಿಗೆ ಓಡಿಹೋಗಲೆಂದು ಹೊರಗೆ ಬಂದು ಮಲಗಿದ್ದು ಮೂಲ ಕಥೆಯಲ್ಲಿಲ್ಲ. ಅಲ್ಲಿ, ಒಳಗೆ ಶಕೆಯಾದುದರಿಂದ ಸಹಜವಾಗಿ ಹೊರಗೆ ಬಂದು ಮಲಗಿಕೊಳ್ಳುವನೆಂದಿದೆ. ಈ ಅಂಶವನ್ನು ಬದಲಿಸಿ ಡಾ. ವಾಲೀಕಾರರು ಆಟ ಪರಿಣಾಮಕಾರಿಯಾಗಲೆಂದು ಯತ್ನಿಸಿದುದನ್ನಿಲ್ಲಿ ಕಾಣುವೆವು. ಇಲ್ಲೂ ಪದ್ಯಗಳಿಗೇ ಪ್ರಾಶಸ್ತ್ಯ ಸಿಕ್ಕಿದೆ.

ಹೀಗೆ ಸಮಾಜದಲ್ಲಿನ ಅರೆ-ಕೊರೆ, ಲೋಪ-ದೋಷಗಳನ್ನೆತ್ತಿ ತೋರಿಸುವ, ಮಾನವ ಸ್ವಭಾವವನ್ನು ದೌರ್ಬಲ್ಯವನ್ನು ಚಿತ್ರಿಸುವ ಸ್ನೇಹ, ತ್ಯಾಗ, ಪ್ರಾಮಾಣಿಕತೆ, ಸತ್ಯ ಮುಂತಾದ ಜೀವನ ಮೌಲ್ಯಗಳನ್ನು ಆದರ್ಶಗಳನ್ನು ಬಿತ್ತರಿಸುವ ಈ ಭಾಗದ ಕೆಲ ಸಣ್ಣಾಟಗಳನ್ನು ನೋಡಿದೆವು. ಇದು ಒಂದು ಕಿರುನೋಟ ಅಷ್ಟೇ. ಈ ಭಾಗದ ಸಣ್ಣಾಟಗಳು ಹಿಂದೆಯೇ ಹೇಳಿದಂತೆ ವೃತ್ತಿರಂಗಭೂಮಿಯ ಸಾಮಾಜಿಕ ನಾಟಕಗಳನ್ನು ಹೋಲುವುದೊಂದು ವೈಶಿಷ್ಟ್ಯವೇ ಆಗಿದೆ. ಕಾಲಕ್ಕೆ ತಕ್ಕಂತೆ ಅವುಗಳ ಕಥಾವಸ್ತುವಿನಲ್ಲೂ ಬದಲಾವಣೆಯಾಗುತ್ತ ಬಂದುದನ್ನು ಗುರುತಿಸುವೆವು. ಒಂದರ್ಥದಲ್ಲಿ ಇವು ಸಾಮಾನ್ಯಜನತೆಗೆ ನೈತಿಕ-ಶಿಕ್ಷಣವನ್ನು ನೀಡುವ ಕಾರ್ಯ ಮಾಡುತ್ತಾ ಬಂದಿವೆಯೆನ್ನಬಹುದು. ಸಣ್ಣಾಟ ಒಟ್ಟಾರೆಯಾಗಿ ಈ ಭಾಗದ ಜನಪದ ರಂಗಭೂಮಿಯ ಒಂದು ಜನಪ್ರಿಯ ಕಲಾಪ್ರಕಾರವಾಗಿ ಬೆಳೆದುಬಂದುದನ್ನು ಗುರುತಿಸುವೆವು.

'ಶೋಕಾಚರಣೆ' : ಒಂದು ಟಿಪ್ಪಣಿ

ಜಿ. ಆರ್. ತಿಪ್ಪೇಸ್ವಾಮಿ

ಸತ್ತವರಿಗಾಗಿ ದುಃಖಿಸುವ ಪದ್ಧತಿಯನ್ನು ರೂಢಿಕೊಂಡಿರುವ ಸಮಾಜಗಳಲ್ಲಿ ಆ ಸಮಾಜಗಳ ಹಾಗೂ ಶೋಕಿಸುತ್ತಿರುವ ವ್ಯಕ್ತಿಗಳ ಸಾಮಾಜಿಕ ಅಂತಸ್ತುಗಳ ನಡುವೆ ಇರುವಷ್ಟೇ ಭಿನ್ನತೆ ಶೋಕಾಭಿವ್ಯಕ್ತಿಯ ವಿಧಾನಗಳಲ್ಲೂ ಇದೆ. ಅನೇಕರು ಶೋಕವನ್ನು ಸಾಂಪ್ರದಾಯಿಕಗೊಳಿಸುವ ದೃಷ್ಟಿಯನ್ನು ತೋರಿದ್ದಾರೆ. ಆದ್ದರಿಂದ ಕೆಲವೊಮ್ಮೆ ನಿಜಸಂಗತಿಯನ್ನು ಮರೆಮಾಚುವುದಕ್ಕಾಗಿ ಹೂಗಳನ್ನು ಕಳಿಸುವುದು, ಧರ್ಮಾರ್ಥಕ್ಕಾಗಿ ಮೃತರ ಕುಟುಂಬಕ್ಕೆ ಕಾಣಿಕೆಗಳನ್ನು ಕೊಡುವುದು ಮತ್ತು ಪರಲೋಕಕ್ಕೆ ಪ್ರಯಾಣ ಮಾಡಲಿರುವ ಆತ್ಮದ ಜೊತೆಗಾಗಿ ಸಾಂಕೇತಿಕವಾದ ಕಾಣಿಕೆಗಳನ್ನು ಕೊಡುವುದು ರೂಢಿಯಾಗಿದೆ. ಕೆಲವು ಸಮುದಾಯಗಳಲ್ಲಿ ಸ್ವಯಂಪ್ರೇರಿತವಾದ ದುಃಖದ ಅಭಿವ್ಯಕ್ತಿಯನ್ನು ಸಾಂಪ್ರದಾಯಿಕಗೊಳಿಸಲಾಗದೆ. ಮೃತನ ಕುಟುಂಬದ ಹಿರಿಯ ಅಥವಾ ಇಡೀ ಕುಟುಂಬ ಕೆಲವು ದಿನಗಳ ಕಾಲ ಇಲ್ಲವೇ ಕೆಲವು ವಾರಗಳ ಕಾಲ ಶೋಕಿಸಬೇಕು. ಮತ್ತು ಅನೇಕ ವರ್ಷಗಳ ಕಾಲ ನಿರ್ದಿಷ್ಟ ಅವಧಿಗಳ ಅಂತರದಲ್ಲಿ ಶೋಕವನ್ನು ಮರುಕಳಿಸಿಕೊಳ್ಳಬೇಕು ಎಂದು ನಿರೀಕ್ಷಿಸಲಾಗುತ್ತದೆ. ಶೋಕವು ಅಳುವುದನ್ನು, ಪ್ರಲಾಪಿಸುವುದನ್ನು, ತಲೆ ಬಡಿದುಕೊಳ್ಳುವುದನ್ನು ದೇಹ ಮತ್ತು ಬಟ್ಟೆಗಳನ್ನು ಮಣ್ಣು ಮಾಡಿಕೊಳ್ಳುವುದನ್ನು, ಆಹಾರ ತ್ಯಜಿಸುವುದನ್ನು, ಚಿಂದಿಯಾದ ಅಥವಾ ಕೊಳಕಾದ ಬಟ್ಟೆ ಧರಿಸುವುದನ್ನು ಒಳಗೊಳ್ಳುತ್ತದೆ.

ಅನೇಕ ಬುಡಕಟ್ಟುಗಳಲ್ಲಿ ಸಾವು ಸಂಭವಿಸಿದ ನಂತರ ನಿರ್ದಿಷ್ಟ ದಿನಗಳವರೆಗೆ ರಕ್ತಸಂಬಂಧಿಗಳು ಉಪವಾಸ ಮಾಡುತ್ತಾರೆ ಅಥವಾ ಮಾಂಸ, ಉಪ್ಪು, ಎಣ್ಣೆ, ನೀರು - ಇಂಥವುಗಳನ್ನು ಅವರು ಮುಟ್ಟುವುದಿಲ್ಲ. ಅವರು ತಮ್ಮ ಕೂದಲನ್ನು ತೊಳೆಯುದೆ. ಹೊಸ ಬಟ್ಟೆಗಳನ್ನು ಧರಿಸದೆ, ಪುರುಷನ್ನು ಬೇಟೆಮಾಡದೆ ಹೆಂಗಸು, ಕಾಡಿನಲ್ಲಿ ಆಹಾರ ಸಂಗ್ರಹಣೆ ನಡೆಸದೆ ಸೂತಕ ಅನುಭವಿಸುತ್ತಾರೆ. ಅನೇಕ ಬುಡಕಟ್ಟುಗಳಲ್ಲಿ ಮೊದಲು ಹುಟ್ಟಿದ ಮಗುವನ್ನು ಕಳೆದುಕೊಂಡ ತಂದೆತಾಯಿಗಳು ಕೆಲವೊಮ್ಮೆ ಕಠಿಣ ನಿಯಮಗಳಿಗೆ ಒಳಪಡಬೇಕಾಗುತ್ತದೆ. ಅವರು ಪ್ರತ್ಯೇಕವಾಗಿರ ಬೇಕು. ಸಂಭೋಗ ನಡೆಸಬಾರದು, ಉಪವಾಸ ಮಾಡಬೇಕು, ಸ್ನಾನ ಮಾಡಬಾರದು, ನಿಯಮಿಸಿದಷ್ಟು ದಿನ ಅಥವಾ ತಿಂಗಳು ಕಾಲ ಪ್ರಲಾಪಿಸುತ್ತಿರಬೇಕು. ಅನೇಕ ಸಂದರ್ಭಗಳಲ್ಲಿ ಮಗುವಿನ ತಾಯಿ ಕೂದಲನ್ನು ಚಿಕ್ಕದಾಗುವಂತೆ ಕತ್ತರಿಸಿಕೊಳ್ಳಬೇಕು ಇಲ್ಲವೇ ಸುಟ್ಟುಕೊಳ್ಳಬೇಕು. ಶೋಕಾವಧಿ ಮುಗಿಯುವಾಗ ವಿಧಿಬದ್ಧವಾದ ಶುದ್ಧೀ ಕರಣ (ಸಾಮಾನ್ಯವಾಗಿ ವಿಧಿಬದ್ಧವಾದ ಸ್ನಾನ ಅಥವಾ ಧೂಪಗಳ ಹೊಗೆಯ ಸ್ನಾನ) ನಡೆಯಬೇಕು. ದಂಪತಿಗಳಲ್ಲಿ ಒಬ್ಬರು ಸತ್ತಾಗ ವಿಶೇಷವಾಗಿ ವಿಧವೆಯರು ಕೆಲ ಮಟ್ಟಿಗೆ ವಿಧುರರೂ ನಿಷ್ಠುರವಾಗಿ ನಿಷೇಧಗಳಿಗೆ ಒಳಗಾಗುತ್ತಿದ್ದರು. ಅನೇಕ ಬುಡಕಟ್ಟುಗಳಲ್ಲಿ ವಿಧವೆಯರು ಪ್ರತ್ಯೇಕವಾಗಿರಬೇಕಾಗುತ್ತಿತ್ತು. ಕೂದಲನ್ನು ಚಿಕ್ಕ ದಾಗಿ ಕತ್ತರಿಸಿಕೊಳ್ಳಬೇಕಿತ್ತು. ಕೂದಲು ಹಾಗೂ ಮುಖವನ್ನು ಬೂದಿ, ಕಪ್ಪು ರಾಳ ಅಥವಾ ಜೇಡಿಮಣ್ಣಿನಿಂದ ಮೆತ್ತಿಕೊಳ್ಳಬೇಕಾಗಿತ್ತು. ತಮ್ಮನ್ನೇ ಕತ್ತರಿಸಿ ಕೊಳ್ಳಬೇಕಿತ್ತು. ಅಥವಾ ಬೆರಳ ಒಂದು ಗೆಣ್ಣನ್ನಾದರೂ ಕತ್ತರಿಸಿಕೊಳ್ಳಬೇಕಿತ್ತು. ಕೆಲವು ಬಾರಿ ಸತೀಹೋಗಬೇಕಿತ್ತು. ಅವರ ಪತಿಯ ಬಂಧುಗಳು ವಿಧಿಯುಕ್ತವಾದ ಬಿಡುಗಡೆ ಮಾಡಿದ ನಂತರವೇ ಅವರು ದಿನನಿತ್ಯದಂತೆ ಜೀವನ ನಡೆಸಬಹುದಿತ್ತು, ಪುನಃ ಮದುವೆಯಾಗಬಹುದಿತ್ತು. ಗೋರಿಯನ್ನು ಅಗೆಯುವವರೂ ಹಾಗೂ ಹೆಣ ವನ್ನು ಹೊರುವವರೂ ಶವಸಂಸ್ಕಾರದ ನಂತರ ಬಂಧುಗಳು ವಿಧಿಸಿದ ಅನೇಕ ನಿಷಿದ್ಧ ಗಳನ್ನೂ ಪಾಲಿಸಬೇಕಾಗುತ್ತದೆ. ಕೆಲವು ಬುಡಕಟ್ಟುಗಳಲ್ಲಿ ಮೃತ ಶಿಶುವಿನ ಅಥವಾ ಸಂಗಾತಿಯ ಮೂಳೆಗಳನ್ನು ಹೊರೆ ಮಾಡಿ, ತಾಯಿ ಅಥವಾ ವಿಧವೆಯಾದವಳು ಒಂದು ವರುಷ ಅಥವಾ ಅದಕ್ಕಿಂತ ಹೆಚ್ಚು ಕಾಲ ಬೆನ್ನ ಮೇಲೆ ಹೊತ್ತುಕೊಂಡು ತಿರುಗುತ್ತಾಳೆ.

ಕೊನೆಯ ಪಕ್ಷ ಭೂಖಂಡದ ಮೂರು ಭಾಗಗಳಲ್ಲಿ ಹಿಂದಿನ ವರುಷ ಮೃತರಾದ ಎಲ್ಲ ವ್ಯಕ್ತಿಗಳ ಅಥವಾ ಒಬ್ಬ ವ್ಯಕ್ತಿಯ ಗೌರವಾರ್ಥ ಬಹು ವಿಸ್ತೃತವಾದ ಸ್ಮರಣ ಶೋಕ ಸಮಾರಂಭಗಳನ್ನು ನಡೆಸುತ್ತಾರೆ. ಇನ್ನೂ ಅನೇಕ ಬುಡಕಟ್ಟುಗಳವರು ಮೃತರ ಗೌರವಾರ್ಥ ಸಣ್ಣ ಪ್ರಮಾಣದ ಉತ್ಸವ ಅಥವಾ ಸಮಾರಂಭಗಳನ್ನು ನಡೆಸುತ್ತಿದ್ದರು. ಎಸ್ಕಿಮೋಗಳು ಮೃತರ ಸ್ಮರಣಾರ್ಥ ಉತ್ಸವಗಳನ್ನು ನವೆಂಬರ್ ತಿಂಗಳ ಉತ್ತರಾರ್ಧದಲ್ಲಿ ಆಚರಿಸುತ್ತಾರೆ. ಸಮೀಪ ಬಂಧುಗಳು ಅತಿಥೇಯರಾಗಿರು

ತ್ತಾರೆ. ಮೃತರು ಮನೆಯ ನೆಲದಡಿ ಇರುತ್ತಾರೆ. ತಮ್ಮ ಗೌರವಾರ್ಥ ನಡೆಸುವ ಆಚರಣೆಗಳನ್ನು ಅವರು ಆನಂದಿಸುತ್ತಾರೆ. ತಮಗೆ ಕೊಟ್ಟ ಆಹಾರ, ಪಾನೀಯ ಗಳನ್ನು ಸೇವಿಸುತ್ತಾರೆ. ತಮ್ಮ ಹೆಸರಿಗೆ ಕಾಣಿಕೆಯಾಗಿ ಕೊಟ್ಟ ವಸ್ತುಗಳನ್ನು ಸ್ವೀಕರಿಸುತ್ತಾರೆ. ಉತ್ತರ ಫೆಸಿಫಿಕ್ ಉತ್ಸವದಲ್ಲಿ ಮೃತರ ಆತ್ಮಗಳು ಹಾಜರಿರು ತ್ತವೆ. ಅವರಿಗೆ ಆಹಾರವನ್ನು ಬೆಂಕಿಯ ಮೂಲಕ ಕೊಡಲಾಗುತ್ತದೆ. ಇತರೆಡೆ ಗಳಲ್ಲೂ ಮೃತರಿಗಾಗಿ ಇಂತಹ ಕೌಟುಂಬಿಕ ಉತ್ಸವವನ್ನು ಆಚರಿಸಲಾಗುತ್ತದೆ. ಮಹಾಸಾಗರ ಪ್ರದೇಶದ ಹೂರನ್‌ರು ಜಲಪಾತದಲ್ಲಿ ಮಡಿದವರಿಗಾಗಿ ಒಂದು ವಿಶೇಷ ಸಮಾರಂಭ ಆಚರಿಸುತ್ತಿದ್ದರು. ಆ ವರುಷದಲ್ಲಿ ಮೃತರಾದವರೆಲ್ಲರನ್ನೂ ಬಂಧುಗಳು ಗೋರಿಯಿಂದ ಹೊರತೆಗೆದು ಎಲುಬುಗಳ ಮೇಲಿನ ಮಾಂಸವೆಲ್ಲವನ್ನೂ ತೆಗೆದು ಸ್ವಚ್ಛ ಪಡಿಸಿ ಅವುಗಳನ್ನು ಬೆಲೆಬಾಳುವ ಚರ್ಮದಲ್ಲಿ ಸುತ್ತಿ ಕುಲದವರು ಹುಗಿಯುವ ಗುಂಡಿ ಯಲ್ಲಿ ಪುನಃ ಹುಗಿಯುತ್ತಿದ್ದರು. ಕೂದಲನ್ನು ಕತ್ತರಿಸುವುದು ದಕ್ಷಿಣ ಅಮೆರಿಕಾದ ಶವಸಂಸ್ಕಾರದ ವಿಧಿಗಳಲ್ಲಿ ಬಹು ಸಾಮಾನ್ಯವಾಗಿ ಆಚರಿಸಲ್ಪಡುವ ಒಂದು ವಿಧಿ. ಬಂಧುಗಳ ಕೂದಲು ತಕ್ಕಷ್ಟು ಉದ್ದ ಬೆಳೆದಾಗ ಸಾಮಾನ್ಯವಾಗಿ ಈ ಶೋಕಾವಧಿ ಮುಕ್ತಾಯಗೊಳ್ಳುತ್ತದೆ. ಶೋಕಿಸುವವರು ಆಭರಣಗಳನ್ನು ತ್ಯಜಿಸುತ್ತಾರೆ. ತಮ್ಮ ವೇಷಭೂಷಣಗಳ ಬಗ್ಗೆಯೂ ಉದಾಸೀನ ತಾಳುತ್ತಾರೆ. ಎಷ್ಟೋ ವೇಳೆ ಅವರು ತಮ್ಮ ಮುಖ ಅಥವಾ ದೇಹವನ್ನು ಇಜ್ಜಲಿನಿಂದ ಅಥವಾ ಜೆನಿವಾದಿಂದ ಕಪ್ಪು ಮಾಡಿಕೊಳ್ಳುತ್ತಾರೆ. ಕೆಲವು ಪ್ರದೇಶಗಳಲ್ಲಂತೂ (ಮಕೂಶಿ) ಕೆಂಪುಬಣ್ಣ ಶೋಕದ ವರ್ಣವೇ ಆಗಿದೆ. ಆಂಡಿಯನ್ ಪ್ರದೇಶದಲ್ಲಿ ಶೋಕವನ್ನು ಆಚರಿಸುವವರು ಕಪ್ಪು ಉಡುಗೆಯನ್ನು ಧರಿಸುತ್ತಿದ್ದರು. ಚಾಕೊ ಬುಡಕಟ್ಟಿನ ವಿಧವೆಯರು ತಲೆಯ ಮೇಲೆ ಒಂದು ಬಲೆಯ ಚೀಲವನ್ನು ಹಾಕಿಕೊಳ್ಳುತ್ತಿದ್ದರು ಇಲ್ಲವೇ ಬಟ್ಟೆಯ ತುಂಡಿ ನಿಂದ ತಲೆಯನ್ನು ಮುಚ್ಚಿಕೊಳ್ಳುತ್ತಿದ್ದರು. ಶೋಕಿಸುವವರು ಕೆಲವು ಆಹಾರಗಳನ್ನು ಸ್ವೀಕರಿಸುವುದಿಲ್ಲ, ಇಲ್ಲವೇ ಕಠಿಣ ಪಥ್ಯವನ್ನು ಮಾಡುತ್ತಾರೆ. ಮೃತರ ಹೆಸರು ನಿಷಿದ್ಧವಾಗುತ್ತದೆ. ಒಂದು ವೇಳೆ ಅದು ಸಾಮಾನ್ಯವಾಗಿ ಬಳಕೆಯಾಗುವ ಪದ ಗಳನ್ನು ಒಳಗೊಂಡಿದ್ದರೆ ಆ ಪದಗಳೂ ತ್ಯಾಜ್ಯವಾಗುತ್ತವೆ. ಚಾಕೋದಲ್ಲಿ ಮೃತನ ಅತಿಸಮೀಪದ ಬಂಧುಗಳು ಹೊಸ ಹೆಸರುಗಳನ್ನಿಟ್ಟುಕೊಳ್ಳುತ್ತಾರೆ.

ಅನೇಕ ಬುಡಕಟ್ಟುಗಳಲ್ಲಿ ನೆಲದ ಮೇಲೆ ಬಿದ್ದು ಹೊರಳಾಡುವುದರ ಮೂಲಕ (ಗುವರಾನಿ, ಅಪಿನಾಯಿ) ಅಥವಾ ತಮ್ಮ ದೇಹಗಳನ್ನು ಚೂಪಾದ ವಸ್ತುಗಳಿಂದ ಚುಚ್ಚಿಕೊಳ್ಳುವುದರ ಮೂಲಕ (ಒನಾ, ಟೆಹೂಲ್ಚೆ, ಪಾಂಪ, ಕಯೂಪೊ) ಶೋಕಿಸು ವವರು ತಮ್ಮ ದುಃಖವನ್ನು ವ್ಯಕ್ತಪಡಿಸುತ್ತಾರೆ. ಪರಾನಾ ಬುಡಕಟ್ಟಿನ ಮುಖಜ ಭೂಮಿಯ ಪುರಾತನ ಬುಡಕಟ್ಟುಗಳಲ್ಲಿ ಹೆಂಗಸರು ತಮ್ಮ ಬೆರಳುಗಳ ಒಂದು ಗೆಣ್ಣನ್ನು ಕತ್ತರಿಸಿಕೊಳ್ಳುತ್ತಿದ್ದರು.

ಸಾವು ಸಂಭವಿಸಿದ ಕೂಡಲೆ ಅಥವಾ ಶವಸಂಸ್ಕಾರವಾದ ಕೂಡಲೆ ಬಂಧುಗಳು ಸಾಮಾನ್ಯವಾಗಿ ಜೀವಂತವಾಗಿ ಉಳಿದಿರುವ ಸಂಗಾತಿ - ಸತ್ತ ವ್ಯಕ್ತಿಯ ಗುಣಗಾನ ಮಾಡುತ್ತ ತಮ್ಮನ್ನು ತೊರೆದುಹೋದುದಕ್ಕೆ ಅಳುತ್ತಾರೆ. ಕಳೆದುಕೊಂಡುದರಿಂದ ಆದ ನಷ್ಟವನ್ನು ಬಣ್ಣಿಸುತ್ತಾರೆ. ಶವಸಂಸ್ಕಾರದ ಶೋಕಗಳೆಂದರೆ ಪ್ರಲಾಪಿಸುವುದು, ಅಳುವುದು ಅಥವಾ ಗೋಳುದನಿಯಲ್ಲಿ ಹೇಳಿದ್ದನ್ನೇ ಹೇಳುವುದು. ಅವು ಸಾಮಾನ್ಯವಾಗಿ ಅರ್ಥವಿಲ್ಲದ ಉಚ್ಚಾರಗಳೇ ಆಗಿದ್ದರೂ ಕೆಲವೊಮ್ಮೆ ಅವು ದುಃಖ ಮತ್ತು ವಿಷಾದದ ಅಭಿವ್ಯಕ್ತಿಯನ್ನು ಒಳಗೊಂಡಿರುತ್ತವೆ. ಸಾಮಾನ್ಯವಾಗಿ ಮುಂಬೆಳಗಿನಲ್ಲಿ ಇಲ್ಲವೇ ಮುಸ್ಸಂಜೆಯಲ್ಲಿ ಈ ಪ್ರಲಾಪ ನಡೆಯುತ್ತದೆ. ಶವವನ್ನು ಹೂಳಿದ ನಂತರ ಕೆಲವೊಮ್ಮೆ ನೃತ್ಯಗಳನ್ನು ಅಭಿನಯಿಸಲಾಗುತ್ತದೆ. ಶೋಕಿಸುವವರು ದುಷ್ಟ ಪ್ರಭಾವಗಳಿಂದ ಹಾಗೂ ಸಾವಿನ ಸೋಂಕಿನಿಂದ ತಮ್ಮನ್ನು ಶುದ್ಧಿಗೊಳಿಸಿಕೊಳ್ಳುವುದಕ್ಕಾಗಿ ನದಿಯಲ್ಲಿ ಸ್ನಾನ ಮಾಡುತ್ತಾರೆ ಅಥವಾ ಬೆಂಕಿಯನ್ನು ದಾಟುತ್ತಾರೆ. ದಕ್ಷಿಣ ಅಮೆರಿಕದಾದ್ಯಂತ ನಾಗರೀಕರು ಹಾಗೂ ಬುಡಕಟ್ಟಿನ ಜನಗಳೆಲ್ಲರೂ ಸತ್ತವನ ಸ್ವಂತ ವಸ್ತುಗಳನ್ನು ಆತನೊಂದಿಗೇ ಹೂಳುತ್ತಾರೆ ಅಥವಾ ಒಡೆದುಹಾಕುತ್ತಾರೆ. ಇಲ್ಲವೇ ಸುಟ್ಟುಬಿಡುತ್ತಾರೆ. ವಿಶೇಷ ಬೆಲೆಯುಳ್ಳ ಕಲ್ಲಿನ ಕಠಾರಿ ಮತ್ತು ತೋಡುದೋಣಿ ಅಂತಹವನ್ನು ಮಾತ್ರ ಮೃತನ ಪೀಳಿಗೆಯವರು ಉಳಿಸಿಕೊಳ್ಳಬಹುದು. ಮೃತ ವ್ಯಕ್ತಿಗೆ ಸೇರಿದಂತಹ ಸಾಕುಪ್ರಾಣಿಗಳನ್ನು ಸಾಮಾನ್ಯವಾಗಿ ಆತನ ಗೋರಿಯ ಮೇಲೆ ಕತ್ತರಿಸಲಾಗುತ್ತಿತ್ತು. ಪ್ರಬಲರಾದ ಮುಖ್ಯಸ್ಥರೂ ರಾಜರೂ ಇರುವಂತಹ ಪ್ರದೇಶಗಳಲ್ಲಿ ಆ ಅಧಿಪತಿಗಳ ಹೆಂಡಂದಿರನ್ನೂ ಮತ್ತು ಸೇವಕರನ್ನೂ ಸಹ ಅವರೊಂದಿಗೆ ಹೂಳಲಾಗುತ್ತಿತ್ತು. ಪೆರು, ಕೊಲಂಬಿಯಾ ವೆಸ್ಟ್ ಇಂಡೀಸ್ ಹಾಗೂ ಆಂಡಿಯನ್ ಪ್ರಭಾವಗಳು ಬಲವಾಗಿರುವಂತಹ ಕೆಳ ಪ್ರದೇಶದ ಭಾಗಗಳಲ್ಲಿ ಸತಿ ಹೋಗುವುದು, ಗುಲಾಮರನ್ನು ಬಲಿಕೊಡುವುದು ರೂಢಿಯಲ್ಲಿದ್ದಿತು. ಪ್ರೇತವು ಹಿಂದಿರುಗಿ ಬಂದು ಜೀವಂತವಾಗಿರುವವರನ್ನು ಹಾನಿ ಮಾಡುವುದನ್ನು ತಡೆಯುವುದಕ್ಕಾಗಿ ತಕ್ಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿತ್ತು. ಶೋಕಿಸುವವರ ಮನೆಯ ಮೆಟ್ಟಿಲುಗಳ ಮೇಲೆ ಬೂದಿಯನ್ನು ಚೆಲ್ಲಲಾಗುತ್ತಿತ್ತು, ಪ್ರೇತಗಳ ಎದುರಾಗಿ ಬಾಣಗಳನ್ನು ಅಥವಾ ಬೆಂಕಿಯ ಆಯುಧಗಳನ್ನು ಎಸೆಯುತ್ತಾರೆ.

ಶೋಕಾವಧಿಯ ಮುಕ್ತಾಯವನ್ನು ಸಹ ಸಾಮಾನ್ಯವಾಗಿ ಒಂದು ವಿಶೇಷ ಸಮಾರಂಭವನ್ನಾಗಿ ಆಚರಿಸಲಾಗುತ್ತದೆ. ಟುಕಾನೋ ಹಾಗೂ ಕೊಬಿಯುವೋಗಳು ಒಂದು ಮೊಗವಾಡದ ನೃತ್ಯವನ್ನು ಅಭಿನಯಿಸುತ್ತಾರೆ. ಇದರಲ್ಲಿ ಮೃತನ ಮನೆಯ ಮೇಲೆ ಆಕ್ರಮಣ ನಡೆಸಿದ ಪ್ರೇತಗಳು ಸೋತುಹೋಗುವುದನ್ನು ಸಂಕೇತಿಸಲಾಗುತ್ತದೆ. ಟೂಪಿನುಬಾಗಳು ಕುಡಿತದ ದೊಡ್ಡ ಸಮಾರಂಭ ನಡೆಸುತ್ತಾರೆ. ರುಕುಯುನ್ ಮತ್ತು ಗಯಾನದ ಇತರ ಬುಡಕಟ್ಟಿನವರು ಅಭಿನಯಿಸುವ ನೃತ್ಯದಲ್ಲಿ ಅತಿಥಿಗಳು

ಪರಸ್ಪರ ಚಾ ಟೀಗಳಲ್ಲಿ ಹೊಡೆಯುತ್ತಾರೆ. ಕಯಿಂಗಾಂಗ್‌ರು ಮೃತನನ್ನು ಹೂಳಿದ ಅನೇಕ ತಿಂಗಳುಗಳ ನಂತರ ಒಂದು ದೊಡ್ಡ ಸಮಾರಂಭವನ್ನು ನಡೆಸಿ ಮೃತನೊಂದಿಗೆ ತಮ್ಮ ಎಲ್ಲ ಬಂಧನಗಳನ್ನು ತೊರೆಯುತ್ತಾರೆ. ಭಾರತದ ಕೆಲವು ಜಾತಿಗಳಲ್ಲಿ ಹತ್ತು ದಿನಗಳ ಶೋಕಾಚರಣೆ ಇರುತ್ತದೆ. ಇದಕ್ಕೆ ಹತ್ತು ದಿನಗಳ ಸೂತಕ ಎಂದು ಕರೆಯು ಲಾಗುತ್ತದೆ. ಗಂಡ ಸತ್ತಾಗ ಆವನ ವಿಧವೆಯು ಶೋಕದ ದ್ಯೋತಕವಾಗಿ ತಲೆ ಗೂದಲನ್ನು ಪೂರ್ತಿಯಾಗಿ ಕತ್ತರಿಸಿಕೊಳ್ಳಬೇಕು. ಸಾಯಂವವರೆಗೂ ಅವಳು ಕೂದಲನ್ನು ಬೆಳೆಸುವಂತಿಲ್ಲ. ತನ್ನ ಸುಮಂಗಲಿ ಲಾಂಛನಗಳನ್ನು ತೆಗೆದುಹಾಕಿ ಕೆಂಪು ಅಥವಾ ಬಿಳಿಸೀರೆ ಉಡಬೇಕು. ಒಂದು ಹೊತ್ತೇ ಊಟಮಾಡಬೇಕು. ಹೀಗೆ ಸಾಯುಂವವರೆಗೂ ಶೋಕಾಚರಣೆ ಮಾಡಬೇಕು. ಹಿಂದಿನ ಕಾಲದಲ್ಲಾದರೆ ಗಂಡ ಸತ್ತಾಗ ಹೆಂಡತಿ ಚಿತೆಗೇರಬೇಕಿತ್ತು.

ನಾಯಕ ಜನಾಂಗ - ಒಂದು ನೋಟ

ಮೀರಾಸಾಬಿಹಳ್ಳಿ ಶಿವಣ್ಣ

ಬುಡಕಟ್ಟು ಜನಾಂಗಗಳ ಅಧ್ಯಯನ ನಮ್ಮ ಸಾಂಸ್ಕೃತಿಕ ತಿಳುವಳಿಕೆಗೆ, ಸಮಾಜದ ಬಗೆಗಿನ ಒಳನೋಟಗಳಿಗೆ ಹೊಸ ಆಯಾಮಗಳನ್ನು ಒದಗಿಸುತ್ತದೆ. ಇಂತಹ ಸಾಂಸ್ಕೃತಿಕ - ಸಾಮಾಜಿಕ ಅಧ್ಯಯನ ಬ್ರಿಟೀಷರು ಭಾರತವನ್ನು ಆಳುತ್ತಿದ್ದ ಕಾಲದಿಂದಲೇ ನಡೆದು ಬಂದಿದೆ. ಅನೇಕ ವಿದೇಶಿ ವಿದ್ವಾಂಸರು ಗಣನೀಯ ಸೇವೆ ಸಲ್ಲಿಸಿದ್ದಾರೆ. ವೆರಿಯರ್ ಎಲ್ವಿನ್‌ರಂತಹ ವಿದ್ವಾಂಸರು ಭಾರತದ ಅನೇಕ ಬುಡಕಟ್ಟುಗಳ ಬಗ್ಗೆ ಸಂಶೋಧನೆ ಕೈಗೊಂಡು ಅವರ ಉದ್ಧಾರಕ್ಕಾಗಿ ತಮ್ಮ ಬದುಕನ್ನೇ ಅರ್ಪಿಸಿಕೊಂಡಿದ್ದರು.

ಕರ್ನಾಟಕದ ಪ್ರಧಾನ ಬುಡಕಟ್ಟುಗಳಾದ ಮ್ಯಾಸನಾಯಕರು ಮತ್ತು ಕಾಡುಗೊಲ್ಲರನ್ನು ಕುರಿತ ಸಾಕಷ್ಟು ಅಧ್ಯಯನಗಳು ಇ. ಥರ್ಸ್ಟನ್,[1] ಎಲ್.ಕೆ. ಅನಂತಕೃಷ್ಣ ಅಯ್ಯರ್ ಮತ್ತು ಹೆಚ್. ವಿ. ನಂಜುಂಡಯ್ಯ,[2] ಡಾ॥ ತೀ. ನಂ. ಶಂಕರನಾರಾಯಣ,[3] ಡಾ॥ ಕಾಳೇಗೌಡ ನಾಗವಾರ[4] ಅವರಿಂದ ನಡೆದಿದ್ದರೂ, ಇನ್ನೂ ಯಾರ ಗಮನಕ್ಕೂ ಬಾರದಿರುವ ನಾಯಕ ಜನಾಂಗದ ಕೆಲವು ಆಚಾರ-ವಿಚಾರಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸಬಯಸುತ್ತೇನೆ.

ಕರ್ನಾಟಕದ ಉದ್ದಗಲಕ್ಕೂ ಹರಡಿರುವ ಈ ಜನಾಂಗ ರಾಯಚೂರು, ಬಳ್ಳಾರಿ ಜಿಲ್ಲೆಗಳ ಪೂರ್ವಭಾಗದಲ್ಲಿ ಹೆಚ್ಚಾಗಿಯೂ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು

ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಅತಿದಟ್ಟವಾಗಿಯೂ ನೆಲೆಸಿದೆ. ನೆರೆಯ ಆಂಧ್ರ ಪ್ರದೇಶದ ಅನಂತಪುರ, ಕರ್ನೂಲು ಜಿಲ್ಲೆಗಳಲ್ಲಿಯೂ ನಾಯಕರು ಸಾಕಷ್ಟು ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಆದರೆ ಈ ಜನ ಸಾಮಾಜಿಕವಾಗಿ, ಆರ್ಥಿಕವಾಗಿ ಅತ್ಯಂತ ಹಿಂದುಳಿದಿದ್ದು ಭಾರತ ಮತ್ತು ಕರ್ನಾಟಕದ ಸರ್ಕಾರಗಳು ಇವರಿಗೆ ಕ್ರಮವಾಗಿ 'ಎಸ್.ಟಿ.' ಮತ್ತು 'ಬಿ.ಟಿ.' ಸವಲತ್ತುಗಳನ್ನು ನೀಡಿವೆ.

ಇವರು ಮೂಲತಃ ಆಂಧ್ರಪ್ರದೇಶದ ಶ್ರೀಶೈಲದ ಬಳಿಯ ಕರಿಮಲೆ-ಕೊಮ್ಮಮಲೆ[5]ಗಳ ಕಡೆಯಿಂದ ಮತ್ತು ತಿರುಪತಿ ಬಳಿಯ ಜಡೇಕಲ್ಲುದುರ್ಗ[6]ದ (ಇದು ಆಂಧ್ರದ ಕಡಪ ಜಿಲ್ಲೆಯಲ್ಲಿ ಇದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.) ಕಡೆಯಿಂದ ವಲಸೆ ಬಂದ ಜನ. ಮೂಲತಃ ಬೇಟೆಗಾರರೂ, ಪಶುಪಾಲಕರೂ ಆದ ಈ ಜನ ಹುಲ್ಲು - ನೀರು ಹುಡುಕುತ್ತಾ ದೇಶಾಂತರ ಬಂದವರು. ಮುಖ್ಯವಾಗಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ನಂತರ ಕರ್ನಾಟಕದತ್ತ ವಲಸೆ ಬರತೊಡಗಿದ ಈ ಜನ ಸ್ವಭಾವತಃ ವೀರರಾಗಿದ್ದರು, ನಿರ್ಭೀತರಾಗಿದ್ದರು. ಹೀಗಾಗಿ ಇವರಿಗೆ, ಕಾಲಾನಂತರ ಸಮಾಜದಲ್ಲಿ ಹೆಚ್ಚಿನ ಸ್ಥಾನ - ಮಾನಗಳು ದೊರೆತಂತೆ ಕಾಣುತ್ತದೆ.

ಇವರ ಮನೆಯ ಮಾತು ತೆಲುಗು. ಈ ಜನಾಂಗದ ಚರಿತ್ರೆಗೆ ಸಂಬಂಧಿಸಿದ ಎಷ್ಟೋ ದಾಖಲೆಗಳು ತೆಲುಗಿನಲ್ಲಿ ಸಿಗುತ್ತವೆ, ಆದರೆ ಇವರು ಕನ್ನಡ ಪ್ರಾಂತಗಳಲ್ಲಿ ನೆಲಸಿದ ನಂತರ ದಾಖಲೆಗಳು ಕನ್ನಡದಲ್ಲಿಯೂ ಸಿಗುತ್ತವೆ. ಇಂದು ಕನ್ನಡ ಪ್ರಾಂತಗಳಲ್ಲಿ ನೆಲಸಿರುವ ಇವರ ತೆಲುಗು ಬಹುಪಾಲು ಕನ್ನಡ ಮಿಶ್ರವಾಗಿದ್ದು ತನ್ನದೇ ಆದ ವಿಚಿತ್ರ ಶೈಲಿಯನ್ನು ಹೊಂದಿದೆ. ಇವರ 'ತೆಲುಗನ್ನಡ' ಭಾಷಾ ವಿಜ್ಞಾನದ ದೃಷ್ಟಿಯಿಂದ ಕುತೂಹಲಕರವಾದ ಅಧ್ಯಯನವಾಗುತ್ತದೆ.

ಇವರು ತಮ್ಮನ್ನು ಬೇಡರು (ಬ್ಯಾಡರು), ವಾಲ್ಮೀಕಿಗಳು, ಪರಿವಾರದವರು, ಮ್ಯಾಸಬೇಡರು (ಮ್ಯಾಸ ನಾಯಕರು), ತಳವಾರರು, ನಾಯ್ಕರು, ಪಾಳ್ಯೇಗಾರರು ಎಂದು ನಾನಾ ಹೆಸರುಗಳಲ್ಲಿ ಕರೆದುಕೊಳ್ಳುತ್ತಾರೆ.

"ಬೇಡರೆಂದು ಕರೆದುಕೊಳ್ಳಬೇಕಾದ ಜನರು ನಾನಾ ಹೆಸರುಗಳನ್ನು ಇಟ್ಟುಕೊಂಡಿದ್ದಾದರೂ ಹೇಗೆ? ಅದಕ್ಕೆ ಅಂದಂದಿನ ಸನ್ನಿವೇಶಗಳೇ ಕಾರಣ. ವಾಲ್ಮೀಕಿ ಸಂತತಿಯವರು ತಮ್ಮ ಪ್ರಸಿದ್ಧ ಪೂರ್ವಿಕನ ಹೆಸರಿನಲ್ಲಿ ತಮ್ಮನ್ನು ವಾಲ್ಮೀಕಿಗಳೆಂದು ಕರೆದುಕೊಂಡು ಸಂತೃಪ್ತಿ ಪಡೆದಿದ್ದಾರೆ. ಕಾಡುಗಳಲ್ಲಿದ್ದು ಪಶುಪಾಲನೆಯನ್ನು ಮುಖ್ಯ ವೃತ್ತಿಯನ್ನಾಗಿ ಅವಲಂಬಿಸಿದವರು ತಮ್ಮ ಸಾಕು ಪ್ರಾಣಿಗಳನ್ನು ಕಾಡಿನಿಂದ ಕಾಡಿಗೆ ಅಟ್ಟಿಕೊಂಡು ಹೋಗಿ ಪೋಷಿಸುತ್ತಿದ್ದುದರ ಮೇಲೆ ತಮ್ಮನ್ನು ಕಾಡುಸಂಚರು ಎಂದು ಕರೆದುಕೊಂಡಿದ್ದಾರೆ. ಮೂಗನಾಯಕನ ಅನುಯಾಯಿಗಳೆಲ್ಲಾ ತಮ್ಮನ್ನು ನಾಯಕ

ರೆಂದೂ ಕರೆದುಕೊಳ್ಳುತ್ತಾರೆ. ಪಾಳೆಯಗಾರರ ಸಂತತಿಯವರು ತಮ್ಮನ್ನು ಪಾಳೈಗಾರರು ಅಥವಾ ದೊರೆಗಳು ಎಂದು ಕರೆದುಕೊಳ್ಳುತ್ತಾರೆ. ಪಾಳೈಯಗಾರರ ಆಸ್ಥಾನಗಳಲ್ಲಿ ಅಂತರಂಗ ಸೇವಕರಂತಿದ್ದವರ ಪೀಳಿಗೆಯವರು ತಮ್ಮನ್ನು ರಾಜಪರಿವಾರದವರೆಂದು ಕರೆದುಕೊಳ್ಳುತ್ತಾರೆ. ಹಗಲಿರುಳೂ ಗ್ರಾಮಗಳ ರಕ್ಷಣಾ ಕಾರ್ಯಕ್ಕೆ ನಿಯಮಿಸಲ್ಪಟ್ಟವರ ಸಂತತಿಯವರು ತಮ್ಮನ್ನು ತಳವಾರರೆಂದು ಕರೆದುಕೊಳ್ಳುತ್ತಾರೆ. ಕೆಲವರು ಹಿಂದಿನಿಂದಲೂ ಉಪಯೋಗಿಸುತ್ತಿದ್ದ ಶಬರ, ಕಿರಾತ, ಭಿಲ್ಲವ ಪದಗಳನ್ನೇ ತಮ್ಮ ಜಾತಿಯೆಂದು ಉಳಿಸಿಕೊಂಡಿದ್ದಾರೆ"[7] ಎಂಬುದು ರಾಜನ ರಾಜಣ್ಣನವರ ವಾದ.

"ಕ್ಷತ್ರಿಯ ಕುಲನಾಶಕ್ಕೆ ಗಂಡುಗೊಡಲಿ ಹಿಡಿದು ಹೊರಟ ಪರಶುರಾಮನ ಹಾವಳಿಯಿಂದ ತಲೆತಪ್ಪಿಸಿಕೊಂಡು ಕಾಡು ಸೇರಿದ ಕ್ಷತ್ರಿಯರು ತಮ್ಮನ್ನು 'ನಾಯಕರು' ಎಂದು ಕರೆದುಕೊಂಡರು, ಕ್ರಮೇಣ ತಾವು ಕಟ್ಟಿದ ಸಾಮ್ರಾಜ್ಯಗಳನ್ನು ಮರೆತು, ಕಾಡಿನ ಬದುಕಿನೊಂದಿಗೆ ಬೆರೆತುಹೋಗಿ 'ಕಿರಾತ'ರೆನಿಸಿಕೊಂಡರು"[8] ಎಂಬ ವಿಶಿಷ್ಟ ವ್ಯಾಖ್ಯಾನ ಹರತಿ ವೀರನಾಯಕರದು.

ಪುರಾಣ ಕಾಲದ ವಾಲ್ಮೀಕಿ, ಧರ್ಮವ್ಯಾಧ, ಬೇಡರ ಕಣ್ಣಪ್ಪ, ಏಕಲವ್ಯ, ಶಬರಿಯವರನ್ನು ಬಿಟ್ಟರೆ ಕ್ರಿ.ಶ. 9ನೇ ಶತಮಾನಕ್ಕೆ ಸೇರಿದ 'ವಡ್ಡಾರಾಧನೆ' ಎಂಬ ಹಳಗನ್ನಡ ಗದ್ಯಕೃತಿಯ ಅನೇಕ ಕತೆಗಳಲ್ಲಿ ನಗರ ರಕ್ಷಣೆಯಲ್ಲಿ ನಿರತನಾದ 'ತಳವಾರ'ನ ಉಲ್ಲೇಖವನ್ನು ಕಾಣಬಹುದು.

ಇವರೆಲ್ಲರನ್ನೂ ಒಟ್ಟಾಗಿ 'ನಾಯಕರು' ಎಂದು ಕರೆಯುವುದು ವಾಡಿಕೆಯಾಗಿದೆ. ಆದರೆ ಇವರಲ್ಲಿ 'ಮ್ಯಾಸ ನಾಯಕರು, ಊರು ನಾಯಕರು ಮತ್ತು ಪಾಳಯಗಾರರು' ಎಂಬ ಮೂರು ಪ್ರಧಾನವಾದ ಪಂಗಡಗಳಿವೆ.

1. ಮ್ಯಾಸನಾಯಕರು :

ಬೇರೆಲ್ಲ ಪಂಗಡಗಳಿಗಿಂತಲೂ ಅತಿಹೆಚ್ಚಿನ ಜನಸಂಖ್ಯೆಯನ್ನು ಈ ಪಂಗಡ ಹೊಂದಿದೆ. ಸಹಜವಾಗಿ ಕೃಷ್ಣಕಾಯರಾದ ಈ ಜನಗಳಲ್ಲಿ ಗಿರಿಜನಾಂಗದ ಪ್ರಾಚೀನ ಲಕ್ಷಣಗಳನ್ನು, ಆಚಾರ - ವಿಚಾರಗಳನ್ನು ಕಾಣಬಹುದು. ಇವರಲ್ಲಿ 'ಮಂದಲೋರು. ಮಲ್ಲನಾಯಕನೋರು, ಮಳಿಲೋರು' ಎಂಬ ಆಯಾ ಬೆಡಗುಗಳ ವಿಭೂತಿ ಪುರುಷ ಹೆಸರಿನಲ್ಲೇ ಗುರುತಿಸಲ್ಪಡುವ ಮೂರು ಪ್ರಧಾನ ಒಳಪಂಗಡಗಳಿವೆ. ಇವರು ಕ್ರಮವಾಗಿ ವಿಷ್ಣು, ಶಿವ, ಬ್ರಹ್ಮನ ಆರಾಧಕರಾಗಿರುತ್ತಾರೆ, ಆದರೆ ಮಳಿಲೋರು ಮಾತ್ರ ಬ್ರಹ್ಮನೊಂದಿಗೆ ಬೇರೆಲ್ಲಾ ದೇವರುಗಳನ್ನು ಪೂಜಿಸುತ್ತಾರೆ. ಮಳಿಲೋರು ಎಲ್ಲ ಬೆಡಗು (ಒಳಪಂಗಡ) ಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸುತ್ತಾರೆ ಅಂದರೆ ಇವರು ಎಲ್ಲ ಕುಲಕ್ಕೂ (ಬೆಡಗು) ನೆಂಟರಾಗಿ ನಡೆದುಕೊಳ್ಳುತ್ತಾರೆ. (ಕುಂಚಿಟಿ

ವಕ್ಕಲಿಗರಲ್ಲಿ ಈ ಬೆಡಗನ್ನೇ ಹೋಲುವ 'ಒಳಕಲ್ಲೋರು' ಎಂಬ ಅಪರೂಪದ ಬೆಡಗಿದೆ).

ಈ ಮೂರು ಪಂಗಡಗಳೊಂದಿಗೆ 'ಎಸುಮಲೋರು' (ಎಮ್ಮೆಯವರು) ಎಂಬ ಇನ್ನೊಂದು ಪ್ರಮುಖ ಪಂಗಡವೂ ಇದೆ. (ಕುಂಚಿಟಿ ವಕ್ಕಲಿಗರಲ್ಲೂ ಇದನ್ನೇ ಹೋಲುವ 'ಎಮ್ಮೆನೋರು' ಎಂಬ ಬೆಡಗು ಇದೆ). ಇವಲ್ಲದೆ ಅಲ್ಪ ಜನಸಂಖ್ಯೆ ಇರುವ ಅನೇಕ ಬೆಡಗುಗಳು ಇವೆ. (ಈ ಬೆಡಗುಗಳು ಅಣ್ಣ–ತಮ್ಮಂದಿತನ, ನೆಂಟ ತನ ನಿರ್ಧರಿಸಲು ಸಹಾಯಕವಾಗುತ್ತವೆ)

ಕಾಡುಗೊಲ್ಲರಿಗೂ, ಮ್ಯಾಸನಾಯಕರಿಗೂ ಅತ್ಯಂತ ಹತ್ತಿರದ ಅನೇಕ ಹೋಲಿಕೆ ಗಳಿರುವುದು ಸಮಾಜ ವಿಜ್ಞಾನಿಗಳಿಗೆ ಆಶ್ಚರ್ಯವನ್ನು ಉಂಟುಮಾಡುವುದರೊಂದಿಗೆ ಇವೆರಡೂ ಬುಡಕಟ್ಟುಗಳು ಮೂಲದಲ್ಲಿ ಒಂದೇ ಆಗಿದ್ದಿರಬಹುದೆಂಬ ಅನುಮಾನವನ್ನು ಹುಟ್ಟುಹಾಕುತ್ತವೆ. ಇಂತಹುದೇ ಸಾಮ್ಯಗಳು ಕುರುಬ ಮತ್ತು ಕುಂಚಿಟಿ ವಕ್ಕಲಿಗ ಜಾತಿಗಳೊಳಗೂ ಕಾಣಬಹುದು.

ಪ್ರಚಲಿತವಿರುವ ಜನಪದ ಕತೆಯೊಂದರ ಪ್ರಕಾರ – ಈಗ ಮ್ಯಾಸಬ್ಯಾಡರು ಮತ್ತು ಕಾಡುಗೊಲ್ಲರು ಎಂದು ಕರೆಯಲ್ಪಡುವ ಇವರು ಒಂದೇ ತಾಯಿಯ ಮಕ್ಕಳಂತೆ. ಇಬ್ಬರೂ ಗೋಪಾಲಕರಾಗಿದ್ದರು. ಬರ ಬಂದಾಗ ದನಗಳನ್ನು ಪಡುವಲ ಸೀಮೆಗೆ ತಿರುಗಿಸಿದರು. ಬಹಳಷ್ಟು ದಿನಗಳಿಂದ ಆಹಾರವಿಲ್ಲದೆ ಹಸಿವಿನಿಂದ ಕಂಗೆಟ್ಟಿದವನು ತಡೆಯಲಾರದೆ, ಆಗತಾನೆ ಈದ (ಜನನವಾದ) ಕುಂಟ ಆಕಳು ಕರುವಿನ ತೊಡೆಯನ್ನು ಕಿತ್ತುಕೊಂಡು ತಿಂದನಂತೆ. ಇದನ್ನು ನೋಡಿದ ದೊಡ್ಡವನು 'ಅಯ್ಯೋ, ಕಂಕಾ (ಅನಾಗರೀಕ) ಎಂಥಾ ಕೆಲ್ಸ ಮಾಡಿದಿಯೋ' ಎಂದು ಬಯ್ದನಂತೆ, ಅಂದಿನಿಂದ ಅವರು ಬೇರೆಯಾದರಂತೆ. 'ಕಂಕಾ' ಎಂದು ಕರೆಯಲ್ಪಟ್ಟವನು ಮುಂದೆ 'ಮ್ಯಾಸನಾಯಕ' ನೆನಿಸಿಕೊಂಡನಂತೆ; ಉಳಿದವನು ತನ್ನ 'ಗೊಲ್ಲ'ತನವನ್ನು ಹಾಗೇ ಉಳಿಸಿಕೊಂಡನಂತೆ.

ಈ ಕತೆಯನ್ನು ಸಮರ್ಥಿಸುವಂತೆ ಅನೇಕ ಆಚಾರ - ವಿಚಾರಗಳು ಒಂದೇ ಆಗಿರುವುದನ್ನು ಈ ಕೆಳಕಂಡಂತೆ ಗುರುತಿಸಬಹುದು—

ಗೊಲ್ಲರಲ್ಲಿ - ಕಾಡುಗೊಲ್ಲರು, ಊರು ಗೊಲ್ಲರು ಇರುವಂತೆ, ನಾಯಕರಲ್ಲಿ ಮ್ಯಾಸನಾಯಕರು, ಊರು ನಾಯಕರು ಎಂಬ ಎರಡು ಪ್ರಭೇಧಗಳಿವೆ.

ಹಳೆಯ ತಲೆಮಾರಿನ ಮ್ಯಾಸನಾಯಕರ ಯಜಮಾನರು ಕಾಡುಗೊಲ್ಲರಂತೆ ತಲೆ ಗೂದಲನ್ನು ಕತ್ತರಿಸದೆ 'ತುರುಬು' ಕಟ್ಟುವುದನ್ನು ಇಂದೂ ಕಾಣಬಹುದು. (ಆದರೆ ಕೆಲವರು ಮುಂದಲೆಯ ಕೂದಲನ್ನು ಚಂದ್ರಾಕಾರವಾಗಿ ಕತ್ತರಿಸಿರುತ್ತಾರೆ). ಕಾಡು

ಗೊಲ್ಲರ ಹೆಂಗಸರು ಮೇಲು ರವಿಕೆ (ಕುಪ್ಪುಸ) ತೊಡದಿರುವಂತೆ, ಹಳೆಯ ಕಾಲದ ಮ್ಯಾಸಬೇಡರ ಹೆಂಗಸರೂ ರವಿಕೆ ತೊಡುವುದಿಲ್ಲ ; ಕಾಡುಗೊಲ್ಲರ ಹೆಂಗಸರು ಮುಂಗೈಗೆ 'ಗೊಲ್ಲಕಡಗ' ಧರಿಸಿದರೆ, ಅದನ್ನೇ ಹೋಲುವಂತಹ 'ಬದ್ದು' ಎಂಬ ಹಿತ್ತಾಳೆಯ ಆಭರಣವನ್ನು ಇವರು ಮುಂಗೈಗೆ ತೊಡುತ್ತಾರೆ.

ಕಾಡುಗೊಲ್ಲರ ಹಾಗೆ ಇವರೂ ಕೂಡ ಹಟ್ಟಿಯನ್ನು ಊರ ಹೊರವಲಯದಲ್ಲಿ ಪ್ರತ್ಯೇಕವಾಗಿ ಹಾಕಿಕೊಂಡು ಜನಸಂಪರ್ಕದಿಂದ ದೂರವಿರುತ್ತಾರೆ. ಬಹಳಷ್ಟು ಕಡೆ ಗಳಲ್ಲಿ ಕಾಡುಗೊಲ್ಲರ ಮತ್ತು ಮ್ಯಾಸಬೇಡರ ಹಟ್ಟಿಗಳು ಅಕ್ಕಪಕ್ಕದಲ್ಲೇ ಇರುತ್ತವೆ.

ಕಾಡುಗೊಲ್ಲರಂತೆ ಇವರೂ ಹಟ್ಟಿಯ ಸುತ್ತ ಕಳ್ಳಿಬೇಲಿಯನ್ನು ಹಾಕುತ್ತಾರೆ, ಜೊತೆಗೆ ಕಾಡುಗೊಲ್ಲರಂತೆ ಕೋಳಿಯನ್ನು ಹಟ್ಟಿಯೊಳಗೆ ಸೇರಿಸುವುದಿಲ್ಲ, ಸೇವಿಸು ವುದೂ ಇಲ್ಲ. (ಆದರೆ ಈಗೀಗ ಈ ಬಿಗಿಯಾದ ಕಟ್ಟು-ನಿಟ್ಟು ಸಡಿಲವಾಗುತ್ತಿದೆ.)

ಈ ಎರಡೂ ಜನಾಂಗಗಳ ಪ್ರಮುಖ ದೈವಗಳಾದ ಕಾಟಲಿಂಗ, ಚಿತ್ರಲಿಂಗ ದೇವರುಗಳು ಒಂದೇ ಆಗಿವೆ ; ಈ ಎರಡೂ ಜನಾಂಗಗಳು 'ಥಗಮು'[10] ಎಂಬ ವಿಶಿಷ್ಟ ವಾದ್ಯವನ್ನು ತಮ್ಮ ದೇವರಿಗೆ ಬಳಸುತ್ತಾರೆ.

ಕಾಡುಗೊಲ್ಲರಿಗೆ ಸಾಂಸ್ಕೃತಿಕ ವೀರರೂ ಹಾಗೂ ಗೋಪಾಲಕರೂ ಆಗಿದ್ದ ಎತ್ತಪ್ಪ - ಜುಂಜಪ್ಪಗಳು ಹೇಗೆ ಆರಾಧ್ಯ ದೈವಗಳೋ ಹಾಗೆ ಮ್ಯಾಸಬೇಡರಲ್ಲೂ ಗೋಪಾಲಕರಾಗಿದ್ದ ಗಾದಿರಿ ಪಾಲನಾಯಕ, ಜಗಲೂರು ಪಾಪನಾಯಕರು ಆರಾಧ್ಯ ದೈವಗಳೂ, ಸಾಂಸ್ಕೃತಿಕ ವೀರರೂ ಆಗಿದ್ದಾರೆ.

ಕಾಡುಗೊಲ್ಲರಲ್ಲಿ ಜುಂಜಪ್ಪನಿಗೆ ದನಗಳನ್ನು ಬಿಡುವಂತೆ, ಮ್ಯಾಸನಾಯಕರೂ ದನಕರುಗಳನ್ನು ತಮ್ಮ ದೇವರುಗಳಿಗೆ ಬಿಡುತ್ತಾರೆ. ದೇವರ ದನಗಳನ್ನು ಕಾಯುವವ ರನ್ನು 'ಎತ್ತಿನ ಕಿಲಾರಿ' ಎನ್ನುತ್ತಾರೆ. ಈ ದನಗಳನ್ನು ಮಾರಾಟ ಮಾಡುವಂತಿಲ್ಲ, ಸತ್ತರೆ ಅವನ್ನು ಕೊಯ್ಯಲು ಕೊಡುವಂತಿಲ್ಲ, ಅವನ್ನು 'ಮಣ್ಣು' ಮಾಡಿ ಭಕ್ತಿಯಿಂದ ಪೂಜಿಸುತ್ತಾರೆ. ಕಾಡುಗೊಲ್ಲರೂ ಜುಂಜಪ್ಪನ ಬಸವಗಳನ್ನು ಕುರಿತು ಇದೇ ಸಂಪ್ರ ದಾಯವನ್ನು ಅನುಸರಿಸುತ್ತಾರೆ.

ಹೊಳಲ್ಕೆರೆ ಮತ್ತು ನಾಯಕನಹಟ್ಟಿ ಭಾಗದಲ್ಲಿರುವ ಕೆಲವು ಮ್ಯಾಸನಾಯಕರು ಈಚಲುಚಾಪೆಯ ಮೇಲೆ ಕೂರುವುದಿಲ್ಲ, ಕಸ ತೆಗೆಯಲು ಈಚಲು ಪೊರಕೆಗಳನ್ನೂ ಬಳಸುವುದಿಲ್ಲ ! ಹೆಂಡ ಕೊಡುವ ಹೊಲಸುಮರದ ಈಚಲು ಗರಿಯನ್ನು ಬಳಸಿದರೆ 'ಮೈಲಿಗೆ'ಯಾಗುತ್ತದೆ ಎಂಬ ನಂಬಿಕೆ ಅವರದು.

ಇವರು ಅಣ್ಣ-ತಮ್ಮಂದಿರಾಗಿದ್ದಿರಬಹುದು ಎಂಬುದನ್ನು ಸಮರ್ಥಿಸುವಂತಿರುವ ವಿಶಿಷ್ಟ ಆಚರಣೆ[11] ಚಳ್ಳಕೆರೆ ತಾಲ್ಲೂಕಿನ ಮತ್ಸಮುದ್ರ ಗ್ರಾಮದಲ್ಲಿ ಹನುಮಂತರಾಯನ 'ಕಾರ್ತೀಕ' ಉತ್ಸವದಲ್ಲಿ ನಡೆಯುತ್ತದೆ. ಹಗ್ಗಗಳಿಂದ ನಿಲ್ಲಿಸಲ್ಪಟ್ಟ 40 ಅಡಿ ಎತ್ತರವಿರುವ ಕಂಬದ ಬುಡದಲ್ಲಿ ಸಣ್ಣ ವೃತ್ತಾಕಾರದ ಪಾತಿಮಾಡಿ ನೀರು ತುಂಬುತ್ತಾರೆ, ಕಂಬದ ತುದಿಯಲ್ಲಿ ಗೂಡಿನ ಆಕಾರದಲ್ಲಿ ನಿರ್ಮಿಸಿದ ಕಮಾನಿಗೆ ನಾಲ್ಕೂ ಮೂಲೆಗಳಲ್ಲಿ ನಾಲ್ಕು ಅಡ್ಡಗೂಟ ಬಡಿದಿರುವ ಹಸಿ ತೆಂಗಿನಕಾಯಿಗಳನ್ನು ತೂಗುಬಿಟ್ಟಿರುತ್ತಾರೆ, ಜೊತೆಗೆ ಬಟ್ಟೆಗಳಲ್ಲಿ ಹಲವು ತಿನಿಸುಗಳ ಗಂಟುಕಟ್ಟಿ, ಎಣ್ಣೆ-ಮಡಕೆ ಹಿಡಿದ ವ್ಯಕ್ತಿಯೊಬ್ಬ ಕಂಬದ ತುದಿಯಲ್ಲಿ ಕೂತಿರುತ್ತಾನೆ. ಈ ಕಂಬದ ಮೈಗೆ ಜೇಡಿಮಣ್ಣಿನ ಬುರುಜೆ ಮತ್ತು ಎಣ್ಣೆಯನ್ನು ಜಾರುವಂತೆ ಬಳಿದಿರುತ್ತಾರೆ. ಇದು ಕೃಷ್ಣ ಗೋಕುಲದಲ್ಲಿ ಬೆಣ್ಣೆ ಕದಿಯುತ್ತಿದ್ದ ಮೊಸರು, ಹಾಲುಗಳನ್ನು ಇಡುತ್ತಿದ್ದ 'ನೆಲವು' ನನಪಿಗೆ ತರುವಂತಿದೆ, ಜೊತೆಗೆ ಇದನ್ನು ತೆಲುಗಿನಲ್ಲಿ 'ಉಟ್ಲು' ಎನ್ನುತ್ತಾರೆ - ಅಂದರೆ 'ನೆಲವು' ಎಂದೇ ಅರ್ಥ; ಅದಕ್ಕಾಗಿಯೇ ಇದನ್ನು 'ಉಟ್ಲು ಮರ' ಎಂದು ಕರೆಯುತ್ತಾರೆ. ಈ ಕಂಬವನ್ನು ಹತ್ತಿ ಇನ್ನೇನು ತುದಿಮುಟ್ಟಿದೆವು ಎನ್ನುವಾಗ ಮೇಲಿನಿಂದ ಜರ್ರನೆ ಜಾರುವ ಈ ರೋಮಾಂಚಕಾರಿ ಆಟ ಕೆಲವೊಮ್ಮೆ ಪ್ರಾಣಕ್ಕೂ ಸಂಚಕಾರ ತರುತ್ತದೆ. ಈ ಕಂಬವನ್ನು ಹತ್ತುವ ಹಕ್ಕು ಗೊಲ್ಲರದು, ಅವರು ಹತ್ತುವ ಶಾಸ್ತ್ರಮಾಡಿ, ಅನುಮತಿಕೊಟ್ಟ ನಂತರವೇ ಮ್ಯಾಸನಾಯಕರು ಈ ಕಂಬ ಹತ್ತುತ್ತಾರೆ; ಇಲ್ಲಿ ಇವರು ಅಣ್ಣ - ತಮ್ಮಂದಿರಂತೆ ನಡೆದುಕೊಳ್ಳುತ್ತಾರೆ.

ಮ್ಯಾಸನಾಯಕರ ಹೆಣ್ಣಿಗೂ, ಕಾಡುಗೊಲ್ಲನೊಬ್ಬನಿಗೂ ವಿವಾಹವಾದದ್ದರಿಂದ ಕಾಡುಗೊಲ್ಲರಲ್ಲಿ 'ತಾಳಿಕಟ್ಟದ ಗೊಲ್ಲರು' ಎಂಬ ವಿಶಿಷ್ಟ ಬೆಡಗು ಹುಟ್ಟಿಕೊಳ್ಳಲು ಕಾರಣವಾಗುವ ಕತೆ[12] ಈ ಎರಡೂ ಜನಾಂಗಗಳ ಮಧ್ಯೆ ನಡೆದಿರಬಹುದಾದ ಸಂಬಂಧಗಳ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ.

ಹರತಿಕೋಟೆಯ ರಾಜನ ಮಕ್ಕಳಲ್ಲಿ ಒಬ್ಬಳಾದ ಕರಿಯೋಬಿಯನ್ನು ಬಸವಿಗೆ ಬಿಟ್ಟಿದ್ದರು. (ಇತಿಹಾಸ ಈ ಬಗ್ಗೆ ಮೌನವಾಗಿದೆ.) ಆಕೆ ಪ್ರತ್ಯೇಕವಾದ ಅರಮನೆ ಕಟ್ಟಿಸಿಕೊಂಡು ಅರಮನೆಯ ಮುಂದೆ - "ಕಪ್ಪೆ ಕಲಕದ ನೀರು, ಬಿಸಿಲಿಗೆ ಬಾಡದ ಹೂವು, ನಾಲ್ಕು ಏಣಿನ ಹಸಿರುಕಲ್ಲು ಕಂಬ, ತಲೆಗೆ ಮೆತ್ತನೆ ಕಲ್ಲು, ಕಾಯಿಸದೆ ಆಗಿರೋ ತುಪ್ಪ, ಒಂದು ಕೊಂಬಿನ ಮೇಕೆ ಹೋತ ತಂದುಕೊಟ್ಟವರಿಗೆ ಭೋಗ ಕೊಡ್ತೀನಿ. ಇವನ್ನು ತರದೆ ಸೋತವನು ಸಾವಿರ ವರಹ ದಂಡ ಕೊಡಬೇಕು" ಎಂದು ಶಾಸನ ಹಾಕಿಸಿದ್ದಳು. ಹೀಗೆ ಸೋತವರಿಂದ ಏಳುಕೊಪ್ಪರಿಗೆ ವರಹ ಸಂಪಾದಿಸಿದ್ದಳು. ಈ ಸುದ್ದಿ ಕೇಳಿದ ಹಟ್ಟಿ ಮಲ್ಲಪ್ಪನಾಯಕ (ಹಟ್ಟಿ ಪಾಳೆಯಗಾರರಲ್ಲಿ ಲಫಂಗನಾಗಿದ್ದ ಚಿಕ್ಕಮಲ್ಲಪ್ಪನಾಯಕ ಇರಬಹುದೇ?) ಬಂದು ಆಕೆಯ ಒಡಪನ್ನು ಬಿಡಿಸಲಾರದೆ

ಅನೇಕ ಬುಡಕಟ್ಟುಗಳಲ್ಲಿ ಸಾವು ಸಂಭವಿಸಿದ ನಂತರ ನಿರ್ದಿಷ್ಟ ದಿನಗಳವರೆಗೆ ರಕ್ತಸಂಬಂಧಿಗಳು ಉಪವಾಸ ಮಾಡುತ್ತಾರೆ ಅಥವಾ ಮಾಂಸ, ಉಪ್ಪು, ಎಣ್ಣೆ, ನೀರು - ಇಂಥವುಗಳನ್ನು ಅವರು ಮುಟ್ಟುವುದಿಲ್ಲ. ಅವರು ತಮ್ಮ ಕೂದಲನ್ನು ತೊಳೆಯದೆ. ಹೊಸ ಬಟ್ಟೆಗಳನ್ನು ಧರಿಸದೆ, ಪುರುಷನ್ನು ಜೇಟೆಮಾಡದೆ ಹೆಂಗಸು, ಕಾಡಿನಲ್ಲಿ ಆಹಾರ ಸಂಗ್ರಹಣೆ ನಡೆಸದೆ ಸೂತಕ ಅನುಭವಿಸುತ್ತಾರೆ. ಅನೇಕ ಬುಡಕಟ್ಟುಗಳಲ್ಲಿ ಮೊದಲು ಹುಟ್ಟಿದ ಮಗುವನ್ನು ಕಳೆದುಕೊಂಡ ತಂದೆತಾಯಿಗಳು ಕೆಲವೊಮ್ಮೆ ಕಠಿಣ ನಿಯಮಗಳಿಗೆ ಒಳಪಡಬೇಕಾಗುತ್ತದೆ. ಅವರು ಪ್ರತ್ಯೇಕವಾಗಿರಬೇಕು. ಸಂಭೋಗ ನಡೆಸಬಾರದು, ಉಪವಾಸ ಮಾಡಬೇಕು, ಸ್ನಾನ ಮಾಡಬಾರದು, ನಿಯಮಿಸಿದಷ್ಟು ದಿನ ಅಥವಾ ತಿಂಗಳು ಕಾಲ ಪ್ರಲಾಪಿಸುತ್ತಿರಬೇಕು. ಅನೇಕ ಸಂದರ್ಭಗಳಲ್ಲಿ ಮಗುವಿನ ತಾಯಿ ಕೂದಲನ್ನು ಚಿಕ್ಕದಾಗುವಂತೆ ಕತ್ತರಿಸಿಕೊಳ್ಳಬೇಕು ಇಲ್ಲವೇ ಸುಟ್ಟುಕೊಳ್ಳಬೇಕು. ಶೋಕಾವಧಿ ಮುಗಿಯುವಾಗ ವಿಧಿಬದ್ಧವಾದ ಶುದ್ಧೀಕರಣ (ಸಾಮಾನ್ಯವಾಗಿ ವಿಧಿಬದ್ಧವಾದ ಸ್ನಾನ ಅಥವಾ ಧೂಪಗಳ ಹೊಗೆಯ ಸ್ನಾನ) ನಡೆಯಬೇಕು. ದಂಪತಿಗಳಲ್ಲಿ ಒಬ್ಬರು ಸತ್ತಾಗ ವಿಶೇಷವಾಗಿ ವಿಧವೆಯರು ಕೆಲ ಮಟ್ಟಿಗೆ ವಿಧುರರೂ ನಿಷ್ಠುರವಾಗಿ ನಿಷೇಧಗಳಿಗೆ ಒಳಗಾಗುತ್ತಿದ್ದರು. ಅನೇಕ ಬುಡಕಟ್ಟುಗಳಲ್ಲಿ ವಿಧವೆಯರು ಪ್ರತ್ಯೇಕವಾಗಿರಬೇಕಾಗುತ್ತಿತ್ತು. ಕೂದಲನ್ನು ಚಿಕ್ಕದಾಗಿ ಕತ್ತರಿಸಿಕೊಳ್ಳಬೇಕಿತ್ತು. ಕೂದಲು ಹಾಗೂ ಮೈಯನ್ನು ಬೂದಿ, ಕಪ್ಪು ರಾಳ ಅಥವಾ ಜೇಡಿಮಣ್ಣಿನಿಂದ ಮೆತ್ತಿಕೊಳ್ಳಬೇಕಾಗಿತ್ತು. ತಮ್ಮನ್ನೇ ಕತ್ತರಿಸಿಕೊಳ್ಳಬೇಕಿತ್ತು. ಅಥವಾ ಬೆರಳ ಒಂದು ಗೆಣ್ಣನ್ನಾದರೂ ಕತ್ತರಿಸಿಕೊಳ್ಳಬೇಕಿತ್ತು. ಕೆಲವು ಬಾರಿ ಸತೀಹೋಗಬೇಕಿತ್ತು. ಅವರ ಪತಿಯ ಬಂಧುಗಳು ವಿಧಿಯುಕ್ತವಾದ ಬಿಡುಗಡೆ ಮಾಡಿದ ನಂತರವೇ ಅವರು ದಿನನಿತ್ಯದಂತೆ ಜೀವನ ನಡೆಸಬಹುದಿತ್ತು, ಪುನಃ ಮದುವೆಯಾಗಬಹುದಿತ್ತು. ಗೋರಿಯನ್ನು ಅಗೆಯುವವರೂ ಹಾಗೂ ಹೆಣವನ್ನು ಹೊರುವವರೂ ಶವಸಂಸ್ಕಾರದ ನಂತರ ಬಂಧುಗಳು ವಿಧಿಸಿದ ಅನೇಕ ನಿಷಿದ್ಧಗಳನ್ನೂ ಪಾಲಿಸಬೇಕಾಗುತ್ತದೆ. ಕೆಲವು ಬುಡಕಟ್ಟುಗಳಲ್ಲಿ ಮೃತ ಶಿಶುವಿನ ಅಥವಾ ಸಂಗಾತಿಯ ಮೂಳೆಗಳನ್ನು ಹೊರೆ ಮಾಡಿ, ತಾಯಿ ಅಥವಾ ವಿಧವೆಯಾದವಳು ಒಂದು ವರುಷ ಅಥವಾ ಅದಕ್ಕಿಂತ ಹೆಚ್ಚು ಕಾಲ ಬೆನ್ನ ಮೇಲೆ ಹೊತ್ತುಕೊಂಡು ತಿರುಗುತ್ತಾಳೆ.

ಕೊನೆಯ ಪಕ್ಷ ಭೂಖಂಡದ ಮೂರು ಭಾಗಗಳಲ್ಲಿ ಹಿಂದಿನ ವರುಷ ಮೃತರಾದ ಎಲ್ಲ ವ್ಯಕ್ತಿಗಳ ಅಥವಾ ಒಬ್ಬ ವ್ಯಕ್ತಿಯ ಗೌರವಾರ್ಥ ಬಹು ವಿಸ್ತೃತವಾದ ಸ್ಮರಣ ಶೋಕ ಸಮಾರಂಭಗಳನ್ನು ನಡೆಸುತ್ತಾರೆ. ಇನ್ನೂ ಅನೇಕ ಬುಡಕಟ್ಟುಗಳವರು ಮೃತರ ಗೌರವಾರ್ಥ ಸಣ್ಣ ಪ್ರಮಾಣದ ಉತ್ಸವ ಅಥವಾ ಸಮಾರಂಭಗಳನ್ನು ನಡೆಸುತ್ತಿದ್ದರು. ಎಸ್ಕಿಮೋಗಳು ಮೃತರ ಸ್ಮರಣಾರ್ಥ ಉತ್ಸವಗಳನ್ನು ನವೆಂಬರ್ ತಿಂಗಳ ಉತ್ತರಾರ್ಧದಲ್ಲಿ ಆಚರಿಸುತ್ತಾರೆ. ಸಮೀಪ ಬಂಧುಗಳು ಅತಿಥೇಯರಾಗಿರು

ತ್ತಾರೆ. ಮೃತರು ಮನೆಯ ನೆಲದಡಿ ಇರುತ್ತಾರೆ. ತಮ್ಮ ಗೌರವಾರ್ಥ ನಡೆಸುವ ಆಚರಣೆಗಳನ್ನು ಅವರು ಆನಂದಿಸುತ್ತಾರೆ. ತಮಗೆ ಕೊಟ್ಟ ಆಹಾರ, ಪಾನೀಯ ಗಳನ್ನು ಸೇವಿಸುತ್ತಾರೆ. ತಮ್ಮ ಹೆಸರಿಗೆ ಕಾಣಿಕೆಯಾಗಿ ಕೊಟ್ಟ ವಸ್ತುಗಳನ್ನು ಸ್ವೀಕರಿಸುತ್ತಾರೆ. ಉತ್ತರ ಫೆಸಿಫಿಕ್ ಉತ್ಸವದಲ್ಲಿ ಮೃತರ ಆತ್ಮಗಳು ಹಾಜರಿರು ತ್ತವೆ. ಅವರಿಗೆ ಆಹಾರವನ್ನು ಬೆಂಕಿಯ ಮೂಲಕ ಕೊಡಲಾಗುತ್ತದೆ. ಇತರೆಡೆ ಗಳಲ್ಲೂ ಮೃತರಿಗಾಗಿ ಇಂತಹ ಕೌಟುಂಬಿಕ ಉತ್ಸವವನ್ನು ಆಚರಿಸಲಾಗುತ್ತದೆ. ಮಹಾಸಾಗರ ಪ್ರದೇಶದ ಹೂರನ್‌ರು ಜಲಪಾತದಲ್ಲಿ ಮಡಿದವರಿಗಾಗಿ ಒಂದು ವಿಶೇಷ ಸಮಾರಂಭ ಆಚರಿಸುತ್ತಿದ್ದರು. ಆ ವರುಷದಲ್ಲಿ ಮೃತರಾದವರೆಲ್ಲರನ್ನೂ ಬಂಧುಗಳು ಗೋರಿಯಿಂದ ಹೊರತೆಗೆದು ಎಲುಬುಗಳ ಮೇಲಿನ ಮಾಂಸವೆಲ್ಲವನ್ನೂ ತೆಗೆದು ಸ್ವಚ್ಛ ಪಡಿಸಿ ಅವುಗಳನ್ನು ಬೆಲೆಬಾಳುವ ಚರ್ಮದಲ್ಲಿ ಸುತ್ತಿ ಕುಲದವರು ಹುಗಿಯುವ ಗುಂಡಿ ಯಲ್ಲಿ ಪುನಃ ಹುಗಿಯುತ್ತಿದ್ದರು. ಕೂದಲನ್ನು ಕತ್ತರಿಸುವುದು ದಕ್ಷಿಣ ಅಮೆರಿಕಾದ ಶವಸಂಸ್ಕಾರದ ವಿಧಿಗಳಲ್ಲಿ ಬಹು ಸಾಮಾನ್ಯವಾಗಿ ಆಚರಿಸಲ್ಪಡುವ ಒಂದು ವಿಧಿ. ಬಂಧುಗಳ ಕೂದಲು ತಕ್ಕಷ್ಟು ಉದ್ದ ಬೆಳೆದಾಗ ಸಾಮಾನ್ಯವಾಗಿ ಈ ಶೋಕಾವಧಿ ಮುಕ್ತಾಯಗೊಳ್ಳುತ್ತದೆ. ಶೋಕಿಸುವವರು ಆಭರಣಗಳನ್ನು ತ್ಯಜಿಸುತ್ತಾರೆ. ತಮ್ಮ ವೇಷಭೂಷಣಗಳ ಬಗ್ಗೆಯೂ ಉದಾಸೀನ ತಾಳುತ್ತಾರೆ. ಎಷ್ಟೋ ವೇಳೆ ಅವರು ತಮ್ಮ ಮುಖ ಅಥವಾ ದೇಹವನ್ನು ಇಜ್ಜಲಿನಿಂದ ಅಥವಾ ಜೆನಿಪಾದಿಂದ ಕಪ್ಪು ಮಾಡಿಕೊಳ್ಳುತ್ತಾರೆ. ಕೆಲವು ಪ್ರದೇಶಗಳಲ್ಲಂತೂ (ಮಕೂಶಿ) ಕೆಂಪುಬಣ್ಣ ಶೋಕದ ವರ್ಣವೇ ಆಗಿದೆ. ಆಂಡಿಯನ್ ಪ್ರದೇಶದಲ್ಲಿ ಶೋಕವನ್ನು ಆಚರಿಸುವವರು ಕಪ್ಪು ಉಡುಗೆಯನ್ನು ಧರಿಸುತ್ತಿದ್ದರು. ಚಾಕೊ ಬುಡಕಟ್ಟಿನ ವಿಧವೆಯರು ತಲೆಯ ಮೇಲೆ ಒಂದು ಬಲೆಯ ಚೀಲವನ್ನು ಹಾಕಿಕೊಳ್ಳುತ್ತಿದ್ದರು ಇಲ್ಲವೇ ಬಟ್ಟೆಯ ತುಂಡಿ ನಿಂದ ತಲೆಯನ್ನು ಮುಚ್ಚಿಕೊಳ್ಳುತ್ತಿದ್ದರು. ಶೋಕಿಸುವವರು ಕೆಲವು ಆಹಾರಗಳನ್ನು ಸ್ವೀಕರಿಸುವುದಿಲ್ಲ, ಇಲ್ಲವೇ ಕಠಿಣ ಪಥ್ಯವನ್ನು ಮಾಡುತ್ತಾರೆ. ಮೃತರ ಹೆಸರು ನಿಷಿದ್ಧವಾಗುತ್ತದೆ. ಒಂದು ವೇಳೆ ಅದು ಸಾಮಾನ್ಯವಾಗಿ ಬಳಕೆಯಾಗುವ ಪದ ಗಳನ್ನು ಒಳಗೊಂಡಿದ್ದರೆ ಆ ಪದಗಳೂ ತ್ಯಾಜ್ಯವಾಗುತ್ತವೆ. ಚಾಕೋದಲ್ಲಿ ಮೃತನ ಅತಿಸಮೀಪದ ಬಂಧುಗಳು ಹೊಸ ಹೆಸರುಗಳನ್ನಿಟ್ಟುಕೊಳ್ಳುತ್ತಾರೆ.

ಅನೇಕ ಬುಡಕಟ್ಟುಗಳಲ್ಲಿ ನೆಲದ ಮೇಲೆ ಬಿದ್ದು ಹೊರಳಾಡುವುದರ ಮೂಲಕ (ಗುವರಾನಿ, ಅಪಿನಾಯಿ) ಅಥವಾ ತಮ್ಮ ದೇಹಗಳನ್ನು ಚೂಪಾದ ವಸ್ತುಗಳಿಂದ ಚುಚ್ಚಿಕೊಳ್ಳುವುದರ ಮೂಲಕ (ಒನಾ, ಟೆಹೂಲ್ಚೆ, ಪಾಂಪ, ಕಯೂಪೊ) ಶೋಕಿಸು ವವರು ತಮ್ಮ ದುಃಖವನ್ನು ವ್ಯಕ್ತಪಡಿಸುತ್ತಾರೆ. ಪರಾನಾ ಬುಡಕಟ್ಟಿನ ಮುಖಜ ಭೂಮಿಯ ಪುರಾತನ ಬುಡಕಟ್ಟುಗಳಲ್ಲಿ ಹೆಂಗಸರು ತಮ್ಮ ಬೆರಳುಗಳ ಒಂದು ಗೆಣ್ಣನ್ನು ಕತ್ತರಿಸಿಕೊಳ್ಳುತ್ತಿದ್ದರು.

ಸಾವು ಸಂಭವಿಸಿದ ಕೂಡಲೆ ಅಥವಾ ಶವಸಂಸ್ಕಾರವಾದ ಕೂಡಲೆ ಬಂಧುಗಳು ಸಾಮಾನ್ಯವಾಗಿ ಜೀವಂತವಾಗಿ ಉಳಿದಿರುವ ಸಂಗಾತಿ - ಸತ್ತ ವ್ಯಕ್ತಿಯ ಗುಣಗಾನ ಮಾಡುತ್ತ ತಮ್ಮನ್ನು ತೊರೆದುಹೋದುದಕ್ಕೆ ಅಳುತ್ತಾರೆ. ಕಳೆದುಕೊಂಡುದರಿಂದ ಆದ ನಷ್ಟವನ್ನು ಬಣ್ಣಿಸುತ್ತಾರೆ. ಶವಸಂಸ್ಕಾರದ ಶೋಕಗಳೆಂದರೆ ಪ್ರಲಾಪಿಸುವುದು, ಅಳುವುದು ಅಥವಾ ಗೋಳುದನಿಯಲ್ಲಿ ಹೇಳಿದ್ದನ್ನೇ ಹೇಳುವುದು. ಅವು ಸಾಮಾನ್ಯ ವಾಗಿ ಅರ್ಥವಿಲ್ಲದ ಉಚ್ಚಾರಗಳೇ ಆಗಿದ್ದರೂ ಕೆಲವೊಮ್ಮೆ ಅವು ದುಃಖ ಮತ್ತು ವಿಷಾದದ ಅಭಿವ್ಯಕ್ತಿಯನ್ನು ಒಳಗೊಂಡಿರುತ್ತವೆ. ಸಾಮಾನ್ಯವಾಗಿ ಮುಂಬೆಳಗಿನಲ್ಲಿ ಇಲ್ಲವೇ ಮುಸ್ಸಂಜೆಯಲ್ಲಿ ಈ ಪ್ರಲಾಪ ನಡೆಯುತ್ತದೆ. ಶವವನ್ನು ಹೂಳಿದ ನಂತರ ಕೆಲವೊಮ್ಮೆ ನೃತ್ಯಗಳನ್ನು ಅಭಿನಯಿಸಲಾಗುತ್ತದೆ. ಶೋಕಿಸುವವರು ದುಷ್ಟ ಪ್ರಭಾವಗಳಿಂದ ಹಾಗೂ ಸಾವಿನ ಸೋಂಕಿನಿಂದ ತಮ್ಮನ್ನು ಶುದ್ಧಿಗೊಳಿಸಿಕೊಳ್ಳುವುದ ಕ್ಕಾಗಿ ನದಿಯಲ್ಲಿ ಸ್ನಾನ ಮಾಡುತ್ತಾರೆ ಅಥವಾ ಬೆಂಕಿಯನ್ನು ದಾಟುತ್ತಾರೆ. ದಕ್ಷಿಣ ಅಮೆರಿಕದಾದ್ಯಂತ ನಾಗರೀಕರು ಹಾಗೂ ಬುಡಕಟ್ಟಿನ ಜನಗಳೆಲ್ಲರೂ ಸತ್ತವನ ಸ್ವಂತ ವಸ್ತುಗಳನ್ನು ಆತನೊಂದಿಗೇ ಹೂಳುತ್ತಾರೆ ಅಥವಾ ಒಡೆದುಹಾಕುತ್ತಾರೆ. ಇಲ್ಲವೇ ಸುಟ್ಟುಬಿಡುತ್ತಾರೆ. ವಿಶೇಷ ಬೆಲೆಯುಳ್ಳ ಕಲ್ಲಿನ ಕಠಾರಿ ಮತ್ತು ತೋಡುದೋಣಿ ಅಂತಹವನ್ನು ಮಾತ್ರ ಮೃತನ ಪೀಳಿಗೆಯವರು ಉಳಿಸಿಕೊಳ್ಳಬಹುದು. ಮೃತ ವ್ಯಕ್ತಿಗೆ ಸೇರಿದಂತಹ ಸಾಕುಪ್ರಾಣಿಗಳನ್ನು ಸಾಮಾನ್ಯವಾಗಿ ಆತನ ಗೋರಿಯ ಮೇಲೆ ಕತ್ತರಿಸಲಾಗುತ್ತಿತ್ತು. ಪ್ರಬಲರಾದ ಮುಖ್ಯಸ್ಥರೂ ರಾಜರೂ ಇರುವಂತಹ ಪ್ರದೇಶಗಳಲ್ಲಿ ಆ ಅಧಿಪತಿಗಳ ಹೆಂಡಂದಿರನ್ನೂ ಮತ್ತು ಸೇವಕರನ್ನೂ ಸಹ ಅವ ರೊಂದಿಗೆ ಹೂಳಲಾಗುತ್ತಿತ್ತು. ಪೆರು, ಕೊಲಂಬಿಯಾ ವೆಸ್ಟ್ ಇಂಡೀಸ್ ಹಾಗೂ ಆಂಡಿಯನ್ ಪ್ರಭಾವಗಳು ಬಲವಾಗಿರುವಂತಹ ಕೆಳ ಪ್ರದೇಶದ ಭಾಗಗಳಲ್ಲಿ ಸತಿ ಹೋಗುವುದು, ಗುಲಾಮರನ್ನು ಬಲಿಕೊಡುವುದು ರೂಢಿಯಲ್ಲಿದ್ದಿತು. ಪ್ರೇತವು ಹಿಂದಿರುಗಿ ಬಂದು ಜೀವಂತವಾಗಿರುವವರನ್ನು ಹಾನಿ ಮಾಡುವುದನ್ನು ತಡೆಯುವುದ ಕ್ಕಾಗಿ ತಕ್ಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿತ್ತು. ಶೋಕಿಸುವವರ ಮನೆಯ ಮೆಟ್ಟಿಲುಗಳ ಮೇಲೆ ಬೂದಿಯನ್ನು ಚೆಲ್ಲಲಾಗುತ್ತಿತ್ತು. ಪ್ರೇತಗಳ ಎದುರಾಗಿ ಬಾಣ ಗಳನ್ನು ಅಥವಾ ಬೆಂಕಿಯ ಆಯುಧಗಳನ್ನು ಎಸೆಯುತ್ತಾರೆ.

ಶೋಕಾವಧಿಯ ಮುಕ್ತಾಯವನ್ನು ಸಹ ಸಾಮಾನ್ಯವಾಗಿ ಒಂದು ವಿಶೇಷ ಸಮಾರಂಭವನ್ನಾಗಿ ಆಚರಿಸಲಾಗುತ್ತದೆ. ಟುಕಾನೋ ಹಾಗೂ ಕೊಬಿಯುವೊಗಳು ಒಂದು ಮೊಗವಾಡದ ನೃತ್ಯವನ್ನು ಅಭಿನಯಿಸುತ್ತಾರೆ. ಇದರಲ್ಲಿ ಮೃತನ ಮನೆಯ ಮೇಲೆ ಆಕ್ರಮಣ ನಡೆಸಿದ ಪ್ರೇತಗಳು ಸೋತುಹೋಗುವುದನ್ನು ಸಂಕೇತಿಸಲಾಗು ತ್ತದೆ. ಟೂಪಿನಂಬಾಗಳು ಕುಡಿತದ ದೊಡ್ಡ ಸಮಾರಂಭ ನಡೆಸುತ್ತಾರೆ. ರುಕುಯೆನ್ ಮತ್ತು ಗಯಾನದ ಇತರ ಬುಡಕಟ್ಟಿನವರು ಅಭಿನಯಿಸುವ ನೃತ್ಯದಲ್ಲಿ ಅತಿಥಿಗಳು

ಪರಸ್ಪರ ಚಾ ಟೀಗಳಲ್ಲಿ ಹೊಡೆಯುತ್ತಾರೆ. ಕಯಿಂಗಾಂಗ್‌ರು ಮೃತನನ್ನು ಹೂಳಿದ ಅನೇಕ ತಿಂಗಳುಗಳ ನಂತರ ಒಂದು ದೊಡ್ಡ ಸಮಾರಂಭವನ್ನು ನಡೆಸಿ ಮೃತನೊಂದಿಗೆ ತಮ್ಮ ಎಲ್ಲ ಬಂಧನಗಳನ್ನು ತೊರೆಯುತ್ತಾರೆ. ಭಾರತದ ಕೆಲವು ಜಾತಿಗಳಲ್ಲಿ ಹತ್ತು ದಿನಗಳ ಶೋಕಾಚರಣೆ ಇರುತ್ತದೆ. ಇದಕ್ಕೆ ಹತ್ತು ದಿನಗಳ ಸೂತಕ ಎಂದು ಕರೆಯು ಲಾಗುತ್ತದೆ. ಗಂಡ ಸತ್ತಾಗ ಅವನ ವಿಧವೆಯು ಶೋಕದ ದ್ಯೋತಕವಾಗಿ ತಲೆ ಗೂದಲನ್ನು ಪೂರ್ತಿಯಾಗಿ ಕತ್ತರಿಸಿಕೊಳ್ಳಬೇಕು. ಸಾಯುವವರೆಗೂ ಅವಳು ಕೂದಲನ್ನು ಬೆಳೆಸುವಂತಿಲ್ಲ. ತನ್ನ ಸುಮಂಗಲಿ ಲಾಂಛನಗಳನ್ನು ತೆಗೆದುಹಾಕಿ ಕೆಂಪು ಅಥವಾ ಬಿಳಿಸೀರೆ ಉಡಬೇಕು. ಒಂದು ಹೊತ್ತೇ ಊಟಮಾಡಬೇಕು. ಹೀಗೆ ಸಾಯುವವರೆಗೂ ಶೋಕಾಚರಣೆ ಮಾಡಬೇಕು. ಹಿಂದಿನ ಕಾಲದಲ್ಲಾದರೆ ಗಂಡ ಸತ್ತಾಗ ಹೆಂಡತಿ ಚಿತೆಗೇರಬೇಕಿತ್ತು.

ನಾಯಕ ಜನಾಂಗ - ಒಂದು ನೋಟ

ವೀರಾಸಾಬಿಹಳ್ಳಿ ಶಿವಣ್ಣ

ಬುಡಕಟ್ಟು ಜನಾಂಗಗಳ ಅಧ್ಯಯನ ನಮ್ಮ ಸಾಂಸ್ಕೃತಿಕ ತಿಳುವಳಿಕೆಗೆ, ಸಮಾಜದ ಬಗೆಗಿನ ಒಳನೋಟಗಳಿಗೆ ಹೊಸ ಆಯಾಮಗಳನ್ನು ಒದಗಿಸುತ್ತದೆ. ಇಂತಹ ಸಾಂಸ್ಕೃತಿಕ - ಸಾಮಾಜಿಕ ಅಧ್ಯಯನ ಬ್ರಿಟೀಷರು ಭಾರತವನ್ನು ಆಳುತ್ತಿದ್ದ ಕಾಲದಿಂದಲೇ ನಡೆದು ಬಂದಿದೆ. ಅನೇಕ ವಿದೇಶಿ ವಿದ್ವಾಂಸರು ಗಣನೀಯ ಸೇವೆ ಸಲ್ಲಿಸಿದ್ದಾರೆ. ವೆರಿಯರ್ ಎಲ್ವಿನ್‌ರಂತಹ ವಿದ್ವಾಂಸರು ಭಾರತದ ಅನೇಕ ಬುಡಕಟ್ಟುಗಳ ಬಗ್ಗೆ ಸಂಶೋಧನೆ ಕೈಗೊಂಡು ಅವರ ಉದ್ಧಾರಕ್ಕಾಗಿ ತಮ್ಮ ಬದುಕನ್ನೇ ಅರ್ಪಿಸಿಕೊಂಡಿದ್ದರು.

ಕರ್ನಾಟಕದ ಪ್ರಧಾನ ಬುಡಕಟ್ಟುಗಳಾದ ಮ್ಯಾಸನಾಯಕರು ಮತ್ತು ಕಾಡುಗೊಲ್ಲರನ್ನು ಕುರಿತ ಸಾಕಷ್ಟು ಅಧ್ಯಯನಗಳು ಇ. ಥರ್ಸ್ಟನ್,[1] ಎಲ್.ಕೆ. ಅನಂತಕೃಷ್ಣ ಅಯ್ಯರ್ ಮತ್ತು ಹೆಚ್. ವಿ. ನಂಜುಂಡಯ್ಯ,[2] ಡಾ|| ತೀ. ನಂ. ಶಂಕರನಾರಾಯಣ,[3] ಡಾ|| ಕಾಳೇಗೌಡ ನಾಗವಾರ[4] ಅವರಿಂದ ನಡೆದಿದ್ದರೂ, ಇನ್ನೂ ಯಾರ ಗಮನಕ್ಕೂ ಬಾರದಿರುವ ನಾಯಕ ಜನಾಂಗದ ಕೆಲವು ಆಚಾರ-ವಿಚಾರಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸಬಯಸುತ್ತೇನೆ.

ಕರ್ನಾಟಕದ ಉದ್ದಗಲಕ್ಕೂ ಹರಡಿರುವ ಈ ಜನಾಂಗ ರಾಯಚೂರು, ಬಳ್ಳಾರಿ ಜಿಲ್ಲೆಗಳ ಪೂರ್ವಭಾಗದಲ್ಲಿ ಹೆಚ್ಚಾಗಿಯೂ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು

ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಅತಿದಟ್ಟವಾಗಿಯೂ ನೆಲೆಸಿದೆ. ನೆರೆಯ ಆಂಧ್ರ ಪ್ರದೇಶದ ಅನಂತಪುರ, ಕರ್ನೂಲು ಜಿಲ್ಲೆಗಳಲ್ಲಿಯೂ ನಾಯಕರು ಸಾಕಷ್ಟು ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಆದರೆ ಈ ಜನ ಸಾಮಾಜಿಕವಾಗಿ, ಆರ್ಥಿಕವಾಗಿ ಅತ್ಯಂತ ಹಿಂದುಳಿದಿದ್ದು ಭಾರತ ಮತ್ತು ಕರ್ನಾಟಕದ ಸರ್ಕಾರಗಳು ಇವರಿಗೆ ಕ್ರಮವಾಗಿ 'ಎಸ್.ಟಿ.' ಮತ್ತು 'ಬಿ.ಟಿ.' ಸವಲತ್ತುಗಳನ್ನು ನೀಡಿವೆ.

ಇವರು ಮೂಲತಃ ಆಂಧ್ರಪ್ರದೇಶದ ಶ್ರೀಶೈಲದ ಬಳಿಯ ಕರಿಮಲೆ-ಕೊಮ್ಮಮಲೆ[5]ಗಳ ಕಡೆಯಿಂದ ಮತ್ತು ತಿರುಪತಿ ಬಳಿಯ ಜಡೇಕಲ್ಲುದುರ್ಗ[6]ದ (ಇದು ಆಂಧ್ರದ ಕಡಪ ಜಿಲ್ಲೆಯಲ್ಲಿ ಇದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.) ಕಡೆಯಿಂದ ವಲಸೆ ಬಂದ ಜನ. ಮೂಲತಃ ಬೇಟೆಗಾರರೂ, ಪಶುಪಾಲಕರೂ ಆದ ಈ ಜನ ಹುಲ್ಲು - ನೀರು ಹುಡುಕುತ್ತಾ ದೇಶಾಂತರ ಬಂದವರು. ಮುಖ್ಯವಾಗಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ನಂತರ ಕರ್ನಾಟಕದತ್ತ ವಲಸೆ ಬರತೊಡಗಿದ ಈ ಜನ ಸ್ವಭಾವತಃ ವೀರರಾಗಿದ್ದರು, ನಿರ್ಭೀತರಾಗಿದ್ದರು. ಹೀಗಾಗಿ ಇವರಿಗೆ, ಕಾಲಾನಂತರ ಸಮಾಜದಲ್ಲಿ ಹೆಚ್ಚಿನ ಸ್ಥಾನ - ಮಾನಗಳು ದೊರೆತಂತೆ ಕಾಣುತ್ತದೆ.

ಇವರ ಮನೆಯ ಮಾತು ತೆಲುಗು. ಈ ಜನಾಂಗದ ಚರಿತ್ರೆಗೆ ಸಂಬಂಧಿಸಿದ ಎಷ್ಟೋ ದಾಖಲೆಗಳು ತೆಲುಗಿನಲ್ಲಿ ಸಿಗುತ್ತವೆ, ಆದರೆ ಇವರು ಕನ್ನಡ ಪ್ರಾಂತಗಳಲ್ಲಿ ನೆಲಸಿದ ನಂತರ ದಾಖಲೆಗಳು ಕನ್ನಡದಲ್ಲಿಯೂ ಸಿಗುತ್ತವೆ. ಇಂದು ಕನ್ನಡ ಪ್ರಾಂತಗಳಲ್ಲಿ ನೆಲಸಿರುವ ಇವರ ತೆಲುಗು ಬಹುಪಾಲು ಕನ್ನಡ ಮಿಶ್ರವಾಗಿದ್ದು ತನ್ನದೇ ಆದ ವಿಚಿತ್ರ ಶೈಲಿಯನ್ನು ಹೊಂದಿದೆ. ಇವರ 'ತೆಲುಗನ್ನಡ' ಭಾಷಾ ವಿಜ್ಞಾನದ ದೃಷ್ಟಿಯಿಂದ ಕುತೂಹಲಕರವಾದ ಅಧ್ಯಯನವಾಗುತ್ತದೆ.

ಇವರು ತಮ್ಮನ್ನು ಬೇಡರು (ಬ್ಯಾಡರು), ವಾಲ್ಮೀಕಿಗಳು, ಪರಿವಾರದವರು, ಮ್ಯಾಸಬೇಡರು (ಮ್ಯಾಸ ನಾಯಕರು), ತಳವಾರರು, ನಾಯ್ಕರು, ಪಾಳೈಗಾರರು ಎಂದು ನಾನಾ ಹೆಸರುಗಳಲ್ಲಿ ಕರೆದುಕೊಳ್ಳುತ್ತಾರೆ.

"ಬೇಡರೆಂದು ಕರೆದುಕೊಳ್ಳಬೇಕಾದ ಜನರು ನಾನಾ ಹೆಸರುಗಳನ್ನು ಇಟ್ಟುಕೊಂಡಿದ್ದಾದರೂ ಹೇಗೆ? ಅದಕ್ಕೆ ಅಂದಂದಿನ ಸನ್ನಿವೇಶಗಳೇ ಕಾರಣ. ವಾಲ್ಮೀಕಿ ಸಂತತಿಯವರು ತಮ್ಮ ಪ್ರಸಿದ್ಧ ಪೂರ್ವಿಕನ ಹೆಸರಿನಲ್ಲಿ ತಮ್ಮನ್ನು ವಾಲ್ಮೀಕಿಗಳೆಂದು ಕರೆದುಕೊಂಡು ಸಂತೃಪ್ತಿ ಪಡೆದಿದ್ದಾರೆ. ಕಾಡುಗಳಲ್ಲಿದ್ದು ಪಶುಪಾಲನೆಯನ್ನು ಮುಖ್ಯ ವೃತ್ತಿಯನ್ನಾಗಿ ಅವಲಂಬಿಸಿದವರು ತಮ್ಮ ಸಾಕು ಪ್ರಾಣಿಗಳನ್ನು ಕಾಡಿನಿಂದ ಕಾಡಿಗೆ ಅಟ್ಟಿಕೊಂಡು ಹೋಗಿ ಪೋಷಿಸುತ್ತಿದ್ದುದರ ಮೇಲೆ ತಮ್ಮನ್ನು ಕಾಡುಸಂಚರು ಎಂದು ಕರೆದುಕೊಂಡಿದ್ದಾರೆ. ಮೂಗನಾಯಕನ ಅನುಯಾಯಿಗಳೆಲ್ಲಾ ತಮ್ಮನ್ನು ನಾಯಕ

ರೆಂದು ಕರೆದುಕೊಳ್ಳುತ್ತಾರೆ. ಪಾಳೆಯಗಾರರ ಸಂತತಿಯವರು ತಮ್ಮನ್ನು ಪಾಳ್ಯೆಗಾರರು ಅಥವಾ ದೊರೆಗಳು ಎಂದು ಕರೆದುಕೊಳ್ಳುತ್ತಾರೆ. ಪಾಳ್ಯೆಯಗಾರರ ಆಸ್ಥಾನಗಳಲ್ಲಿ ಅಂತರಂಗ ಸೇವಕರಂತಿದ್ದವರ ಪೀಳಿಗೆಯವರು ತಮ್ಮನ್ನು ರಾಜಪರಿವಾರದವರೆಂದು ಕರೆದುಕೊಳ್ಳುತ್ತಾರೆ. ಹಗಲಿರುಳೂ ಗ್ರಾಮಗಳ ರಕ್ಷಣಾ ಕಾರ್ಯಕ್ಕೆ ನಿಯಮಿಸಲ್ಪಟ್ಟವರ ಸಂತತಿಯವರು ತಮ್ಮನ್ನು ತಳವಾರರೆಂದು ಕರೆದುಕೊಳ್ಳುತ್ತಾರೆ. ಕೆಲವರು ಹಿಂದಿನಿಂದಲೂ ಉಪಯೋಗಿಸುತ್ತಿದ್ದ ಶಬರ, ಕಿರಾತ, ಭಿಲ್ಲವ ಪದಗಳನ್ನೇ ತಮ್ಮ ಜಾತಿಯೆಂದು ಉಳಿಸಿಕೊಂಡಿದ್ದಾರೆ"[7] ಎಂಬುದು ರಾಜನ ರಾಜಣ್ಣನವರ ವಾದ.

"ಕ್ಷತ್ರಿಯ ಕುಲನಾಶಕ್ಕೆ ಗಂಡುಗೊಡಲಿ ಹಿಡಿದು ಹೊರಟ ಪರಶುರಾಮನ ಹಾವಳಿಯಿಂದ ತಲೆತಪ್ಪಿಸಿಕೊಂಡು ಕಾಡು ಸೇರಿದ ಕ್ಷತ್ರಿಯರು ತಮ್ಮನ್ನು 'ನಾಯಕರು' ಎಂದು ಕರೆದುಕೊಂಡರು, ಕ್ರಮೇಣ ತಾವು ಕಟ್ಟಿದ ಸಾಮ್ರಾಜ್ಯಗಳನ್ನು ಮರೆತು, ಕಾಡಿನ ಬದುಕಿನೊಂದಿಗೆ ಬೆರೆತುಹೋಗಿ 'ಕಿರಾತ'ರೆನಿಸಿಕೊಂಡರು"[8] ಎಂಬ ವಿಶಿಷ್ಟ ವ್ಯಾಖ್ಯಾನ ಹರತಿ ವೀರನಾಯಕರದು.

ಪುರಾಣ ಕಾಲದ ವಾಲ್ಮೀಕಿ, ಧರ್ಮವ್ಯಾಧ, ಬೇಡರ ಕಣ್ಣಪ್ಪ, ಏಕಲವ್ಯ, ಶಬರಿಯವರನ್ನು ಬಿಟ್ಟರೆ ಕ್ರಿ.ಶ. 9ನೇ ಶತಮಾನಕ್ಕೆ ಸೇರಿದ 'ವಡ್ಡಾರಾಧನೆ' ಎಂಬ ಹಳಗನ್ನಡ ಗದ್ಯಕೃತಿಯ ಅನೇಕ ಕತೆಗಳಲ್ಲಿ ನಗರ ರಕ್ಷಣೆಯಲ್ಲಿ ನಿರತನಾದ 'ತಳವಾರ'ನ ಉಲ್ಲೇಖವನ್ನು ಕಾಣಬಹುದು.

ಇವರೆಲ್ಲರನ್ನೂ ಒಟ್ಟಾಗಿ 'ನಾಯಕರು' ಎಂದು ಕರೆಯುವುದು ವಾಡಿಕೆಯಾಗಿದೆ. ಆದರೆ ಇವರಲ್ಲಿ 'ಮ್ಯಾಸ ನಾಯಕರು, ಊರು ನಾಯಕರು ಮತ್ತು ಪಾಳಯಗಾರರು' ಎಂಬ ಮೂರು ಪ್ರಧಾನವಾದ ಪಂಗಡಗಳಿವೆ.

1. ಮ್ಯಾಸನಾಯಕರು :

ಬೇರೆಲ್ಲ ಪಂಗಡಗಳಿಗಿಂತಲೂ ಅತಿಹೆಚ್ಚಿನ ಜನಸಂಖ್ಯೆಯನ್ನು ಈ ಪಂಗಡ ಹೊಂದಿದೆ. ಸಹಜವಾಗಿ ಕೃಷ್ಣಕಾಯರಾದ ಈ ಜನಗಳಲ್ಲಿ ಗಿರಿಜನಾಂಗದ ಪ್ರಾಚೀನ ಲಕ್ಷಣಗಳನ್ನು, ಆಚಾರ - ವಿಚಾರಗಳನ್ನು ಕಾಣಬಹುದು. ಇವರಲ್ಲಿ 'ಮಂದಲೋರು. ಮಲ್ಲನಾಯಕನೋರು, ಮಳೆಲೋರು' ಎಂಬ ಆಯಾ ಬೆಡಗುಗಳ ವಿಭೂತಿ ಪುರುಷ ಹೆಸರಿನಲ್ಲೇ ಗುರುತಿಸಲ್ಪಡುವ ಮೂರು ಪ್ರಧಾನ ಒಳಪಂಗಡಗಳಿವೆ. ಇವರು ಕ್ರಮವಾಗಿ ವಿಷ್ಣು, ಶಿವ, ಬ್ರಹ್ಮನ ಆರಾಧಕರಾಗಿರುತ್ತಾರೆ, ಆದರೆ ಮಳೆಲೋರು ಮಾತ್ರ ಬ್ರಹ್ಮನೊಂದಿಗೆ ಬೇರೆಲ್ಲಾ ದೇವರುಗಳನ್ನು ಪೂಜಿಸುತ್ತಾರೆ. ಮಳೆಲೋರು ಎಲ್ಲ ಬೆಡಗು (ಒಳಪಂಗಡ) ಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸುತ್ತಾರೆ ಅಂದರೆ ಇವರು ಎಲ್ಲ ಕುಲಕ್ಕೂ (ಬೆಡಗು) ನೆಂಟರಾಗಿ ನಡೆದುಕೊಳ್ಳುತ್ತಾರೆ. (ಕುಂಚಿಟಿ

ವಕ್ಕಲಿಗರಲ್ಲಿ ಈ ಬೆಡಗನ್ನೇ ಹೋಲುವ 'ಒಳಕಲ್ಲೋರು' ಎಂಬ ಅಪರೂಪದ ಬೆಡಗಿದೆ).

ಈ ಮೂರು ಪಂಗಡಗಳೊಂದಿಗೆ 'ಎನುಮಲೋರು' (ಎಮ್ಮೆಯುವರು) ಎಂಬ ಇನ್ನೊಂದು ಪ್ರಮುಖ ಪಂಗಡವೂ ಇದೆ. (ಕುಂಚಿಟಿ ವಕ್ಕಲಿಗರಲ್ಲೂ ಇದನ್ನೇ ಹೋಲುವ 'ಎಮ್ಮೆನೋರು' ಎಂಬ ಬೆಡಗು ಇದ). ಇವಲ್ಲದೆ ಅಲ್ಪ ಜನಸಂಖ್ಯೆ ಇರುವ ಅನೇಕ ಬೆಡಗುಗಳು ಇವೆ. (ಈ ಬೆಡಗುಗಳು ಅಣ್ಣ-ತಮ್ಮಂದಿತನ, ನೆಂಟ ತನ ನಿರ್ಧರಿಸಲು ಸಹಾಯಕವಾಗುತ್ತವೆ)

ಕಾಡುಗೊಲ್ಲರಿಗೂ, ಮ್ಯಾಸನಾಯಕರಿಗೂ ಅತ್ಯಂತ ಹತ್ತಿರದ ಅನೇಕ ಹೋಲಿಕೆ ಗಳಿರುವುದು ಸಮಾಜ ವಿಜ್ಞಾನಿಗಳಿಗೆ ಆಶ್ಚರ್ಯವನ್ನು ಉಂಟುಮಾಡುವುದರೊಂದಿಗೆ ಇವೆರಡೂ ಬುಡಕಟ್ಟುಗಳು ಮೂಲದಲ್ಲಿ ಒಂದೇ ಆಗಿದ್ದಿರಬಹುದೆಂಬ ಅನುಮಾನವನ್ನು ಹುಟ್ಟುಹಾಕುತ್ತವೆ. ಇಂತಹುದೇ ಸಾಮ್ಯಗಳು ಕುರುಬ ಮತ್ತು ಕುಂಚಿಟಿ ವಕ್ಕಲಿಗ ಜಾತಿಗಳೊಳಗೂ ಕಾಣಬಹುದು.

ಪ್ರಚಲಿತವಿರುವ ಜನಪದ ಕತೆಯೊಂದರ ಪ್ರಕಾರ – ಈಗ ಮ್ಯಾಸಬ್ಯಾಡರು ಮತ್ತು ಕಾಡುಗೊಲ್ಲರು ಎಂದು ಕರೆಯಲ್ಪಡುವ ಇವರು ಒಂದೇ ತಾಯಿಯ ಮಕ್ಕಳಂತೆ. ಇಬ್ಬರೂ ಗೋಪಾಲಕರಾಗಿದ್ದರು. ಬರ ಬಂದಾಗ ದನಗಳನ್ನು ಪಡುವಲ ಸೀಮೆಗೆ ತಿರುಗಿಸಿದರು. ಬಹಳಷ್ಟು ದಿನಗಳಿಂದ ಆಹಾರವಿಲ್ಲದೆ ಹಸಿವಿನಿಂದ ಕಂಗೆಟ್ಟಿದವನು ತಡೆಯಲಾರದೆ, ಆಗತಾನೆ ಈದ (ಜನನವಾದ) ಕುಂಟ ಆಕಳು ಕರುವಿನ ತೊಡೆಯನ್ನು ಕಿತ್ತುಕೊಂಡು ತಿಂದನಂತೆ. ಇದನ್ನು ನೋಡಿದ ದೊಡ್ಡವನು 'ಅಯ್ಯೋ, ಕಂಕಾ (ಅನಾಗರೀಕ) ಎಂಥಾ ಕೆಲ್ಸ ಮಾಡಿದಿಯೋ' ಎಂದು ಬಯ್ದನಂತೆ, ಅಂದಿನಿಂದ ಅವರು ಬೇರೆಯಾದರಂತೆ. 'ಕಂಕಾ' ಎಂದು ಕರೆಯಲ್ಪಟ್ಟವನು ಮುಂದೆ 'ಮ್ಯಾಸನಾಯಕ' ನೆನಿಸಿಕೊಂಡನಂತೆ; ಉಳಿದವನು ತನ್ನ 'ಗೊಲ್ಲ'ತನವನ್ನು ಹಾಗೇ ಉಳಿಸಿಕೊಂಡನಂತೆ.

ಈ ಕತೆಯನ್ನು ಸಮರ್ಥಿಸುವಂತೆ ಅನೇಕ ಆಚಾರ - ವಿಚಾರಗಳು ಒಂದೇ ಆಗಿರುವುದನ್ನು ಈ ಕೆಳಕಂಡಂತೆ ಗುರುತಿಸಬಹುದು—

ಗೊಲ್ಲರಲ್ಲಿ - ಕಾಡುಗೊಲ್ಲರು, ಊರು ಗೊಲ್ಲರು ಇರುವಂತೆ, ನಾಯಕರಲ್ಲಿ ಮ್ಯಾಸನಾಯಕರು, ಊರು ನಾಯಕರು ಎಂಬ ಎರಡು ಪ್ರಭೇಧಗಳಿವೆ.

ಹಳೆಯ ತಲೆಮಾರಿನ ಮ್ಯಾಸನಾಯಕರ ಯಜಮಾನರು ಕಾಡುಗೊಲ್ಲರಂತೆ ತಲೆ ಗೂದಲನ್ನು ಕತ್ತರಿಸದೆ 'ತುರುಬು' ಕಟ್ಟುವುದನ್ನು ಇಂದೂ ಕಾಣಬಹುದು. (ಆದರೆ ಕೆಲವರು ಮುಂದಲೆಯ ಕೂದಲನ್ನು ಚಂದ್ರಾಕಾರವಾಗಿ ಕತ್ತರಿಸಿರುತ್ತಾರೆ). ಕಾಡು

ಗೊಲ್ಲರ ಹೆಂಗಸರು ಮೇಲು ರವಿಕೆ (ಕುಪ್ಪುಸ) ತೊಡದಿರುವಂತೆ, ಹಳೆಯ ಕಾಲದ ಮ್ಯಾಸಬೇಡರ ಹೆಂಗಸರೂ ರವಿಕೆ ತೊಡುವುದಿಲ್ಲ ; ಕಾಡುಗೊಲ್ಲರ ಹೆಂಗಸರು ಮುಂಗೈಗೆ 'ಗೊಲ್ಲಕಡಗ' ಧರಿಸಿದರೆ, ಅದನ್ನೇ ಹೋಲುವಂತಹ 'ಬದ್ದು' ಎಂಬ ಹಿತ್ತಾಳೆಯ ಆಭರಣವನ್ನು ಇವರು ಮುಂಗೈಗೆ ತೊಡುತ್ತಾರೆ.

ಕಾಡುಗೊಲ್ಲರ ಹಾಗೆ ಇವರೂ ಕೂಡ ಹಟ್ಟಿಯನ್ನು ಊರ ಹೊರವಲಯದಲ್ಲಿ ಪ್ರತ್ಯೇಕವಾಗಿ ಹಾಕಿಕೊಂಡು ಜನಸಂಪರ್ಕದಿಂದ ದೂರವಿರುತ್ತಾರೆ. ಬಹಳಷ್ಟು ಕಡೆ ಗಳಲ್ಲಿ ಕಾಡುಗೊಲ್ಲರ ಮತ್ತು ಮ್ಯಾಸಬೇಡರ ಹಟ್ಟಿಗಳು ಅಕ್ಕಪಕ್ಕದಲ್ಲೇ ಇರುತ್ತವೆ.

ಕಾಡುಗೊಲ್ಲರಂತೆ ಇವರೂ ಹಟ್ಟಿಯ ಸುತ್ತ ಕಳ್ಳಿಬೇಲಿಯನ್ನು ಹಾಕುತ್ತಾರೆ, ಜೊತೆಗೆ ಕಾಡುಗೊಲ್ಲರಂತೆ ಕೋಳಿಯನ್ನು ಹಟ್ಟಿಯೊಳಗೆ ಸೇರಿಸುವುದಿಲ್ಲ, ಸೇವಿಸು ವುದೂ ಇಲ್ಲ. (ಆದರೆ ಈಗೀಗ ಈ ಬಿಗಿಯಾದ ಕಟ್ಟು-ನಿಟ್ಟು ಸಡಿಲವಾಗುತ್ತಿದೆ.)

ಈ ಎರಡೂ ಜನಾಂಗಗಳ ಪ್ರಮುಖ ದೈವಗಳಾದ ಕಾಟುಲಿಂಗ, ಚಿತ್ರಲಿಂಗ ದೇವರುಗಳು ಒಂದೇ ಆಗಿವೆ ; ಈ ಎರಡೂ ಜನಾಂಗಗಳು 'ಥಗಮು'[10] ಎಂಬ ವಿಶಿಷ್ಟ ವಾದ್ಯವನ್ನು ತಮ್ಮ ದೇವರಿಗೆ ಬಳಸುತ್ತಾರೆ.

ಕಾಡುಗೊಲ್ಲರಿಗೆ ಸಾಂಸ್ಕೃತಿಕ ವೀರರೂ ಹಾಗೂ ಗೋಪಾಲಕರೂ ಆಗಿದ್ದ ಎತ್ತಪ್ಪ - ಜುಂಜಪ್ಪಗಳು ಹೇಗೆ ಆರಾಧ್ಯ ದೈವಗಳೋ ಹಾಗೆ ಮ್ಯಾಸಬೇಡರಲ್ಲೂ ಗೋಪಾಲಕರಾಗಿದ್ದ ಗಾದಿರಿ ಪಾಲನಾಯಕ, ಜಗಲೂರು ಪಾಪನಾಯಕರು ಆರಾಧ್ಯ ದೈವಗಳೂ, ಸಾಂಸ್ಕೃತಿಕ ವೀರರೂ ಆಗಿದ್ದಾರೆ.

ಕಾಡುಗೊಲ್ಲರಲ್ಲಿ ಜುಂಜಪ್ಪನಿಗೆ ದನಗಳನ್ನು ಬಿಡುವಂತೆ, ಮ್ಯಾಸನಾಯಕರೂ ದನಕರುಗಳನ್ನು ತಮ್ಮ ದೇವರುಗಳಿಗೆ ಬಿಡುತ್ತಾರೆ. ದೇವರ ದನಗಳನ್ನು ಕಾಯುವವ ರನ್ನು 'ಎತ್ತಿನ ಕಿಲಾರಿ' ಎನ್ನುತ್ತಾರೆ. ಈ ದನಗಳನ್ನು ಮಾರಾಟ ಮಾಡುವಂತಿಲ್ಲ, ಸತ್ತರೆ ಅವನ್ನು ಕೊಯ್ಯಲು ಕೊಡುವಂತಿಲ್ಲ, ಅವನ್ನು 'ಮಣ್ಣು' ಮಾಡಿ ಭಕ್ತಿಯಿಂದ ಪೂಜಿಸುತ್ತಾರೆ. ಕಾಡುಗೊಲ್ಲರೂ ಜುಂಜಪ್ಪನ ಬಸವಗಳನ್ನು ಕುರಿತು ಇದೇ ಸಂಪ್ರ ದಾಯವನ್ನು ಅನುಸರಿಸುತ್ತಾರೆ.

ಹೊಳಲ್ಕೆರೆ ಮತ್ತು ನಾಯಕನಹಟ್ಟಿ ಭಾಗದಲ್ಲಿರುವ ಕೆಲವು ಮ್ಯಾಸನಾಯಕರು ಈಚಲುಚಾಪೆಯ ಮೇಲೆ ಕೂರುವುದಿಲ್ಲ, ಕಸ ತೆಗೆಯಲು ಈಚಲು ಪೊರಕೆಗಳನ್ನೂ ಬಳಸುವುದಿಲ್ಲ ! ಹೆಂಡ ಕೊಡುವ ಹೊಲಸುಮರದ ಈಚಲು ಗರಿಯನ್ನು ಬಳಸಿದರೆ 'ಮೈಲಿಗೆ'ಯಾಗುತ್ತದೆ ಎಂಬ ನಂಬಿಕೆ ಅವರದು.

ಇವರು ಅಣ್ಣ-ತಮ್ಮಂದಿರಾಗಿದ್ದಿರಬಹುದು ಎಂಬುದನ್ನು ಸಮರ್ಥಿಸುವಂತಿರುವ ವಿಶಿಷ್ಟ ಆಚರಣೆ[11] ಚಳ್ಳಕೆರೆ ತಾಲ್ಲೂಕಿನ ಪಂತ್ಸಮುದ್ರ ಗ್ರಾಮದಲ್ಲಿ ಹನುಮಂತ ರಾಯನ 'ಕಾರ್ತೀಕ' ಉತ್ಸವದಲ್ಲಿ ನಡೆಯುತ್ತದೆ. ಹಗ್ಗಗಳಿಂದ ನಿಲ್ಲಿಸಲ್ಪಟ್ಟ 40 ಅಡಿ ಎತ್ತರವಿರುವ ಕಂಬದ ಬುಡದಲ್ಲಿ ಸಣ್ಣ ವೃತ್ತಾಕಾರದ ಪಾತಿಮಾಡಿ ನೀರು ತುಂಬುತ್ತಾರೆ, ಕಂಬದ ತುದಿಯಲ್ಲಿ ಗೂಡಿನ ಆಕಾರದಲ್ಲಿ ನಿರ್ಮಿಸಿದ ಕಮಾನಿಗೆ ನಾಲ್ಕೂ ಮೂಲೆಗಳಲ್ಲಿ ನಾಲ್ಕು ಅಡ್ಡಗೂಟ ಬಡಿದಿರುವ ಹಸಿ ತೆಂಗಿನಕಾಯಿಗಳನ್ನು ತೂಗುಬಿಟ್ಟಿರುತ್ತಾರೆ, ಜೊತೆಗೆ ಬಟ್ಟೆಗಳಲ್ಲಿ ಹಲವು ತಿನಿಸುಗಳ ಗಂಟುಕಟ್ಟಿ, ಎಣ್ಣೆ-ಮಡಕೆ ಹಿಡಿದ ವ್ಯಕ್ತಿಯೊಬ್ಬ ಕಂಬದ ತುದಿಯಲ್ಲಿ ಕೂತಿರುತ್ತಾನೆ. ಈ ಕಂಬದ ಮೈಗೆ ಜೇಡಿಮಣ್ಣಿನ ಬಂರುಜೆ ಮತ್ತು ಎಣ್ಣೆಯನ್ನು ಜಾರುವಂತೆ ಬಳಿದಿರುತ್ತಾರೆ. ಇದು ಕೃಷ್ಣ ಗೋಕುಲದಲ್ಲಿ ಬೆಣ್ಣೆ ಕದಿಯುತ್ತಿದ್ದ ಮೊಸರು, ಹಾಲುಗಳನ್ನು ಇಡುತ್ತಿದ್ದ 'ನೆಲವು' ನನಪಿಗೆ ತರುವಂತಿದೆ, ಜೊತೆಗೆ ಇದನ್ನು ತೆಲುಗಿನಲ್ಲಿ 'ಉಟ್ಲು' ಎನ್ನುತ್ತಾರೆ - ಅಂದರೆ 'ನೆಲವು' ಎಂದೇ ಅರ್ಥ; ಅದಕ್ಕಾಗಿಯೇ ಇದನ್ನು 'ಉಟ್ಲು ಮರ' ಎಂದು ಕರೆಯುತ್ತಾರೆ. ಈ ಕಂಬವನ್ನು ಹತ್ತಿ ಇನ್ನೇನು ತುದಿಮುಟ್ಟಿದೆವು ಎನ್ನುವಾಗ ಮೇಲಿನಿಂದ ಜರ್‍ರನೆ ಜಾರುವ ಈ ರೋಮಾಂಚಕಾರಿ ಆಟ ಕೆಲವೊಮ್ಮೆ ಪ್ರಾಣಕ್ಕೂ ಸಂಚಕಾರ ತರುತ್ತದೆ. ಈ ಕಂಬವನ್ನು ಹತ್ತುವ ಹಕ್ಕು ಗೊಲ್ಲರದು, ಅವರು ಹತ್ತುವ ಶಾಸ್ತ್ರಮಾಡಿ, ಅನುಮತಿಕೊಟ್ಟ ನಂತರವೇ ಮ್ಯಾಸನಾಯಕರು ಈ ಕಂಬ ಹತ್ತುತ್ತಾರೆ; ಇಲ್ಲಿ ಇವರು ಅಣ್ಣ - ತಮ್ಮಂದಿರಂತೆ ನಡೆದುಕೊಳ್ಳುತ್ತಾರೆ.

ಮ್ಯಾಸನಾಯಕರ ಹೆಣ್ಣಿಗೂ, ಕಾಡುಗೊಲ್ಲನೊಬ್ಬನಿಗೂ ವಿವಾಹವಾದದ್ದರಿಂದ ಕಾಡುಗೊಲ್ಲರಲ್ಲಿ 'ತಾಳಿಟ್ಟದ ಗೊಲ್ಲರು' ಎಂಬ ವಿಶಿಷ್ಟ ಬೆಡಗು ಹುಟ್ಟಿಕೊಳ್ಳಲು ಕಾರಣವಾಗುವ ಕತೆ[12] ಈ ಎರಡೂ ಜನಾಂಗಗಳ ಮಧ್ಯೆ ನಡೆದಿರಬಹುದಾದ ಸಂಬಂಧಗಳ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ.

ಹರತಿಕೋಟೆಯ ರಾಜನ ಮಕ್ಕಳಲ್ಲಿ ಒಬ್ಬಳಾದ ಕರಿಯೋಬಿಯನ್ನು ಬಸವಿಗೆ ಬಿಟ್ಟಿದ್ದರು. (ಇತಿಹಾಸ ಈ ಬಗ್ಗೆ ಮೌನವಾಗಿದೆ.) ಆಕೆ ಪ್ರತ್ಯೇಕವಾದ ಅರಮನೆ ಕಟ್ಟಿಸಿಕೊಂಡು ಅರಮನೆಯ ಮುಂದೆ - "ಕಪ್ಪೆ ಕಲಕದ ನೀರು, ಬಿಸಿಲಿಗೆ ಬಾಡದ ಹೂವು, ನಾಲ್ಕು ಏಣಿನ ಹಸಿರುಕಲ್ಲು ಕಂಬ, ತಲೆಗೆ ಮೆತ್ತನೆ ಕಲ್ಲು, ಕಾಯಿಸದೆ ಆಗಿರೋ ತುಪ್ಪ, ಒಂದು ಕೊಂಬಿನ ಮೇಕೆ ಹೋತ ತಂದುಕೊಟ್ಟವರಿಗೆ ಭೋಗ ಕೊಡ್ತೀನಿ. ಇವನ್ನು ತರದೆ ಸೋತವನು ಸಾವಿರ ವರಹ ದಂಡ ಕೊಡಬೇಕು" ಎಂದು ಶಾಸನ ಹಾಕಿಸಿದ್ದಳು. ಹೀಗೆ ಸೋತವರಿಂದ ಏಳುಕೊಪ್ಪರಿಗೆ ವರಹ ಸಂಪಾದಿಸಿದ್ದಳು. ಈ ಸುದ್ದಿ ಕೇಳಿದ ಹಟ್ಟಿ ಮಲ್ಲಪ್ಪನಾಯಕ (ಹಟ್ಟಿ ಪಾಳೆಯಗಾರರಲ್ಲಿ ಲಫಂಗನಾಗಿದ್ದ ಚಿಕ್ಕಮಲ್ಲಪ್ಪನಾಯಕ ಇರಬಹುದೇ?) ಬಂದು ಆಕೆಯ ಒಡಪನ್ನು ಬಿಡಿಸಲಾರದೆ

ಹುಚ್ಚಾಗಿ ಕಾಡಿನಲ್ಲಿ ತಿರುಗುತ್ತಿದ್ದಾಗ 'ಕಲ್ಲಿ ಬುಳ್ಳಣ್ಣ' ಎಂಬ ಗೊಲ್ಲ ಸಿಕ್ಕ. ಅವನು 'ಇದೇನು ಮಹಾ ಒಗಟು ನಾನು ಬಿಡಿಸ್ತೀನಿ. ಇಂಥ ಸಾವಿರ ಒಗಟು ನನ್ನ ಜೇಬಿನಾಗೆ ಐದಾವೆ' ಎಂದು ಅದರ ರಹಸ್ಯ ಒಡೆದ. ಹಟ್ಟಿ ಮಲ್ಲಪ್ಪನಾಯಕ ತಕ್ಷಣವೇ ಕರಿಯೋಬಿಯ ಬಳಿಗೆ ಹೋಗಿ - "ಎಳೆನೀರೇ - ಕಪ್ಪೆಕಲಕದ ನೀರು, ನವಿಲುಗರಿಯೇ - ಬಿಸಿಲಿಗೆ ಬಾಡದ ಹೂವು, ಮುಂಗರಬಳ್ಳಿಯೇ - ನಾಲ್ಕು ಏಣಿನ ಹಸಿರು ಕಲ್ಲುಕಂಭ, ಕೈಯ ತೋಳು - ತಲೆಗೆ ಮೆತ್ತನೆಯ ಕಲ್ಲು, ಜೇನುತುಪ್ಪವೇ - ಕಾಯಿಸದೆ ಆಗೋ ತುಪ್ಪ, ಕೋಳಿನೇ - ಒಂದು ಕೊಂಡಿನ ಮೇಕೆ ಹೋತ" ಎಂದು ಒಡಪು ಬಿಡಿಸಿದ. ಆದರೆ ಆಕೆ ಇವನ ಜಾಣತನವನ್ನು ನಂಬದೆ ಮೂಲಶೋಧಿಸಿದಾಗ ಕಲ್ಲಿ ಬುಳ್ಳಣ್ಣ ಎಂದು ಗೊತ್ತಾಗುತ್ತದೆ. ಸೋತ ಮಲ್ಲಪ್ಪನಾಯಕ ಹ್ಯಾಪುಮೋರೆ ಹಾಕಿಕೊಂಡು ಹೊರಟ.

ಕರಿಯೋಬಿ ಕಲ್ಲಿ ಬುಳ್ಳಣ್ಣನನ್ನು ಮದುವೆಯಾಗಲು ಬೇಡಿಕೊಳ್ಳುತ್ತಾಳೆ. ಆದರೆ ಅವನು "ನನಗೆ ಬಾಲಮ್ಮ - ನಾಗಮ್ಮ ಅಂತ ಇಬ್ರು ಹೆಂಡ್ರು. ಅವರು ಒಪ್ಪದವರೆಗೂ ನಿನ್ನ ಕೂಡೋಕೆ ಆಗೋಲ್ಲ" ಅಂತಾನೆ. ಕರಿಯೋಬಿ ಅವರ ಮನೆಗೆ ಹೋಗಿ, ಅವರ ಮನೆಯ ಆಳಾಗಿ ದುಡಿದು, ಅವರ ವಿಶ್ವಾಸ ಸಂಪಾದಿಸಿ, ಅವರನ್ನು ಒಲಿಸಿ - ಒಪ್ಪಿಸಿ ಕಲ್ಲಿಬುಳ್ಳಣ್ಣನನ್ನು ಮದುವೆಯಾಗುತ್ತಾಳೆ. ಸಾಕಷ್ಟು ವಯಸ್ಸಾದರೂ ಮಕ್ಕಳಾಗದಿದ್ದ ಕರಿಯೋಬಿ (ನಂತರ ಈ ಊರಿಗೆ ಕರಿಯೋಬಿಹಳ್ಳಿ > ಕರಿಯೋಬೆನಳ್ಳಿ ಎಂಬ ಹೆಸರು ಬಂತು, ಇದು ಹಿರಿಯೂರು ತಾಲ್ಲೂಕಿನ ಹರ್ತಿಕೋಟೆಗೆ ಸಮೀಪದಲ್ಲೆ ಇದೆ) ಬಾಲಮ್ಮನ ಮಗನೊಬ್ಬನನ್ನು ದತ್ತು ತೆಗೆದುಕೊಂಡು, ಅವನು ಬೆಳೆದು ದೊಡ್ಡವನಾದ ಮೇಲೆ ನಾಯಕ ಜಾತಿಯಲ್ಲಿ ಒಂದು ಹೆಣ್ಣು ತೆಗೆದು ಮದುವೆ ಮಾಡುತ್ತಾಳೆ. ಅವನಿಗೆ ಏಳು ಜನ ಮಕ್ಕಳಾಗುತ್ತಾರೆ, ಅವರೆಲ್ಲರಿಗೂ ಮದುವೆಯಾಗಿ ಏಳು ಮಂದಿ ಸೊಸೆಯರೂ ಮನೆಗೆ ಬರುತ್ತಾರೆ. ಈ ಸೊಸೆಯರು ಆ ಹಳ್ಳಿಗೆ ಬಂದ ಮುತ್ತಿನಸೆಟ್ಟಿ ಹತ್ತಿರ ಇದ್ದ 'ಮುತ್ತಿನ ವಸ್ತ್ರ' ಕಂಡ ಸೊಸೆಯರು - 'ನಮ್ಮತ್ತೆ ಏಳು ಕೊಪ್ಪರಿಗೆ ವರಹ ಸಂಪಾದಿಸಿದರೇನು ಬಂತು ? ಒಂದು ಮುತ್ತಿನ ವಸ್ತ್ರ ಸಂಪಾದಿಸಲಿಲ್ಲ' ಎಂದು ಹಾಸ್ಯಮಾಡಿ ನಕ್ಕರು. ಇದರಿಂದ ನೊಂದುಕೊಂಡ ಕರಿಯೋಬಜ್ಜಿ ಮಕ್ಕಳಲ್ಲಿ ದುಃಖ ತೋಡಿಕೊಂಡಳು. ಮಕ್ಕಳು ಮುತ್ತಿನಸೆಟ್ಟಿಯ ಹಿಂದೆಯೇ ಹೋಗಿ, ಮುತ್ತು ಹೊರುತ್ತಿದ್ದ ಎತ್ತಿನ ಕುತ್ತಿಗೆ ಕೊಯ್ದು 'ಮುತ್ತಿನ ಮೂಡೆ'ಯನ್ನೇ ಕದ್ದು ತರುತ್ತಾರೆ. ಮುತ್ತಿನಸೆಟ್ಟಿಗೆ ಕಳವಿನ ವಿಚಾರ ಗೊತ್ತಾಗಿ ಪಂಚಾಯ್ತಿ ಹಾಕಿಸಿದ. ಆಗ ಇವರು 'ಮುತ್ತಿನ ತೂಕದ ಒಡವೆ ಕೊಡ್ತೇವಿ' ಅಂತ ಒಪ್ಪಿಕೊಂಡು, ಮನೆಯಲ್ಲಿದ್ದ ಒಡವೆ - ವಸ್ತ್ರ ಎಲ್ಲ ಹಾಕಿದರೂ ಆ ಮುತ್ತಿಗೆ ಸರಿತೂಗದಾಗ; ಏಳು ಮಂದಿ ಸೊಸೆಯರು ತಮ್ಮ ಕೊರಳಲ್ಲಿಯ ಮಾಂಗಲ್ಯಗಳನ್ನು ತೆಗೆದುಹಾಕಿದರು, ಆದರೂ ಸರಿದೂಗಲಿಲ್ಲ ! ಕೊನೆಗೆ ನಾಗಮ್ಮನ ಸೊಸೆಯರಿಗೆ ಅವರ ಮಾಂಗಲ್ಯಗಳನ್ನೂ

ಹಾಕಲು ಹೇಳಿದಾಗ ಅವರು ನಿರಾಕರಿಸಿದರು. ತಪ್ಪು ಮಾಡಿ ಮಾಂಗಲ್ಯ ಕಳೆದು ಕೊಂಡ ಈ ಜನ ಮುಂದೆ 'ತಾಳಿಕಟ್ಟದ ಗೊಲ್ಲರು' ಆದರು. ತಾಳಿ ತೆಗೆಯಲು ನಿರಾಕರಿಸಿದವರು ತಾಳಿಕಟ್ಟುವ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋದರು.

ಈ ಕತೆ ಈ ಎರಡೂ ಜನಾಂಗಗಳ ಸಾಮರಸ್ಯ - ವೈಷಮ್ಯಗಳನ್ನು, ಇವರ ಪ್ರಾಚೀನ ಸಂಬಂಧಗಳನ್ನು ಕುರಿತು ಹೇಳುತ್ತದೆ.

ಈ ಜನಾಂಗದವರು ಪೂಜಿಸುವ ಪ್ರಮುಖ ದೈವಗಳು - ಕಾಟಾಲಿಂಗ, ಚಿತ್ರಲಿಂಗ, ಬೋರೆದೇವರು, ಬೋಸೆದೇವರು, ಗಾದಿರಿಪಾಲನಾಯಕ, ಜಗಲೂರು ಪಾಪನಾಯಕ, ಮಾರಮ್ಮ, ಬಂಗಾರದೇವರು, ಬೊಮ್ಮಲಿಂಗ, ಓಬಳ ನರಸಿಂಹಸ್ವಾಮಿ ಮುಂತಾದವುಗಳು.

ಇವರು ಮದುವೆಯ ಸಂದರ್ಭದಲ್ಲಿ ಮಾಡುವ ಸಂಪ್ರದಾಯಗಳೂ ತುಂಬಾ ಭಿನ್ನವಾಗಿವೆ; ಮದುವೆಯ ನಿಶ್ಚಿತಾರ್ಥದ ಸಂದರ್ಭದಲ್ಲಿ ನಡೆಸುವ ಕ್ರಿಯೆಯನ್ನು 'ವೀಳ್ಯಶಾಸ್ತ್ರ' ಎನ್ನುತ್ತಾರೆ. ಕಂಬಳಿ ಗದ್ದಿಗೆಯ ಮೇಲೆ ಮೂರು ವೀಳ್ಯಗಳನ್ನು ಇಟ್ಟಿರುತ್ತಾರೆ. ಈ ಕಂಬಳಿಯನ್ನು ಹಾಸುವವನು 'ವಾಳಿಲೋರವನು'. ಈ ವೀಳ್ಯಗಳನ್ನು ಮುಂದಲೋರ ವೀಳ್ಯ, ಮಲ್ಲನಾಯಕನೋರ ವೀಳ್ಯ, ವಾಳಿಲೋರ ವೀಳ್ಯ ಎನ್ನುತ್ತಾರೆ. ಇವು ಆಯಾ ಒಳಪಂಗಡಗಳ ಹಿರಿಯರಾದ ಮೂಲಪುರುಷರ ಹೆಸರಿನಲ್ಲಿದ್ದು ಅವರಿಗೆ ತೋರುವ ಸಾಂಕೇತಿಕ ಗೌರವ ಇದಾಗಿದೆ. ಆಯಾ ಒಳಪಂಗಡಗಳ ವಂಶಸ್ಥರು ಇವುಗಳನ್ನು ಪಡೆಯುತ್ತಾರೆ. ಮೊದಲೆರಡು ವೀಳ್ಯಗಳನ್ನು ಕಂಬಳಿ ಗದ್ದಿಗೆಯ ಮೇಲಿನಿಂದ ಎತ್ತಿಕೊಟ್ಟರೆ ಕೊನೆಯದನ್ನು ಕಂಬಳಿಯ ಅಡಿಯಿಂದ ಎತ್ತಿ ಕೊಡುತ್ತಾರೆ.

ಈ ಜನಾಂಗದ ಪುರಾಣ ಕಾಲದ ಮೂಲ ಪುರುಷರೂ, ವಿಭೂತಿ ಪುರುಷರೂ ಆದ ವಾಲ್ಮೀಕಿ, ಶಬರಿ, ಧರ್ಮವ್ಯಾಧ, ಏಕಲವ್ಯ, ಬೇಡರ ಕಣ್ಣಪ್ಪನವರುಗಳಿಗೆ ಯಾವ ಗೌರವದ ವೀಳ್ಯವನ್ನು ತೆಗೆದಿಡದಿರುವುದು ಅಚ್ಚರಿಯ ಸಂಗತಿ, ಜೊತೆಗೆ ಇವರನ್ನು ಅವರು ಪೂಜಿಸದಿರುವುದೂ ಮತ್ತೊಂದು ವಿಚಿತ್ರ !

ಸಮಾಜದ ಮೇಲ್ವರ್ಗದವರ ಮದುವೆಗಳಲ್ಲಿರುವಂತೆ 'ಹರಿಣಿ' (ಪವಿತ್ರವಾದ ಕುಂಭ), ಧಾರೆ ಚಪ್ಪರ, ಹಸೆಕಟ್ಟೆ ಇರುವುದಿಲ್ಲ. ತಮ್ಮ ಜಾತಿಗೆ ಸೇರಿದ ತಮ್ಮ ಮನೆದೇವರುಗಳ ಪೂಜಾರಿಗಳೇ ಪೌರೋಹಿತ್ಯವನ್ನು ನಿರ್ವಹಿಸುತ್ತಾರೆ.

ಇವರಲ್ಲಿ ಕುಲಾಚಾರದ ಕಟ್ಟುಗಳನ್ನು ನಿರ್ದೇಶಿಸುವ - ನಿಷೇಧಿಸುವ 'ಕಟ್ಟೆಮನೆ' ಗಳಿರುತ್ತವೆ, ಇವನ್ನು ಇವರು 'ಮ್ಯಾಸ ಮಂಡಲಿ'ಗಳೆನ್ನುತ್ತಾರೆ. ಉದಾಹರಣೆಗೆ

ಚಳ್ಳಕೆರೆ ತಾಲ್ಲೂಕಿನ ನನ್ನಿವಾಳ, ಹಿರೇಹಳ್ಳಿ, ಗೌರಸಮುದ್ರ (ಐಹೋಜಿ ಮಠ) ಗಳನ್ನು ಹೆಸರಿಸಬಹುದು.

ಸತ್ತಾಗ ನಿರ್ವಹಿಸುವ ಕರ್ಮಗಳಲ್ಲೂ ತಮ್ಮದೇ ಆದ ವಿಶಿಷ್ಟತೆಯನ್ನು ಕಾಣ ಬಹುದು - "ಸತ್ತವರನ್ನು ಸ್ಮಶಾನಕ್ಕೆ ಒಯ್ಯುವಾಗ ವಾರಸುದಾರನಾದವನು ಒಂದು ಮಣ್ಣಿನ ಮಡಿಕೆಯಲ್ಲಿ ಪಿಂಡವನ್ನು ಇಟ್ಟುಕೊಂಡು ಹೆಣದ ಮುಂದೆ ಸಾಗುತ್ತಾನೆ. ಮಾರ್ಗ ಮಧ್ಯದಲ್ಲಿ ಒಂದು ಹಸಿರು ಗಿಡದ ಬುಡದಲ್ಲಿ ಪಿಂಡದ ಮಡಿಕೆಯನ್ನಿಟ್ಟು, ಸ್ಮಶಾನಯಾತ್ರೆಯಲ್ಲಿ ಪಾಲ್ಗೊಂಡವರೆಲ್ಲರೂ ಕಲ್ಲುಗಳನ್ನು ಬೀರಿ ಆ ಮಡಕೆಯನ್ನು ನುಚ್ಚುನೂರು ಮಾಡುತ್ತಾರೆ. ಮೂರನೆಯ ದಿನ ಸತ್ತವನ ಸಂಬಂಧಿಕರು ಸಮಾಧಿ ಪೂಜೆ ಮಾಡಿ ಮನೆಗೆ ಹಿಂತಿರುಗಿದ ನಂತರ 'ಕರಿ'ಯನ್ನು ತೀರಿಸುತ್ತಾರೆ. ಯಾವ ಸ್ಥಳದಲ್ಲಿ ವ್ಯಕ್ತಿಯು ನಿಧನವಾದನೋ ಆ ಜಾಗದಲ್ಲಿ ಒಂದು ಟಗರುಮರಿಯನ್ನು ಬಲಿ ಮಾಡುವ ಕರ್ಮಕ್ಕೆ 'ಕರಿ'ಯೆಂದು ಹೆಸರು. ಅದೇ ಮಾಂಸದಿಂದ ಮನೆಮಂದಿಯೆಲ್ಲಾ ಅಡಿಗೆ ಮಾಡಿ ಉಣ್ಣುತ್ತಾರೆ. ತೀರಾ ಬಡವರಾದವರು ಕಟುಕನಿಂದ ಟಗರಿನ ತಲೆ ಯನ್ನು ಕೊಂಡು ತಂದಾದರೂ 'ಕರಿ' ತೀರಿಸುತ್ತಾರೆ. ಕರಿ ತೀರಿಸುವ ಕರ್ಮ ಮುಗಿಯು ವವರೆಗೆ ಅನ್ಯರಿಗೆ ಆ ಮನೆಗೆ ಪ್ರವೇಶವಿರುವುದಿಲ್ಲ. ಹದಿನಾಲ್ಕನೆಯ ದಿನ ಕೈಲಾಸ ಆರಾಧನೆಯನ್ನು ಸತ್ತವರ ಹೆಸರಿನಲ್ಲಿ ತಮ್ಮ ಯೋಗ್ಯತಾನುಸಾರ ನಡೆಸುತ್ತಾರೆ."[13]

ಇ. ಥರ್ಸ್‌ಟನ್‌ರವರು ಕರ್ನೂಲು ಭಾಗದ ಮ್ಯಾಸಬೇಡರ ಬಗ್ಗೆ ಬರೆಯುತ್ತಾ, ಅಲ್ಲಿ ಇವರನ್ನು ಅಪರಾಧಿ ಬುಡಕಟ್ಟುಗಳು (criminal tribes) ಎಂದು ಗುರುತಿಸು ತ್ತಾರೆ.

"ಶೌರ್ಯ - ಸಾಹಸಗಳಿಗೆ ಹೆಸರಾದ ಈ ಜನಾಂಗದ ಅನೇಕರು ದರೋಡೆಕೋರ ರೆಂತಲೂ, ಸುಲಿಗೆಕೋರರೆಂತಲೂ ಕುಖ್ಯಾತಿ ಪಡೆದವರು. ಅವರು ಶಸ್ತ್ರಸಜ್ಜಿತರಾಗಿ ಅರಣ್ಯಗಳಲ್ಲೂ, ಗುಡ್ಡಗಳಲ್ಲೂ ಸಂಚರಿಸುತ್ತಾ, ಗ್ರಾಮಗಳನ್ನು ಲೂಟಿ ಮಾಡುತ್ತಾ ಸಾಮಾನ್ಯರಿಗೆ ಸಿಂಹಪ್ರಾಯರಾಗಿರುತ್ತಿದ್ದರು"[14] ಎಂಬ ಅಭಿಪ್ರಾಯವನ್ನು ವಿದ್ವಾಂಸರು ವ್ಯಕ್ತಪಡಿಸುತ್ತಾರೆ.

ಮೂಲತಃ ವೀರರೂ, ಬೇಟೆಗಾರರೂ ಆದಂತಹ ಈ ಜನಾಂಗಕ್ಕೆ ಪಾಳಯ ಪಟ್ಟುಗಳ ಅವನತಿಯ ನಂತರ ಕೆಲಸವಿಲ್ಲದಂತಾಯಿತು. ಬ್ರಿಟಿಷರ ಆಳ್ವಿಕೆಯಲ್ಲಿ ಬೇಟೆಗೆ ಬಂದೊದಗಿದ ನಿಷೇಧದಿಂದ ನಿರುದ್ಯೋಗಿಗಳಾದ ಇವರನ್ನು ಪರಿಸ್ಥಿತಿಯೇ ಅಪರಾಧ ಮಾಡಲು ಪ್ರಚೋದಿಸಿರಬೇಕು. ಇವರ ಅಪರಾಧಿ ನಡವಳಿಗಳನ್ನು ಸಮರ್ಥಿಸು ವಂತಹ ಗಾದೆಗಳು ಇಂದೂ ಚಲಾವಣೆಯಲ್ಲಿವೆ.

ನಾಗರೀಕ ಜನಾಂಗದ ಸಂಪರ್ಕವಿಲ್ಲದೆ ಗಿರಿ - ಕಂದರ, ಅರಣ್ಯಗಳಲ್ಲಿ ಇದ್ದಂತಹ ಈ ಜನಾಂಗ, ನಾಗರೀಕ ಜನಗಳಲ್ಲಿ ತಮ್ಮ ಸಹಜ ಒರಟುತನದ ಮೂಲಕ ಅಸಹನೆ–ಅಪಸಂಬಿಕೆಗಳನ್ನು ಮೂಡಿಸಿರಬಹುದು. ಈ ಜನಾಂಗ ಇಂದು ಗೌರವಯುತ ನಡವಳಿಕೆಯಿಂದ ಇದ್ದರೂ - ಬೇರೆಯವರು ಇವರನ್ನು ಭಯಮಿಶ್ರಿತ ದೃಷ್ಟಿಯಲ್ಲೇ ನೋಡುತ್ತಿದ್ದಾರೆ.

ಈ ಜನಾಂಗದ ಕೆಲವು ಹಬ್ಬ ಮತ್ತು ಸಂಪ್ರದಾಯಗಳನ್ನು ನೋಡೋಣ.

ಗುಗ್ಗರಿ ಹಬ್ಬ :[15]

ಹಿಂದೂಗಳಂತೆ ಬೇರೆಲ್ಲಾ ಹಬ್ಬಗಳನ್ನು ಇವರು ಆಚರಿಸಿದರೂ, 'ಗಂಗ್ಗರಿ ಹಬ್ಬ' ಅವರನ್ನು ಬೇರೆಯವರಿಂದ ಪ್ರತ್ಯೇಕಿಸುವಷ್ಟು ವಿಶಿಷ್ಟವಾಗಿದೆ.

ತಮ್ಮ ಹೊಲಗಳಲ್ಲಿ ಹೊಸದಾಗಿ ಬೆಳೆದ ಹುರುಳಿ, ತೊಗರಿ, ಹಲಸಂದಿ, ಹೆಸರುಕಾಳು ಮುಂತಾದ 'ಗುಗ್ಗರಿ' ಬೇಯಿಸಲು ಬರುವಂತಹ ದ್ವಿದಳ ಧಾನ್ಯಗಳನ್ನು ಬೆಳೆದರೂ, ಗುಗ್ಗರಿಹಬ್ಬ ಮಾಡುವವರೆಗೂ ಒಂದು ಕಾಳನ್ನೂ ಬಳಸುವಂತಿಲ್ಲ, ಬೇಯಿಸುವಂತೆಯೂ ಇಲ್ಲ ! [ಇಂಥದೇ ವಿಶಿಷ್ಟ ಆಚರಣೆಯನ್ನು ಚಳ್ಳಕೆರೆ ತಾಲ್ಲೂಕಿನ ಪುರ್ಲೆಹಳ್ಳಿ ಬಳಿ ಇರುವ ಚೆನ್ನಮ್ಮ ನಾಗತಿಹಳ್ಳಿಯಲ್ಲಿರುವ 'ಕ್ಯಾತಪ್ಪನ ಪರಿಸೆ'ಯಲ್ಲೂ ಕಾಣಬಹುದು. ಈ ಹಬ್ಬ ನಡೆಯುವ ಒಂದು ತಿಂಗಳು ಈ ದೇವರಿಗೆ ನಡೆದುಕೊಳ್ಳುವ ಯಾವ ಗೊಲ್ಲರೂ ತಮ್ಮ ಮನೆಗಳಲ್ಲಿ ಹುರುಳಿ - ನವಣೆಗಳನ್ನು ಇಟ್ಟುಕೊಳ್ಳುವಂತಿಲ್ಲ ; ಹಬ್ಬ ಮುಗಿಯುವವರೆಗೂ ಬೇರೆಯವರ ಮನೆಗಳಲ್ಲಿ ಇಡುತ್ತಾರೆ. ಈ ದೇವರನ್ನು ಹುರುಳಿ - ನವಣೆ ಹೊಲಗಳ ಮೇಲೆ ಕೊಂಡೊಯ್ಯುವಂತೆಯೂ ಇಲ್ಲ ! ಆದರೆ ಮ್ಯಾಸನಾಯಕರ ಯಾವ ದೇವರುಗಳಿಗೂ (ಕಾಟುಲಿಂಗನನ್ನು ಬಿಟ್ಟು) ನವಣೆಯ 'ತೊಂಬಟ' (ತಂಬಿಟ್ಟು) ಆಗುವುದಿಲ್ಲ !]

ಗಂಗ್ಗರಿ ಹಬ್ಬದ ದಿನ ಎಲ್ಲರೂ ತಾವು ಬೆಳೆದ ಈ ಧಾನ್ಯಗಳನ್ನು ತಂದು ದೇವಸ್ಥಾನದಲ್ಲಿ ಸುರಿಯುತ್ತಾರೆ. ಬೇಯಿಸಿದ ನಂತರ ದೇವರುಗಳಿಗೆ 'ಎಡೆ' ಹಾಕುತ್ತಾರೆ, ನಂತರ 'ಪ್ರಸಾದ'ವೆಂದು ತಿನ್ನುತ್ತಾ ಮುಂದಿನ ಗಂಗ್ಗರಿ ಹಬ್ಬದವರೆಗೂ ಬಳಸುತ್ತಾರೆ.

ಈ ಹಬ್ಬವನ್ನು ಎಲ್ಲಾ ಪಂಗಡಗಳ ಮ್ಯಾಸನಾಯಕರು ಆಚರಿಸಿದರೂ ವಿಶೇಷ ಆಸ್ಥೆಯಿಂದ ಹಬ್ಬ ಮಾಡುವವರು - ಮಳೆಲೋರು. ಇವರ ಮನೆದೇವರು ನಾಕ ನಡುಕುನರಸಿಂಹಸ್ವಾಮಿ. ಇದು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಲ್ಲಿದೆ. ಗಂಗ್ಗರಿ ಹಬ್ಬದ ದಿನ ಇಲ್ಲಿ ಸಾವಿರಾರು ಭಕ್ತರು ಸೇರುತ್ತಾರೆ. ಗಂಗ್ಗರಿ ನೀರಿನಲ್ಲಿ ಕುದಿಯುತ್ತಾ ಬೇಯುತ್ತಿರುವಾಗ, ಪಟ್ಟದ ಪೂಜಾರಿಯ ಹೆಂಡತಿ ಅಂದು ಒಂದೊತ್ತಿ

ಸಲ್ಲಿದ್ದು, ಮಡಿಯಲ್ಲಿ ಬಂದು ಬೇಯುತ್ತಿರುವ ಗುಗ್ಗರಿ ಕೊಳಗದಲ್ಲಿ ಬರಿಕೈಯಲ್ಲಿ ಕೈಯಿಟ್ಟು ಗುಗ್ಗರಿಯನ್ನು ತಿರುವುತ್ತಾಳೆ! (ಸೌಟು ಮಾಡುವ ಕೆಲಸವನ್ನು ಈಕೆಯ ಬರಿಗೈ ಮಾಡುತ್ತದೆ!) ಆಕೆಯ ಕೈಯಲ್ಲಿ ಬೊಬ್ಬೆ ಕೂಡಾ ಏಳುವುದಿಲ್ಲ!

ಇದೇ ಹಬ್ಬದಲ್ಲಿ ಇನ್ನೊಂದು ವಿಶಿಷ್ಟ ಕಾರ್ಯಕ್ರಮ ನಡೆಯುತ್ತದೆ. ಗುಗ್ಗರಿ 'ಎಡೆ'ಯನಂತರ ಈ ದೇವರುಗಳನ್ನು ಊರ ಹೊರಗೆ ಹೊರಡಿಸಿಕೊಂಡು ಹೋಗು ತ್ತಾರೆ. ಸಾಮಾನ್ಯವಾಗಿ ಇವರ ದೇವರುಗಳೆಲ್ಲ 'ಬುಟ್ಟಿ ದೇವರು'ಗಳು ಅಥವಾ 'ಪೆಟ್ಟಿಗೆ ದೇವರು'ಗಳು. ತೆಲುಗಿನಲ್ಲಿ ಇವನ್ನು 'ದೇವಗಂಪಲು' ಎನ್ನುತ್ತಾರೆ. 'ದೇವ' ಎಂದರೆ 'ದೇವರುಗಳು', 'ಗಂಪ' ಎಂದರೆ ಪಟ್ಟಿ (ತಟ್ಟಿ) ಅಥವಾ ಹೆಡಿಗೆ; ಆದ್ದರಿಂದ ಇವನ್ನು 'ಪುಟ್ಟಿಯಲ್ಲಿರುವ ದೇವರುಗಳು (ದೇವಗಂಪಲು)' ಎನ್ನುತ್ತಾರೆ. ಹಿಂದುಳಿದ ವರ್ಗದ ಜನಗಳ ಬಹಳಷ್ಟು ದೇವರುಗಳು ವಾಸ ಮಾಡುವುದು ಇಂತಹ ಪುಟ್ಟಿ, ತಟ್ಟಿ, ಹೆಡಿಗೆ ಅಥವಾ ಪೆಟ್ಟಿಗೆಗಳಲ್ಲೇ. [ಉದಾಹರಣೆಗೆ ಶ್ರೀಶೈಲದಿಂದ ಮ್ಯಾಸನಾಯಕರು ವಲಸೆ ಬರುವಾಗ ತಮ್ಮ ಜೊತೆಯಲ್ಲಿ ತಮ್ಮ ಹನ್ನೆರಡು ಪೆಟ್ಟಿಗೆ ದೇವರುಗಳನ್ನು ಜೊತೆಯಲ್ಲೇ ತರುತ್ತಾರೆ] ಊರು ನಾಯಕರು ಮಾರಮ್ಮನನ್ನು ತಟ್ಟಿಯಲ್ಲಿ ಅಥವಾ ಪೆಟ್ಟಿಗೆಯಲ್ಲಿ ಇಟ್ಟುಕೊಂಡು ಬೀದಿ ತಿರುಗುತ್ತಾ ಭಿಕ್ಷೆ ಎತ್ತುವುದನ್ನು ಕಾಣಬಹುದು, ಬೆಸ್ತರು 'ಜೋಕುಮಾರ'ನನ್ನು ತೂರುವ ಪುಟ್ಟಿ ಅಥವಾ ಮೊರದಲ್ಲಿ ಇಟ್ಟು ಮೆರೆಸು ವುದನ್ನು ನೋಡಬಹುದು.

ಊರ ಹೊರಗೆ ಕರೆದುಕೊಂಡು ಬಂದ ದೇವರುಗಳನ್ನು ಒಂದು ಕಡೆ ನಿಲ್ಲಿಸು ತ್ತಾರೆ. ಅಲ್ಲಿಗೆ 'ಎತ್ತಿನ ಕಿಲಾರಿ' (ದೇವರುಗಳ ಹೆಸರಿನಲ್ಲಿ ಬಿಟ್ಟ ದನಗಳನ್ನು ಕಾಯುವ ಪವಿತ್ರ ಕಾಯಕ ಮಾಡುವ ಪೂಜಾರಿ. ಮ್ಯಾಸನಾಯಕರ ಸಾಂಸ್ಕೃತಿಕ ವೀರರಾದ ಗಾದಿರಿ ಪಾಲನಾಯಕ ಮತ್ತು ಜಗಲೂರು ಪಾಪನಾಯಕ ಅವರುಗಳು ಎತ್ತಿನ ಕಿಲಾರಿ ಗಳಾಗಿದ್ದರು) ಕೆಲವು ದೇವರ ದನಗಳನ್ನು ಅಲ್ಲಿಗೆ ತಂದು ಕಲೆಸುತ್ತಾನೆ. ಇಲ್ಲಿಗೆ ಬರುವ ಈ ಬುಟ್ಟಿ ದೇವರುಗಳನ್ನು 'ಉದಿ' ಎಂದೂ, ಬಂದು ಸೇರುವ ದೇವರ ದನ ಗಳನ್ನು 'ಪದಿ' ಎಂದೂ, ಇವೆರಡೂ ಸೇರುವುದನ್ನು 'ಉದಿ-ಪದಿ'ಗಳ ಸೇರುವಿಕೆ ಎಂದು ಭಕ್ತಿಯಿಂದ ಪೂಜಿಸುತ್ತಾರೆ.

ಹಂದಿ ಬೇಟೆ :

ಗರಡಿ ಸಾಧನೆಯ ಮೂಲಕ ದೃಢವಾದ ಮೈಕಟ್ಟನ್ನು ಮೈಗೂಡಿಸಿಕೊಂಡು ಬಂದಿರುವ ಇವರು ಪ್ರಾಣದ ಹಂಗು ತೊರೆದು ಬೇಟೆಯಾಡುವುದರಲ್ಲಿ ಸಿದ್ಧಹಸ್ತರು ಎಂದು ಬಳ್ಳಾರಿ ಜಿಲ್ಲೆಯ ಹೊಸಪೇಟೆ ಭಾಗದ ಮ್ಯಾಸಬೇಡರ ಬಗ್ಗೆ ಇ. ಥರ್ಸ್ಟನ್[16] ಬರೆಯುತ್ತಾರೆ.

ಚಳ್ಳಕೆರೆಯ ಪ್ರಾಂತ್ಯದಲ್ಲಿರುವ ಮ್ಯಾಸನಾಯಕರು 'ವರ್ಷದತೊಡಕು ದಿನ' (ಯುಗಾದಿ ಹಬ್ಬದ ಎರಡನೆಯ ದಿನ) ನೂರಾರು ಯುವಕರು, ಮುದುಕರು ಕೈಯಲ್ಲಿ ಕತ್ತಿ, ಭರ್ಜಿ, ಈಟಿ, ಗಂಡುಗೊಡಲಿ, ಚಿಪ್ಪುಗೊಡಲಿ, ಕೊಡಲಿ, ಕುಡುಗೋಲು, ಮಚ್ಚು, ಕೋವಿಗಳನ್ನು ಹಿಡಿದು ಊರ ಹೊರಗಿರುವ 'ಸೀಮೆಜಾಲಿ' (ಬಳ್ಳಾರಿ ಜಾಲಿ)ಗಳಲ್ಲಿ ಅಡಗಿರುವ ಹಂದಿಗಳನ್ನು ಕೊಲ್ಲಲು ಹಾಹಾಕಾರ ಮಾಡುತ್ತಾ, ಕೇಕೆಹಾಕಿ ಅಬ್ಬರಿಸುತ್ತಾ, ತಪ್ಪಡೆಯ ರಿಂಗಣ ಕುಣಿತಕ್ಕೆ ಆವೇಶಭರಿತರಾಗಿ ಕುಣಿಯುತ್ತಾ ಹೋಗುತ್ತಾರೆ. ಬೇಟೆ ಸಿಗದಿದ್ದಲ್ಲಿ ಬರಿಗೈಯಲ್ಲಿ ಮನೆಗೆ ಮರಳುವಂತಿಲ್ಲ! ಕೆಲವು ಬಾರಿ ಎರಡು ಮೂರು ದಿನಗಳಾದರೂ ಬೇಟೆ ಸಿಗದಿರುವ ನಿದರ್ಶನಗಳೂ ಉಂಟು.

ಕೆಲವು ಸಾರಿ ಒಂದೇ ಬೇಟೆಯನ್ನು ಎರಡು ಊರಿನವರು ಬೇಟೆಯಾಡಿದಾಗ ಬೇಟೆ ಯಾರಿಗೆ ಸೇರಬೇಕು ಎಂಬುದರ ಬಗ್ಗೆ 'ಕಿರಾತಾರ್ಜುನೀಯ'ವೇ ಆಗುತ್ತದೆ. ಆದರೆ ಯಾರೂ ಬೇಟೆ ಬಿಟ್ಟುಕೊಡಲು ತಯಾರಿರುವುದಿಲ್ಲ, ಇದು ಪ್ರತಿಷ್ಠೆಯ ಪ್ರಶ್ನೆ. ಹಂದಿಯಲ್ಲಿ ಊರಿನ 'ಹುಲುಸು' ಅಡಗಿದೆ ಎಂಬ ನಂಬಿಕೆ ಇರುವುದರಿಂದ ಯಾರೂ ತಮ್ಮ ಹಕ್ಕನ್ನು ಕಳೆದುಕೊಳ್ಳಲು ತಯಾರಿಲ್ಲದೆ ದೊಡ್ಡ ರಗಳೆಗಳೇ ನಡೆಯುತ್ತವೆ. ಕೊನೆಗೆ ಬೇಟೆಗೆ ಹೋದವರೆಲ್ಲಾ ಬೇಟೆಯನ್ನು – ಒಂದೊಂದು ತುಂಡು ಸಿಕ್ಕರೂ ಸರಿ ಎಲ್ಲರೂ ಸಮವಾಗಿ ಹಂಚಿಕೊಳ್ಳುತ್ತಾರೆ.

ಇಂತಹ ಸಂಪ್ರದಾಯದ ಮೂಲಕ ತಮ್ಮ ಪೂರ್ವಜರ ವೃತ್ತಿಯಾದ ಬೇಟೆಯ ಖುಷಿಯನ್ನು ಅನುಭವಿಸುತ್ತಾರೆ. ಇದಲ್ಲದೆ ವರ್ಷದ ಬೇರೆ ದಿನಗಳಲ್ಲಿ ಬಲೆಗಳನ್ನು ತೆಗೆದುಕೊಂಡು ಹೋಗಿ ಮೊಲಗಳ ಬೇಟೆಯಾಡಿಕೊಂಡು ಅಲ್ಲೇ ಅಡಿಗೆ ಮಾಡಿಕೊಂಡು ಊಟಮಾಡಿ ಬರುವುದುಂಟು.

ವಾಸೆ ಕೊಯ್ಯೋದು :[17]

ಇದು ಐದು - ಹತ್ತು ವರುಷಗಳಿಗೊಮ್ಮೆ ನಡೆಸುವ ಅಪರೂಪದ ವಿಶಿಷ್ಟ ಸಂಪ್ರದಾಯ. ತಮ್ಮ ಮನೆದೇವರನ್ನು, ಇಷ್ಟದೇವತೆಯನ್ನು ಬೆಳಗಿನ ಜಾವವೇ 'ಹೊಳೆ'ಗೆ ಹೊರಡಿಸಿಕೊಂಡು ಹೋಗುತ್ತಾರೆ. ಅಲ್ಲಿ ವಾಸೆ ಕೊಯ್ಯಲು ಬಳಸುವುದು ಅಚ್ಚ ಕಪ್ಪು ಬಣ್ಣದ ಹೋತವನ್ನು ಮಾತ್ರ! ಇದರ ಮೈಯಲ್ಲಿ ಒಂದೇ ಒಂದು ಬೇರೆ ಬಣ್ಣದ ಕೂದಲು ಇರಕೂಡದು! (ಮೇಕೆ ಅಥವಾ ಕುರಿಯನ್ನು ಈ ಕಾರ್ಯಕ್ಕೆ ಬಳಸುವಂತಿಲ್ಲ.) ಇದನ್ನು 'ಪೋತರಾಜ' ಎನ್ನುತ್ತಾರೆ. ಸೂರ್ಯೋದಯಕ್ಕೆ ಮೊದಲೇ ಈ ಸಂಪ್ರದಾಯವನ್ನು ನೆರವೇರಿಸಬೇಕು. ಹೋತವನ್ನು ಅಂಗಾತ ಮಲಗಿಸಿಕೊಂಡು (ಮುಸ್ಲಿಮರು 'ಹಲಾಲು' ಮಾಡುವ ರೀತಿಯಲ್ಲಿ) ಅದರ ಕುತ್ತಿಗೆ ಕೊಯ್ಯುತ್ತಾರೆ. ಅದರ ಕುತ್ತಿಗೆ ಕೊಯ್ದ ನಂತರ 'ಸೂರ್ಯನಿಮೊಕ್ಕು' (ಸೂರ್ಯನ ನಮಸ್ಕಾರ) ಮಾಡುತ್ತಾರೆ; ಇದು ಈ ಸಂಪ್ರದಾಯಕ್ಕೆ ವಿಶಿಷ್ಟತೆ ತಂದುಕೊಟ್ಟ 'ಯರಮಂಚ

ನಾಯಂಕ'ನಿಗೆ ತೋರುವ ಗೌರವ ಎಂದು ಭಾವಿಸುತ್ತಾರೆ. ಇದನ್ನೇ 'ವಾಸೆ ಕೊಯ್ಯು ವುದು ಅಥವಾ ನೋವು ತೀರಿಸುವುದು' ಎನ್ನುತ್ತಾರೆ.

ಈ ಕಾರ್ಯ ನಿರ್ವಹಿಸುವವರಲ್ಲಿ ಅಣ್ಣ - ತಮ್ಮಂದಿರು ಇದ್ದಾಗ - ವಾಸೆ ಕೊಯ್ಯುವ ಮೊದಲ ಹಕ್ಕು ಅಣ್ಣನದು, ನಂತರದ್ದು ತಮ್ಮನದು. ಇದರಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ದೊಡ್ಡ ರಾದ್ಧಾಂತವೇ ನಡೆದುಬಿಡುತ್ತದೆ.

ನಾಯಕನಹಟ್ಟಿ ಪಾಳಯಗಾರರ ಮೂಲಸಂತತಿಗೆ ಸೇರಿದ ಸೂರದೇವಿನ ಪಾಪ ನಾಯ್ಕನಿಗೂ, ನಿಡುಗಲ್ಲಿನ ಹೊಟ್ಟೆಳನಾಯ್ಕನಿಗೂ ಈ ವಿಚಾರವಾಗಿ ಅನೇಕ ವಿವಾದ ಗಳು ನಡೆದ ಸೂಚನೆ ನಾಯಕನಹಟ್ಟಿ ಬಬ್ಬೈರಿನಲ್ಲಿ ದೊರೆಯುತ್ತದೆ.[18]

ಹಟ್ಟಿ ಪಾಳಯಪಟ್ಟಿಗೆ ಸಂಬಂಧಿಸಿದ ದಸ್ತಾವೇಜೊಂದರ ಪ್ರಕಾರ[19] ಯರ ಮಂಚನಾಯಕ, ಕಾಕಳಕುಮಾರ (ಇವನನ್ನು ದಸ್ತಾವೇಜಿನಲ್ಲಿ ಕಾಕುಮಂಚಿಕುಮಾರ ಎಂದು ಹೆಸರಿಸಲಾಗಿದೆ. ಇವನೇ ಹಟ್ಟಿ ಪಾಳೆಯಪಟ್ಟಿನ ಮೂಲಪುರುಷ) ಇಬ್ಬರೂ ಅಣ್ಣ - ತಮ್ಮಂದಿರು. ಯರಮಂಚನಾಯಕನದು ಕೆಂಪುಬಣ್ಣದ ಹೋತ, ಕಾಕಳ ಕುಮಾರನದು ಕಪ್ಪು ಬಣ್ಣದ ಹೋತ. ಅಣ್ಣ ಯರಮಣಸನಾಯಕ ವಾಸೆಕೊಯ್ಯಲು ಬರುವುದು ತಡವಾಯಿತೆಂದು ಆತನ ಪ್ರಥಮ ಹಕ್ಕನ್ನು ಉಲ್ಲಂಘಿಸಿ ಕಾಕಳನಾಯಕ 'ವಾಸೆ ಕೊಯ್ದು' ನಂತರ ಬಂದ ಯರಮಂಚನಾಯಕ ತನಗೆ ಅವಮಾನವಾಯಿತು ಎಂದು ದುಃಖಿತನಾಗಿ 'ಒಂದೇ ಕಾಯಿ - ಒಂದೇ ಹೋತ - ಒಬ್ಬನೇ ಹುಡುಗನಿಂದ ಏಳುಬಾರಿ ವಾಸೆಕೊಯ್ದು'. ಪ್ರತಿಸಾರಿ ವಾಸೆಕೊಯ್ದಾಗಲೂ ಹೋತ ಬದುಕಿ ಬರುತ್ತಿತ್ತು, ಒಡೆದಕಾಯಿ ಕೂಡಿಕೊಳ್ಳುತ್ತಿತ್ತು, ಸತ್ತ ಹುಡುಗ ಬದುಕುತ್ತಿದ್ದ ! ಈ ವಾಸೆ ಕೊಯ್ಯಲು ಬಳಸಿದ ಹುಡುಗ ಕೆಂಗುರಿ ಗೊಲ್ಲರವನಾಗಿದ್ದನು. ಆದರೆ ಅವನು ಸಾಯದೆ ಕೆಂದಕುರಿ ಅವನ ಸ್ಥಾನದಲ್ಲಿ ಕಾಣಿಸಿಕೊಳ್ಳುತ್ತಿತ್ತು. ಅದಕ್ಕೋಸ್ಕರ ಖುದಾಪುರದ ಬೋರೆದೇವರ ಮೊದಲ ಮೀಸಲು ಪೂಜೆ ಆ ಜನಾಂಗದವರಿಗೇ ಸಲ್ಲ ಬೇಕೆಂದು ಶಾಸನ ಮಾಡಿದ ವಿವರ ಮತ್ತೊಂದು ದಸ್ತಾವೇಜಿನಲ್ಲಿ[20] ನೋಡಬಹುದು.

ತನ್ನ ಸತ್ಯ ತೋರಿದ ಯರಮಂಚಿನಾಯಕ, ಅವಮಾನವಾದ ಮೇಲೆ ಇಲ್ಲಿ ಇರ ಬಾರದೆಂದು ಹೊರಟು ವೇದಾವತಿ ನದಿ ದಾಟುತ್ತಿರುವಾಗ, ಈ ಸುದ್ದಿ ತಿಳಿದ ಸಮೀಪದ ಗೌರಸಮುದ್ರ (ಆಗ ಇದು 'ಐಪೋಜಿಪಂತ' ಎಂದು ಕರೆಯಲ್ಪಡುತ್ತಿದ್ದು, ಮ್ಯಾಸ ಮಂಡಲಿಯ ಒಂದು ಪ್ರಮುಖ ಕಟ್ಟೆಮನೆಯಾಗಿತ್ತು) ಮ್ಯಾಸರು – 'ಯರಮಂಚ ನಾಯಕನನ್ನು ಹೀಗೇ ಬಿಟ್ಟರೆ ಊರು ನಾಯಂಕರಲ್ಲಿ ಸೇರಿಬಿಡುತ್ತಾನೆಂದು ಭಾವಿಸಿ, ಹೋಗಿ ಹಿಂತಿರುಗುವಂತೆ ಬೇಡಿಕೊಂಡರು. ಆಗ ಅವನು 'ನನ್ನ ಮಾತಿಗೆ ಎದುರು

ಆಡುವುದಿಲ್ಲವೆಂದರೆ ಮಾತ್ರ ನಾನು ನಿಮ್ಮನ್ನು ಸೇರುತ್ತೇನೆ ಎಂದ. ಅದಕ್ಕೆ ಅವರು ಒಪ್ಪಿದ್ದಲ್ಲದೆ ತಮ್ಮ ಮ್ಯಾಸಮಂಡಲಿಗೆ ನಾಯಕನನ್ನಾಗಿ ಮಾಡಿಕೊಂಡರು.

ವಿಭೂತಿ ಪುರುಷನಾದ ಯರಮಂಚನಾಯಕ "ಒಂದೇ ಜ್ಯೋತಿಗೆ ಕುಲ ಗೋತ್ರ ಭೇದವಿಲ್ಲದೆ ಎಲ್ಲರನೂ ಒಂದೇ 'ಮುಕ್ಕು' (ನಮಸ್ಕಾರ) ಮುಂಗಿಸ್ತೀನಿ" ಎಂದು ಪ್ರತಿಜ್ಞೆ ಮಾಡಿದ. ಗೌರಸಮುದ್ರದಲ್ಲಿ ನಡೆಯುವ ಮಾರಮ್ಮನ ಜಾತ್ರೆಯ ಸಂದರ್ಭ ದಲ್ಲಿ – ಗೌರಸಮುದ್ರ ಊರೊಳಗಿನಿಂದ ತುಮ್ಮಲಿಗೆ ಮಾರಮ್ಮ ಬಂದು ಕೂತಾಗ ಆಕೆಯ ಎದುರಿಗೆ ಕಾಣುವಂತೆ ಏಳುಸ್ತಂಭದ ದೀಪಸ್ತಂಭ ನೆಡಿಸಿ ಅದರ ಮೇಲೆ 'ಜ್ಯೋತಿ' ಇಟ್ಟಾಗ ಕುಲಗೋತ್ರ ಭೇದವಿಲ್ಲದೆ ಎಲ್ಲರೂ ಕೈಮುಗಿಯುವಂತೆ ಮಾಡಿ ತನ್ನ ಮಹಿಮೆಯನ್ನು ಮೆರೆದ. ವಾಸೆ ಕೊಯ್ದಾಗ ಮಾಡುವ ಸಾಂಕೇತಿಕವಾದ 'ಸೂರ್ಮ್ಯನಿ ಮೊಕ್ಕು' ಸಂಪ್ರದಾಯದ ಹಿಂದೆ ಈ ಕತೆ ಇರುವುದನ್ನು ಅರಿಯಬಹುದು.

ವಾಸೆ ಕೊಯ್ದ ನಂತರ ಮಾಡಿದ ಮಾಂಸದ ಅಡುಗೆಯಲ್ಲಿ ಅಣ್ಣ-ತಮ್ಮಂದಿರಿಗೆ ಬಿಟ್ಟು ಬೇರೆ ಯಾರಿಗೂ ಒಂದು ಸಣ್ಣ ತುಂಡು ಮಾಂಸವನ್ನೂ ಕೊಡುವುದಿಲ್ಲ, ಸಂಪೂರ್ಣವಾಗಿ ತಾವೇ ತಿನ್ನುತ್ತಾರೆ ! ಈ ಮಾಂಸವನ್ನು ಇವರು 'ಬಂಗಾರದ ತುಂಡು' ಎಂದು ಭಾವಿಸಿ ತಿನ್ನುತ್ತಾರೆ. ಮಾಂಸವನ್ನು ಪೂರ್ಣವಾಗಿ ತಿಂದ ನಂತರ ಉಳಿಯುವ ಎಲುಬು - ಮೂಳೆಗಳನ್ನೂ ಬಿಸಾಕುವುದಿಲ್ಲ ! ಸಮೀಪದಲ್ಲಿಯೇ ಒಂದು ಗುಂಡಿ ತೆಗೆದು ಅದರಲ್ಲಿ ಹೋತನ ತೊಗಲು (ಚರ್ಮ), ಮೂಳೆ, ತಟ್ಟೆ ತೊಳೆದ ನೀರು, ವಾಸೆ ಕೊಯ್ಯುವಾಗ ಮಣ್ಣಿನ ಮೇಲೆ ಚೆಲ್ಲಿದ ರಕ್ತದ ಮಣ್ಣನ್ನು, ಕೊನೆಗೆ ಕೈಯಲ್ಲಿಯ ಜಿಡ್ಡನ್ನು ತೊಳೆದ ಸೋಪಿನ ನೀರನ್ನೂ ಸಹ ಆ ಗುಂಡಿಗೆ ಬಿಟ್ಟು ಮಣ್ಣು ಮುಚ್ಚಿ ಅದರ ಮೇಲೆ ಕಳ್ಳಿಹಸೆ ಹಾಕಿ ಗುಂಡು ಹೇರುತ್ತಾರೆ. ವಾಸೆ ಕ್ರಿಯೆ ಅತ್ಯಂತ ಪವಿತ್ರ ವಾದುದು ಎಂಬ ಭಾವನೆ ಇರುವುದರಿಂದ, ಮೂಳೆಗಳನ್ನು ನಾಯಿ - ನರಿ ಮುಟ್ಟಿ ಅಪವಿತ್ರಗೊಳಿಸಬಾರದು ಎಂಬುದೇ ಈ ಕಟ್ಟುನಿಟ್ಟಿನ ನಡವಳಿಕೆಗೆ ಕಾರಣ.

ಆದರೆ ವಾಸೆ ಕೊಯ್ಯುವ ಸಂಪ್ರದಾಯವನ್ನು ಗೌರಸಮುದ್ರದಲ್ಲಿ ಪ್ರತಿವರ್ಷವೂ ತಪ್ಪದೆ ಆಚರಿಸುತ್ತಾರೆ. ಗೌರಸಮುದ್ರದ ಮಾರಮ್ಮನ ಹಬ್ಬ ಮಂಗಳವಾರ ಎಂದರೆ, ಅದರ ಹಿಂದಿನ ಗುರುವಾರವೇ ಇವರು ಬೊಮ್ಮಲಿಂಗ ದೇವರ (ಈತನನ್ನು ಮಾರಮ್ಮನ ತಮ್ಮ ಎನ್ನುತ್ತಾರೆ) ನೇತೃತ್ವದಲ್ಲಿ 'ಲಿಂಗದ ಗುಡಿ'ಯ ಬಳಿ ವಾಸೆ ಕೊಯ್ಯುತ್ತಾರೆ.

ಥಿಕ್ಕಿ ಹಬ್ಬ :

ಚಳ್ಳಕೆರೆಯಿಂದ ವಾಯುವ್ಯಕ್ಕೆ 8 ಕಿ.ಮೀ. ದೂರದಲ್ಲಿರುವ ನನ್ನಿವಾಳ ಮ್ಯಾಸ ಬೇಡರ ಒಂದು ಪ್ರಮುಖವಾದ ನೆಲೆ ಮತ್ತು ಅವರ ಸಾಂಸ್ಕೃತಿಕ ಕೇಂದ್ರ. ನನ್ನಿವಾಳದ ಸುತ್ತ 2-3 ಕಿ.ಮೀ.ಗಳ ಅಂತರದಲ್ಲಿ ಹತ್ತಾರು ಮ್ಯಾಸಬೇಡರ ಹಟ್ಟಿಗಳಿವೆ. ಇಲ್ಲಿ

ಅಪರೂಪಕ್ಕೆ ಥಿಕ್ಕಿಹಬ್ಬ ನಡೆಯುತ್ತದೆ. ಸುತ್ತಿನ ಹಟ್ಟಿಗಳಿಂದ 12 ಪೆಟ್ಟಿಗೆ ದೇವರು ಗಳು ಸೇರುತ್ತವೆ. 12 ಪೆಟ್ಟಿಗೆ ದೇವರುಗಳಲ್ಲೊಂದಾದ ಬಂಗಾರದೇವರಿಗೆ ತೆಂಗಿನ ಕಾಯಿ ಸೇರುವುದಿಲ್ಲ. ಹೀಗಾಗಿ ಆ ದೇವರಿಗೆ ತೆಂಗಿನಕಾಯಿ ಒಡೆಯುವಂತಿಲ್ಲ! ಆದರೆ 'ತಲೆ'ಯನ್ನೇ 'ತೆಂಗಿನಕಾಯಿ' ಎಂದು ಭಾವಿಸಿ, ಹರಕೆ ಹೊತ್ತ ಅತ್ತೆ - ಸೊಸೆಯರು ಅಂದರೆ ನೆಂಟರು - ಭಂಟರು. ಒಬ್ಬರ ಜುಟ್ಟು ಮತ್ತೊಬ್ಬರು ಹಿಡಿದು ಒಬ್ಬರ ತಲೆ ಗೊಬ್ಬರು 'ಫಟ್ - ಫಟ್' ಎಂದು 'ಥೀ' ಕಟ್ಟಿಕೊಳ್ಳುವ ಕ್ರಿಯೆಯ ಮೂಲಕ ಅಪರೋಕ್ಷವಾಗಿ ತೆಂಗಿನಕಾಯಿ ಅರ್ಪಿಸಿದ ತೃಪ್ತಿ ಪಡುತ್ತಾರೆ. ಸೋತವರು ಗೆದ್ದವ ರಿಗೆ ಕಜ್ಜಾಯ ಕೊಡಿಸಬೇಕಾಗಿರುವುದರಿಂದ ಇದೊಂದು ಆಟವೂ ಆಗುತ್ತದೆ. ಈ ಊರಿನ ಮತ್ತೊಂದು ವೈಶಿಷ್ಟ್ಯವೆಂದರೆ - ಈ ಊರಿನ 'ಹೊಲ - ಮೇರೆ'ಯಲ್ಲಿ ಒಂದೇ ಒಂದು ಕಾಗೆಯೂ ಪ್ರವೇಶಿಸುವುದಿಲ್ಲ! ಹಿಂದೆ ಮಾಂತ್ರಿಕನೊಬ್ಬ ಆ ರೀತಿ 'ಕಟ್ಟು' ಮಾಡಿದ ಕತೆ, ಥಿಕ್ಕಿ ಹಬ್ಬದ ಸಂದರ್ಭದಲ್ಲಿ ಹಾಡುವ ಸೋಬಾನೆ ಪದ ಗಳೊಂದಿಗೆ ತಳಕು ಹಾಕಿಕೊಂಡಿರುವುದನ್ನು ಗಮನಿಸಬಹುದು.

'ಸುಂತಿ' :

ನನ್ನಿವಾಳದ ಸುತ್ತಿನ ಮ್ಯಾಸಬೇಡರು ಮುಸ್ಲಿಂರಂತೆ 'ಸುಂತಿ' ಮಾಡಿಸಿಕೊಳ್ಳುವ ಸಂಪ್ರದಾಯ ಪಾಲಿಸುವುದು ಅತ್ಯಂತ ಆಶ್ಚರ್ಯದ ವಿಷಯ. ಇದರ ಹಿಂದೊಂದು ಕತೆಯೇ ಇದೆ. ನನ್ನಿವಾಳವನ್ನು ಆಳುತ್ತಿದ್ದ ದೊರೆಯೊಬ್ಬ 'ನನ್ನಿಮ್ಮ' ಎಂಬ ಮುಸ್ಲಿಂ ಹೆಂಗಸಿನೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದನಂತೆ. ಆಗ ನನ್ನಿವಾಳವನ್ನು- ನಂದಿವಾಳ ಎನ್ನುತ್ತಿದ್ದರು (ಈ ಊರಿಗೇ ಹೊಂದಿಕೊಂಡೇ ಇರುವ ಸುಮಾರು ಮೂರು ಸಾವಿರ ಅಡಿ ಎತ್ತರವಿರುವ ಬೃಹದಾಕಾರವಾದ ಪರ್ವತ 'ನಂದಿಯ ಭಂಜ'ವನ್ನೇ ಹೋಲುವುದರಿಂದ ಇದು 'ನಂದಿವಾಳ' ಎನಿಸಿಕೊಂಡಿರಬಹುದು.) ಈಕೆ ದೊರೆಯಲ್ಲಿ ತನ್ನ ಹೆಸರನ್ನು ಶಾಶ್ವತಗೊಳಿಸುವಂತೆಯೂ, ತಮ್ಮ ಮುಸ್ಲಿಂ ಸಂಪ್ರದಾಯವನ್ನು ಮ್ಯಾಸನಾಯಕರು ಅನುಸರಿಸುವಂತೆ ಮಾಡಬೇಕೆಂಬುದಾಗಿಯೂ ಕೇಳಿದ್ದರಿಂದ ರಾಜ ಊರಿನ ಹೆಸರನ್ನು 'ನನ್ನಿವಾಳ'ವೆಂದು ಬದಲಾಯಿಸಿ, ಎಲ್ಲರೂ ಸುಂತಿ ಮಾಡಿಸಿಕೊಳ್ಳ ಬೇಕೆಂದು ಆಜ್ಞೆ ಮಾಡಿದ.

ಹಿಂದಿನ ಕಾಲದಲ್ಲಿ ಸುಂತಿ ಮಾಡಿದ ಹುಡುಗರನ್ನು ಗ್ರಾಮಕ್ಕೆ ಮೈಲಿಗೆ ಯಾಗುತ್ತದೆಂದು ಮನೆಯಲ್ಲಿ ಇಟ್ಟುಕೊಳ್ಳದೆ ಊರ ಹೊರಗಿನ ಕಾಡಿನಲ್ಲಿ ಇಡುತ್ತಿ ದ್ದರು. 'ಸುಂತಿ' ಮಾಡಿದ ನಂತರದ 22 ದಿನಗಳವರೆಗೂ ಇವರಿಗೆ ಊರೊಳಗೆ ಪ್ರವೇಶವಿಲ್ಲ. ಕಾಡಿನಲ್ಲಿರುವ ಹಣ್ಣು - ಹಂಪಲುಗಳನ್ನು ತಿಂದುಕೊಂಡು, ಊರಿ ನಿಂದ ಬರುವ ಬುತ್ತಿಯನ್ನು ಉಂಡುಕೊಂಡು ಕಾಲ ಕಳೆಯಬೇಕಿತ್ತು.

ಈಗಲೂ ಹಳೆಯ ಕಾಲದ ಜನ ಈ ಸಂಪ್ರದಾಯವನ್ನು ಅನುಸರಿಸುತ್ತಾರೆ ಆದರೆ ಈಗೀಗ ನಾಗರೀಕ ತರುಣರು ಮುಸ್ಲಿಂ ಸಂಪ್ರದಾಯವನ್ನು ನಾವೇಕೆ ಅನುಸರಿಸ ಬೇಕು ಎಂದು ಧಿಕ್ಕರಿಸುತ್ತಿದ್ದಾರೆ.

ಆದರೂ ಈ ಸಂಪ್ರದಾಯದ ಅವಶೇಷ ಎನ್ನುವಂತೆ – ಒಂದು ಬಟ್ಟಲು ಅಡಕೆಯ ಮೇಲೆ ಒಂದು ವೀಳೆಯದ ಎಲೆ ಇಟ್ಟು, ಅದರ ಮೇಲೆ ಪುರುಷ ಜನನಾಂಗದ ತುದಿ ಚರ್ಮವನ್ನು ಇರಿಸಿ, ಅದರ ಮೇಲೊಂದು ಅಡಕೆಯ ಚೂರನ್ನು ಇಟ್ಟು ಜಜ್ಜುವ ಸಾಂಕೇತಿಕ ಕ್ರಿಯೆಯ ಮೂಲಕ ಅದನ್ನು ಆಚರಿಸುತ್ತಾರೆ.

ಮೊಲದ ಓಟ :

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಮಂಚಲದೊರೆಯ ಬಳಿ ಇರುವ ವೀರಮುಚ್ಚಿಗನಹಳ್ಳಿಯ 'ಕಂಬದ ರಂಗ'ನ (ನರಸಿಂಹಸ್ವಾಮಿ) ಜಾತ್ರೆಯಲ್ಲಿ ಒಂದು ವಿಚಿತ್ರ ಆಚರಣೆ ನಡೆಯುತ್ತದೆ. ಅಲ್ಲಿಯ ನಾಯಕ ಜನಾಂಗ (ಇಲ್ಲಿ 'ಮುಚ್ಚಲೋರು' ಎಂಬ ಬೆಡಗಿನ ಜನಗಳೇ ಹೆಚ್ಚಾಗಿದ್ದಾರೆ) ಒಂದು ಮೊಲವನ್ನು ಹಿಡಿದು ತಂದು ಅದರ ಕಂತ್ತಿಗೆಗೆ ಒಂದು ಸಣ್ಣ ಗೆಜ್ಜೆಯನ್ನು ಕಟ್ಟುತ್ತಾರೆ. ಕಂಬದರಂಗನ ತೇರು ಎಳೆಯಲು ಸಿದ್ಧತೆ ಮಾಡಿದ ನಂತರ, ಆ ತೇರಿಗೆ ನೇರವಾಗಿ ಸುಮಾರು ಒಂದು ಫರ್ಲಾಂಗ್ ದೂರ ದಲ್ಲಿ ಈ ಗೆಜ್ಜೆ ಕಟ್ಟಿದ ಮೊಲವನ್ನು ಹಿಡಿದ ವ್ಯಕ್ತಿ ಇರುತ್ತಾನೆ. ಜಾತ್ರೆಗೆ ಬಂದ ಜನ ತೇರಿಗೂ - ಮೊಲ ಹಿಡಿದವನಿಗೂ ಮಧ್ಯೆ ದಾರಿ ಬಿಟ್ಟು ಮೊಲದ ಓಟವನ್ನು ನೋಡಲು ನಿಂತಿರುತ್ತಾರೆ. ಮೊಲ ಹಿಡಿದ ವ್ಯಕ್ತಿ ಅದನ್ನು ಬಿಡುತ್ತಿದ್ದಂತೆಯೇ ಅದು ಗಾಬರಿಯಿಂದ ಫೇರಿ ಕೀಳುತ್ತಾ, ರಥದತ್ತ ಓಡತೊಡಗುತ್ತದೆ, ಜನ ಕೇಕೆಹಾಕಿ ಹಂಚ್ಚಿದ್ದು ಕುಣಿಯುತ್ತಾರೆ. ಆ ಮೊಲ ಜನಗಳಿಂದ ತಪ್ಪಿಸಿಕೊಂಡು ಕಾಡಿಗೆ ಓಡು ತ್ತದೆ, ನಂತರ ತೇರು ಎಳೆಯುತ್ತಾರೆ.

ಮತ್ತೆ ಎಂದಾದರೂ ಬೇಟೆಯಾಡುವಾಗ ಆ ಗೆಜ್ಜೆ ಕಟ್ಟಿದ ಮೊಲ ಬಲೆಯಲ್ಲಿ ಸಿಕ್ಕರೆ ಕೊಲ್ಲುವುದಿಲ್ಲ. ಅದನ್ನು 'ದೇವರ ಪ್ರಾಣಿ' ಎಂಬ ಗೌರವದಿಂದ ಜೀವಂತ ವಾಗಿ ಬಿಟ್ಟುಬಿಡುವ ಈ ಸಂಪ್ರದಾಯ ಬೇಟೆಯಲ್ಲಿ ತೋರಬೇಕಾದ ದಯಾ - ಮಾನ ವೀಯತೆ - ಪಾವಿತ್ರ್ಯಗಳ ಅವಶ್ಯಕತೆಯನ್ನು ಎತ್ತಿ ಹಿಡಿಯುವಂತಿದೆ.

2. ಊರು ನಾಯಕರು :

ಈ ಜನಾಂಗ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿಯಲ್ಲಿ, ತುಮಕೂರು ಜಿಲ್ಲೆಯ ಪೂರ್ವ ಭಾಗದ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಇದ್ದಾರೆ. (ಗೊಲ್ಲರಲ್ಲಿ ಕೂಡ ಊರುಗೊಲ್ಲರು ಎಂಬುದೊಂದು ಪಂಗಡವಿದೆ. ಇವರು ಹಿಂದೆ ರಾಜನ ಖಜಾನೆಯ ಕಾವಲುಗಾರರಾಗಿ

ಕೆಲಸ ಮಾಡುತ್ತಿದ್ದರು. ಬಿಜಾಪುರ ಜಿಲ್ಲೆಯಲ್ಲಿ ಇಂದಿಗೂ 'ಗೊಲ್ಲರ್' ಎಂಬ ಶಬ್ದ ಉಳಿದುಕೊಂಡು ಬಂದಿರುವುದನ್ನು ಕಾಣಬಹುದು).

ಮ್ಯಾಸನಾಯಕರಿಗೆ ಸಹಜಕಾಯಕವಾದ ಯುದ್ಧಕ್ಕೆ ಅಂಜಿ ಮನೆಗಳಲ್ಲಿ ಉಳಿದ ಈ ಜನಗಳನ್ನು ಕುಲಾಚಾರದ ಕಟ್ಟಿನಿಂದ ಹೊರಗಿಟ್ಟು, ಹಟ್ಟಿಗಳಿಂದ ಇವರನ್ನು ಉಚ್ಚಾಟನೆ ಮಾಡಿದ್ದರಿಂದ, ಅನಿವಾರ್ಯವಾಗಿ ನಾಗರೀಕ ಜನಗಳ ಮಧ್ಯೆ ಬಂದು ಬದುಕಬೇಕಾಗಿದ್ದರಿಂದ ಇವರನ್ನು 'ಊರು ನಾಯಕರು' ಎಂದು ಕರೆಯಲಾಯಿತೆಂದು ಹಿರಿಯರೊಬ್ಬರು ಹೇಳುತ್ತಾರೆ.

ಇನ್ನೊಂದು ಹೇಳಿಕೆಯ ಪ್ರಕಾರ - ಮ್ಯಾಸಬೇಡರಿಗೆ ನಿಷಿದ್ಧವಾದ ಕೋಳಿ, ಹಂದಿ ಸೇವನೆ ಮಾಡಿದ್ದರಿಂದ ಇವರನ್ನು ಜಾತಿಯಿಂದ ಹೊರಗೆ ಹಾಕಲಾಯಿತು ಎನ್ನುತ್ತಾರೆ.

ಅದೇನೆ ಇರಲಿ - ಈ ಜನ ಊರುಗಳಲ್ಲಿದ್ದರೂ ಹೇಳಿಕೊಳ್ಳುವಂತಹ ಹೆಚ್ಚಿನ ನಾಗರೀಕತೆಯ ಲಕ್ಷಣಗಳೇನೂ ಇವರಲ್ಲಿ ಕಾಣುವುದಿಲ್ಲ. ಆದರೆ ನಾಗರೀಕ ಜನಾಂಗದ ರೀತಿ - ನೀತಿಗಳನ್ನು ಅನುಕರಿಸುವ ಈ ಜನಗಳ ಮದುವೆ ಸಂಪ್ರದಾಯದಲ್ಲಿ ಶಿಷ್ಟ ಜನಾಂಗದ ಆಚರಣೆಗಳನ್ನು ಕಾಣಬಹುದು. ಮ್ಯಾಸನಾಯಕರು ಇವರೊಂದಿಗೆ ವೈವಾಹಿಕ ಸಂಬಂಧ ಬೆಳೆಸುವುದಿಲ್ಲ (ಆದರೆ ಇತ್ತೀಚೆಗೆ ಯುವಕರು ಈ ಕಟ್ಟಳೆಗಳನ್ನು ಮುರಿಯುತ್ತಿದ್ದಾರೆ), ಆದರೆ ಊರು ನಾಯಕರು - ಮ್ಯಾಸನಾಯಕರೊಂದಿಗೆ ಸಂಬಂಧಗಳನ್ನು ಬೆಳೆಸಲು ಕಾತುರರಾಗಿದ್ದಾರೆ.

ಈ ಜನಾಂಗದ ಆರಾಧ್ಯ ದೈವ –ಮಲೆಮಹದೇಶ್ವರ.

ಇವರಲ್ಲಿ ಕೂಡ್ಲಿಗಿ ಭಾಗದ ಕೆಲವು ವರ್ಗದವರು ವಿಜಯನಗರದ ಅಚ್ಯುತದೇವ ರಾಯನ ಕಾಲದಲ್ಲಿ ರಾಜರ ಭೋಗದ ವಸ್ತುಗಳಾಗಿದ್ದರು. ವಿಜಯನಗರ ಪತನಾನಂತರ ಬೀದಿಗೆ ಬಿದ್ದ ಈ ಜನ ಕೂಡ್ಲಿಗಿಯಲ್ಲಿ ದಟ್ಟವಾಗಿ ನೆಲಸಿದ್ದಾರೆ, ನಾಟಕ ಕಲೆಯಿಂದ ಉದರಪೋಷಣೆ ಮಾಡುತ್ತಿದ್ದಾರೆ.

ಇನ್ನೂ ಕೆಳಹಂತದಲ್ಲಿರುವ ಜನ – ಹಳ್ಳಿಗಳಲ್ಲಿ ಉರುಮೆ ಬಾರಿಸುತ್ತಾ, ಹೊತ್ತಾಡೋಮಾರಮ್ಮನನ್ನು (ಈಕೆಯನ್ನು ಗಾಳಿ ಮಾರಮ್ಮ, ಉರಿ ಮಾರಮ್ಮ ಎಂದೂ ಕರೆಯುತ್ತಾರೆ) ಹೊತ್ತು, ಮೈಗೆ ಚಾಟಿಯಿಂದ ರಕ್ತ ಬರುವಂತೆ ಹೊಡೆದುಕೊಂಡು, ಜನಗಳಿಂದ ಕಾಳು-ಕಡಿ ಪಡೆದು ಜೀವನ ಮಾಡುವ ಚಿಂತಾಜನಕ ಪರಿಸ್ಥಿತಿಯಲ್ಲಿದ್ದಾರೆ.

3. ಪಾಳೆಯಗಾರರು :

ಸಮಾಜದ ಅತ್ಯಂತ ಉನ್ನತ ಸ್ಥಾನದಲ್ಲಿರುವ ಜನಾಂಗ ಇದು. ಇವರು ಮೂಲತಃ ವ್ಯಾಸಬೇಡರಾಗಿದ್ದರೂ ತಾವು ಪಡೆದ ಸ್ಥಾನಮಾನದ ದೆಸೆಯಿಂದ 'ಪಾಳಯಗಾರರು' ಎನಿಸಿಕೊಂಡರು. ಇವರನ್ನು ಇಂದೂ 'ದೊರೆಗಳು' ಎಂದೇ ಕರೆಯುತ್ತಾರೆ.

"ಭಾರತಕ್ಕೆ ಧಾಳಿಯಿಟ್ಟ ಮುಸ್ಲಿಂರಿಂದ ತಮ್ಮ ಜನಗಳ ಮಾನ - ಪ್ರಾಣ - ಧರ್ಮವನ್ನು ಕಾಪಾಡಿಕೊಳ್ಳಲು ಪಾಳಯಗಳನ್ನು ಕಟ್ಟಿ ತಿರುಗುತ್ತಿದ್ದವರೇ 'ಪಾಳಯಗಾರರು' ಎನಿಸಿಕೊಂಡರು"[23] ಎಂಬುದು ಹರತಿ ವೀರನಾಯಕರ ವ್ಯಾಖ್ಯಾನ.

"ಬಹಳಷ್ಟು ಮಂದಿ ಪಾಳಯಗಾರರ ಉದಯವಾದದ್ದು ವಿಜಯನಗರ ಅರಸರ ಕಾಲದಲ್ಲಿ ಮಾತ್ರ. ವಿಜಯನಗರದ ಅರಸರು ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿ, ಅದಕ್ಕೆ ಸೇರಿದ ನಾನಾಭಾಗಗಳ ಮೇಲೆ ತಾವೇ ನೇರವಾಗಿ ಆಳ್ವಿಕೆ ನಡೆಸುವುದು ಕಷ್ಟವೆಂದು ಕಂಡುಬಂದಾಗ, ಆಯಾ ಪ್ರದೇಶಗಳ ಆಡಳಿತದ ಉಸ್ತುವಾರಿ ನೋಡಿಕೊಳ್ಳಲು, ಕಂದಾಯ ವಸೂಲಿ ಮಾಡಲು, ಇವೇ ಮೊದಲಾದ ಉದ್ದೇಶಗಳಿಗಾಗಿ ಕೆಲವು ಬಲಿಷ್ಠ ಹಾಗೂ ಪ್ರಭಾವವುಳ್ಳ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ಈ ಸಾಮಂತ ಅಧಿಕಾರಿಗಳೇ ಕ್ರಮೇಣ ಪಾಳೆಯಗಾರರೆನಿಸಿಕೊಂಡರು"[24] ಎಂಬ ಲಕ್ಷ್ಮಣ್ ತೆಲಗಾವಿಯವರ ವ್ಯಾಖ್ಯಾನ ಅತ್ಯಂತ ಸಮರ್ಪಕವಾಗಿದೆ.

ವಿಜಯನಗರ ಪತನಾನಂತರ ತಮ್ಮನ್ನು ಸ್ವತಂತ್ರರೆಂದು ಘೋಷಿಸಿಕೊಂಡ ಇವರು ತಮ್ಮದೇ ಪಾಳಯಪಟ್ಟುಗಳನ್ನು ಕಟ್ಟಿ ಮೆರೆದರು. ಇವರಲ್ಲಿ ಚಿತ್ರದುರ್ಗದ ಪಾಳಯಗಾರರು ಪ್ರಮುಖರು. ಚಿತ್ರದುರ್ಗದ ಪಾಳೆಯಗಾರರ ಖಾಸಾ ವಂಶಸ್ಥರಾದ ಚಳ್ಳಕೆರೆಯ ಶ್ರೀ ಪಿ. ಆರ್. ವೀರಭದ್ರನಾಯಕರ ಮನೆತನದವರು, ಚಳ್ಳಕೆರೆಯ ಗ್ರಾಮದೇವತೆಯಾದ 'ಚಳಕೇರಮ್ಮ'ನಿಗೆ, ಆಕೆಯ ಜಾತ್ರೆಯಲ್ಲಿ 'ತಾಳಿಭಾಗ್ಯ' ಕೊಡುವ ವಿಶಿಷ್ಟ ಸಂಪ್ರದಾಯವೊಂದು ಇದೆ.

ಉತ್ಸವದ ಮೊದಲ ದಿನ ಬ್ರಾಹ್ಮಣಳಾದ ದೇವತೆ ತನಗೆ ಮೋಸ ಮಾಡಿ ಮದುವೆಯಾದ ಅಸ್ಪೃಶ್ಯ ಗಂಡನನ್ನು ಕೋಣನ ರೂಪದಲ್ಲಿ ಬಲಿ ತೆಗೆದುಕೊಳ್ಳುತ್ತಾಳೆ. ಕಳೆದ ವರ್ಷದ ಜಾತ್ರೆಯಲ್ಲಿ ಹಾಕಿದ್ದ ಮಾಂಗಲ್ಯವನ್ನು ತೆಗೆದು ಆಕೆಯನ್ನು ವಿಧವೆ ಮಾಡುತ್ತಾರೆ. ಎರಡನೆ ದಿನ - ಕಡಿದ ಕೋಣದಿಂದ ತೆಗೆದ ಕೊಬ್ಬಿನಿಂದ ದೇವಿಯ ಎದುರಿನ 'ದೃಷ್ಟಿಕಂಬ'ದ ಬಳಿ ದೀಪ ಉರಿಸುತ್ತಾರೆ. ಇದರಿಂದ ಆಕೆಗೆ ತನ್ನ ಗಂಡನನ್ನು ಶಿಕ್ಷಿಸಿದ ಸಂತೃಪ್ತಿ ಸಿಗುತ್ತದೆ ಎಂಬ ನಂಬಿಕೆ ಇದೆ. ಅಂದು ಆಕೆ ಗಂಡನನ್ನು ಕಳೆದುಕೊಂಡ ವಿಧವೆಯಂತಿರುತ್ತಾಳೆ. ಮತ್ತೆ ಮೂರನೆಯ ದಿನ - ಆಕೆಗೆ ತಾಳಿಯ

ಧಾರಣೆ ಆಗುತ್ತದೆ, ಸುಮಂಗಲಿಯಾಗುತ್ತಾಳೆ. ಈ ತಾಳಿಯನ್ನು ಇವರು ಮನೆ ದೇವತೆ ಮತ್ತು ಮನೆಯ ಹೆಣ್ಣು ಮಗಳು ಎಂಬ ಭಾವನೆಯಿಂದ ಕೊಡುತ್ತಾರೆ.

ಪಾಳಯಗಾರರ ಮದುವೆಯ ರೀತಿ - ರಿವಾಜುಗಳು ಮ್ಯಾಸನಾಯಕರಿಗಿಂತ ಭಿನ್ನವಾಗಿದೆ. ವಧು - ವರರ ಸುತ್ತ ಅಗ್ನಿಕುಂಡ ರಚನೆಯ ಮಾದರಿಯಲ್ಲಿ ಇಟ್ಟಿಗೆ ಗಳನ್ನು ಇಡುತ್ತಾರೆ, ಇದನ್ನೇ ಇವರು 'ಹಸೆಕಟ್ಟೆ' ಎನ್ನುವುದು. ಈ ಹಸೆಕಟ್ಟೆಗೆ ಹಾಕಿರುವ ಚಪ್ಪರದಲ್ಲಿ 'ಹತ್ತಿ - ಆಲ - ಅರಳಿ - ಮಾವು'ಗಳ ಕೊನೆಗಳನ್ನು ಬಳಸಿರು ತ್ತಾರೆ. ಈ ಹಸೆಕಟ್ಟೆ ಏರುವ ಮುನ್ನವೇ ವರನಿಗೆ 'ಯಜ್ಞೋಪವೀತ' ಧಾರಣೆ ಯಾಗುತ್ತದೆ ; ಇದನ್ನು 'ಮುಂಜಿ ಅಥವಾ ನಾಂದಿ' ಎನ್ನುತ್ತಾರೆ.

ಬ್ರಾಹ್ಮಣರಲ್ಲಿ ಇರುವಂತೆ ಇವರಿಗೂ 'ಋಷಿಗೋತ್ರ'ಗಳಿದ್ದು, ಹೆಚ್ಚು ಕಡಿಮೆ ಬ್ರಾಹ್ಮಣರ ರೀತಿ - ನೀತಿಗಳಿಗೆ ಸಮಾನವಾದ ನಡವಳಿಕೆಗಳನ್ನು ತೋರುತ್ತಾರೆ.

ಇವರ ವೈವಾಹಿಕ ಸಂಬಂಧ ಪಾಳಯಗಾರರೊಂದಿಗೆ ಮಾತ್ರ ಸೀಮಿತವಾಗಿದೆ. ಇವರಿಗೆ ದೊರೆತ ಸಾಮಾಜಿಕ ಸ್ಥಾನಮಾನಗಳೇ ಹೇಗೆ 'ಜಾತಿ'ಯಾಗಿ ಪರಿವರ್ತಿತವಾಗು ತ್ತವೆ ಎಂಬುದಕ್ಕೆ ಇದು ಸೊಗಸಾದ ಉದಾಹರಣೆ.

ಶವ ಸಂಸ್ಕಾರದ ಸಂಪ್ರದಾಯಗಳಲ್ಲಿಯೂ ಇವರಲ್ಲಿ ಭಿನ್ನತೆಯನ್ನು ಗುರುತಿಸ ಬಹುದು. ಮ್ಯಾಸನಾಯಕರು ಶವವನ್ನು 'ಮಣ್ಣು' ಮಾಡಿದರೆ, ಇವರು 'ದಹನ' ಮಾಡುತ್ತಾರೆ. ಶವವನ್ನು ಬಿದಿರು ಗಳದ 'ಚಟ್ಟ'ದಲ್ಲಿ ಮಾತ್ರ ಸಾಗಿಸುತ್ತಾರೆ, ಬಿದಿರು ಗಳ ಸಿಗದಿದ್ದಾಗ ಅನಿವಾರ್ಯವಾಗಿ 'ಹಾಲುಕಂಬ' (ಕಳ್ಳಿಬಡಿಗೆ) ಬಳಸುತ್ತಾರೆ. ಶವವನ್ನು ಚಟ್ಟದ ಸಮೇತ ದಹನಕ್ಕಾಗಿ ಒಟ್ಟಿದ ಕಟ್ಟಿಗೆಗಳ ಮೇಲೆ ಇಟ್ಟು, ಚಟ್ಟದ ಬಲಭಾಗದಲ್ಲಿರುವ ಚಟ್ಟದ ಗಳವನ್ನು ಕಿತ್ತು ಪಕ್ಕಕ್ಕೆ ಎಸೆಯುತ್ತಾರೆ. ಈ ಬಿದಿರು ಗಳವನ್ನು ಯಾರಾದರು ರೈತರು ಬಿತ್ತನೆಯ 'ಅಕ್ಕಡಿ ಸೆಡ್ಡೆ'ಗಾಗಿ ತೆಗೆದುಕೊಂಡು ಹೋಗುತ್ತಾರೆ. ಇಂಥ ಬಿದಿರು 'ಗಳ' ಸಿಗುವುದು ಅದೃಷ್ಟ, ಪುಣ್ಯ ಎಂಬ ನಂಬಿಕೆ ಇದೆ. ಮೂರು ದಿನಗಳ ನಂತರ 'ದಿವಸ' (ಶ್ರಾದ್ಧ)ಕ್ಕೆ ಬಂದಾಗ ಈ ಬಿದಿರು ಗಳ ಸಿಕ್ಕರೇ ಮನೆಯವರೇ ತೆಗೆದುಕೊಂಡು ಹೋಗಿ ಬಿತ್ತನೆಯ 'ಅಕ್ಕಡಿ ಸೆಡ್ಡೆ'ಯಾಗಿ ಬಳಸಿಕೊಳ್ಳುತ್ತಾರೆ, ಇದನ್ನು ಬಳಸುವುದರಿಂದ ಬೆಳೆ 'ಹುಲುಸು' ಆಗುತ್ತದೆ ಎಂಬ ನಂಬಿಕೆ ಇದೆ.

ಶ್ರಾದ್ಧ ಮಾಡುವ ಮೂರನೆ ದಿನ ಸತ್ತವ್ಯಕ್ತಿಗೆ ಇಷ್ಟವಾದಂತಹ ಎಲ್ಲ ರೀತಿಯ ಆಹಾರಗಳನ್ನು ಮಾಡಿರುತ್ತಾರೆ. ಅವನಿಗೆ ಮಾಂಸ, ಹೆಂಡ ಇಷ್ಟವಾಗಿದ್ದಲ್ಲಿ ಎಲ್ಲ ವನ್ನೂ ತಂದು ಅವನನ್ನು ಸುಟ್ಟ ಜಾಗದಲ್ಲಿ ಮಣ್ಣುಗುಡ್ಡೆ ಮಾಡಿ ಅದರ ಮೇಲೆ ಇಡುತ್ತಾರೆ. ಕಾಗೆ ಬಂದು ಈ ವಸ್ತುಗಳನ್ನು ಮುಟ್ಟಿದಾಗ ಅವನಿಗೆ ಮುಕ್ತಿ ದೊರೆ

ಯಿತು ಎಂದು ನಂಬುತ್ತಾರೆ, ಹಾಗೆ ಬಂದು ಮುಟ್ಟದಿದ್ದಲ್ಲಿ ಎಲ್ಲ ವಸ್ತುಗಳನ್ನು ಅವನ ಶವದ ಬೂದಿಯ ಜೊತೆಗೆ 'ಗಂಗೆಪಾಲು' ಮಾಡುತ್ತಾರೆ.

ನಾಯಕ ಜನಾಂಗದ ಆಚಾರ - ವಿಚಾರಗಳ ಪಕ್ಷಿನೋಟವನ್ನು ಕೊಡುವ ಒಂದು ಕಿರು ಪ್ರಯತ್ನ ಇದು.

ಅಡಿ ಟಿಪ್ಪಣಿಗಳು

1. E. Thurston : Castes and tribes of Southern India, Vol I A & B, COSMO PUBLICATIONS, DELHI, 1975.
2. L. K. Anantha Krishna Iyer & H. V. Nanjundiah : The Mysore Tribes & Castes, Mysore University, Mysore.
3. ಡಾ॥ ತೀ.ನಂ. ಶಂಕರನಾರಾಯಣ : ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, 1982.
4. ಡಾ॥ ಕಾಳೇಗೌಡ ನಾಗವಾರ : ಕಾಡುಗೊಲ್ಲರ ಹಟ್ಟಿ – ಒಂದು ಅಧ್ಯಾಯ. ಅಪ್ರಕಟಿತ ಪಿ.ಎಚ್.ಡಿ. ಪ್ರಬಂಧ.
5. ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್ : 1967. ಪುಟ 60.
6. ಅದೇ, ಪುಟ 53.
7. ರಾಜನ ರಾಜಣ್ಣ : ನಾಯಕ ಜನಾಂಗದ ಇತಿಹಾಸ, ಚಳ್ಳಕೆರೆ, 1982, ಪುಟ 8.
8. ಹೆಚ್.ವಿ. ವೀರನಾಯಕ : ಕ್ಷಾತ್ರಾಂಶ ಪ್ರಬೋಧ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
9. ಈ ಜನಪದ ಕತೆಯನ್ನು 'ಇಟ್ಟಕ್ಕಿ ಗೊಲ್ಲರು' ಎಂದು ಕರೆಯಲ್ಪಡುವ ಚಳ್ಳಕೆರೆ ತಾಲ್ಲೂಕಿನ ಚೌಳೂರು ಗ್ರಾಮದ ಈರಣ್ಣನವರು ಹೇಳಿದ್ದಾರೆ.
10. ಜೀವಂತವಾದ ಗೊಂಪೆಮಣಕ (ಬಂಜೆಯಾದ ಆಕಳು)ದ ಚರ್ಮವನ್ನು ಸುಲಿದು ತಯಾರಿಸುವ ವಾದ್ಯ, ಇದರ ವಾದನಕ್ಕೆ ಅದೇ ಚರ್ಮದಿಂದ 'ಕೈ'ಗಳ ಆಕಾರದಲ್ಲಿ ಮಾಡಿರುವ ಚರ್ಮದ ಕೈಗಳನ್ನೇ ಬಳಸಿ ಬಡಿಯುತ್ತಾರೆ.
11. ಈ ಬಗ್ಗೆ ಮಾಹಿತಿ ಒದಗಿಸಿದವರು ಮತ್ಸಮುದ್ರ ಗ್ರಾಮದ 90 ವರ್ಷದ ರಂಗಜ್ಜ.
12. ಈ ಕತೆಯನ್ನು ಹೇಳಿದವರು – ಚಳ್ಳಕೆರೆ ಟೌನ್ ಕಾಟಪ್ಪನಹಟ್ಟಿ ವಾಸಿ 75 ವರ್ಷದ ಕಲ್ಲೇರ ಗೊಲ್ಲರ ಗಿಡ್ಡಜ್ಜಪ್ಪನವರು.
13. ರಾಜನ ರಾಜಣ್ಣ : ನಾಯಕ ಜನಾಂಗದ ಇತಿಹಾಸ, ಪುಟ 4.

14. ಲಕ್ಷ್ಮಣ್ ತೆಲಗಾವಿ : ಚಂದ್ರವಳ್ಳಿ (ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ), ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ, ಚಿತ್ರದುರ್ಗ, 1976, ಪುಟ 63.

15. ಗುಗ್ಗರಿ ಹಬ್ಬದ ಬಗ್ಗೆ ಮಾಹಿತಿಯನ್ನು ಒದಗಿಸಿದವರು ಚಳ್ಳಕೆರೆಯ ಕಾಟಪ್ಪನ ಹಟ್ಟಿಯಲ್ಲಿ ನೆಲಸಿರುವ ಚಿತ್ರದುರ್ಗದ ಪಾಳೆಯಗಾರರಾದ ಸಿ.ಪಿ. ರಾಮಸ್ವಾಮಿ ನಾಯಕರು.

16. E. Thurston : Castes and Tribes of Southern India, Page 190.

17. ವಾಸೆ ಕೊಯ್ಯುವ ಸಂಪ್ರದಾಯದ ಬಗ್ಗೆ ವಿವರಗಳನ್ನು ತಿಳಿಸಿದವರು ಗೌರಸಮುದ್ರದ ಕೆ.ಎಸ್. ಲಿಂಗಣ್ಣನವರು ಮತ್ತು ಚಳ್ಳಕೆರೆಯ ರಾಜನರಾಜಣ್ಣನವರು.

18. ಎಂ.ಎನ್. ಪ್ರಭಾಕರ : ಚಂದ್ರವಳ್ಳಿ (ನಾಯಕನಹಟ್ಟಿ ಬಖೈರು), ಪುಟ 30.

19. ನಾಯಕನಹಟ್ಟಿ ಪಾಳೆಯಗಾರರ ಸಂತತಿಗೆ ಸೇರಿದ, ಈಗಿನ ನಾಯಕನಹಟ್ಟಿ ದೊರೆ ಎಂದು ಕರೆಯಲ್ಪಡುವ – ದೊರೆ ತಿಪ್ಪೇಸ್ವಾಮಿ ನಾಯಕ ಅವರ ಕಡತಗಳಿಂದ ದೊರೆಯುವ ದಸ್ತಾವೇಜಿನ ವಿವರಗಳನ್ನು ಗಮನಿಸಿದರೆ – ಈಗಾಗಲೇ 'ಚಂದ್ರವಳ್ಳಿ'ಯಲ್ಲಿ ಪ್ರಕಟವಾಗಿರುವ 'ನಾಯಕನಹಟ್ಟಿ ಬಖೈರು' ಹೇಳುವ ಮಾಹಿತಿಗಳಿಗಿಂತ ಭಿನ್ನವಾದ ಮಾಹಿತಿಗಳನ್ನು ಮತ್ತು ಕಾಟೇನಾಯ್ಕನ ಮಲ್ಲಯ್ಯನ ಉಳಿದ ಆರು ಮಂದಿ ಸಹೋದರರ ವಂಶಾವಳಿಯ ವಿವರಗಳನ್ನು ತಿಳಿಸುವುದರೊಂದಿಗೆ ಇಡೀ ಬಖೈರನ್ನು ಪುನರ್ ಪರಿಶೀಲಿಸಬೇಕಾದ ಮಹತ್ವದ ಮಾಹಿತಿಗಳನ್ನು ಈ 'ದಸ್ತಾವೇಜು' ಒದಗಿಸುತ್ತದೆ.

20. ನರಬಲಿ ಕೊಡುವ ಸಂಪ್ರದಾಯದ ಈ ವಿವರವನ್ನು ನಾಯ್ಕನಹಟ್ಟಿ ದೊರೆ ತಿಪ್ಪೇಸ್ವಾಮಿ ನಾಯಕರ ಕಡತದಿಂದ ದೊರೆಯುವ ಮತ್ತೊಂದು 'ದಸ್ತಾವೇಜು' ಹೇಳುತ್ತದೆ.

21–22. ಈ ಸಂಪ್ರದಾಯಗಳ ಬಗ್ಗೆ ತಿಳಿಸಿದವರು – 60 ವರ್ಷದ ನನ್ನಿವಾಳದ ಸಿ. ಡಿ. ಚನ್ನಪ್ಪನವರು.

23. ಹೆಚ್. ವಿ. ವೀರನಾಯಕ : ಕ್ಷಾತ್ರಾಂಶ ಪ್ರಬೋಧ, 1987.

24. ಲಕ್ಷ್ಮಣ್ ತೆಲಗಾವಿ : ಚಂದ್ರವಳ್ಳಿ (ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ) 1976, ಪುಟ 63.

ಜಾನಪದ ಸಾಹಿತ್ಯದಲ್ಲಿ ಬಂಡಾಯದ ಧ್ವನಿ

ಆರ್. ವಿ. ಭಂಡಾರಿ

ಕೇವಲ ಪ್ರಸ್ತುತ ಬದುಕಿನ ಆಡಂಬರದ ವಂಥ್ಯ 'ಮೋಜಿನ' ಹಾಡಾಗಿ ಕಾಣ ಬರುವ ಜಾನಪದರ ಅಂದಿನ ಉಸಿರು, ನಮ್ಮ ನಿರೀಕ್ಷೆಗೂ ಮೀರಿದ ಜೀವನ ಪ್ರೀತಿ, ತಮ್ಮನ್ನು ಮೆಟ್ಟಿ ಅಟ್ಟವೇರುವ ಸ್ಥಾಪಿತ ಹಿತಾಸಕ್ತಿಯ ವಿರುದ್ಧ ಸೂಕ್ಷ್ಮವಾಗಿ ಅಷ್ಟೇ ಪ್ರಬಲವಾಗಿ ಸೂಸಬಲ್ಲ ಬಂಡಾಯದ ಧ್ವನಿಯನ್ನು ಒಡಲಲ್ಲಿರಿಸಿಕೊಂಡಿದೆ. ಅಂಥ ಒಂದೆರಡು ಪ್ರಸಂಗಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

ಹೆಗಡೆ ಜಾತ್ರೆಯ ಶೂಲೆಬೀರನ ಹಬ್ಬ

ಕುಮಟಾ ತಾಲ್ಲೂಕಿನ ಹೆಗಡೆಯ ಜಾತ್ರೆ ಸಡಗರಕ್ಕೆ ಸುತ್ತಮುತ್ತ ಹೆಸರಾಗಿದೆ. ಜಾತ್ರೆ ನಡೆಯುವುದು ಶಾಂತಿಕಾಪರಮೇಶ್ವರಿ ದೇವಾಲಯದಲ್ಲಿ. ತೇರಿಗೆ 15 ದಿನ ಇರುವಾಗಲೇ ಕಲಶದ ಉತ್ಸವ ಶುರುವಾಗುತ್ತದೆ. ದೇವಾಲಯದ ಪೂಜಾರಿಗಳು ಬ್ರಾಹ್ಮಣರಾದರೆ ಕಲಶದ ಪೂಜಾರಿಗಳು ಗುನಗರು.

ಈ ಕಲಶ ದೇವರುಗಳಲ್ಲಿ ಶೂದ್ರ ಜನಾಂಗದವರು, ಯುದ್ಧವೀರರೂ ಊರ ರಕ್ಷಕರೂ ಆಗಿದ್ದರು. ಸಾಮಾಜಿಕವಾಗಿ ಮಹತ್ವದ ಸ್ಥಾನಮಾನ ಪಡೆದವರೇ ಆಗಿದ್ದರು. ಪ್ರಸಿದ್ಧ ಜಾನಪದ ತಜ್ಞರಾದ ಡಾ. ಎಲ್. ಆರ್. ಹೆಗಡೆಯವರು ಹೆಗಡೆ ಜಾತ್ರೆಯ ಕಲಶಗಳ ಕುರಿತು ತಮ್ಮ ಜನಪದ ಜೀವನ ಮತ್ತು ಕಲೆ ಎಂಬ ಪುಸ್ತಕ (ಪು. 121)ದಲ್ಲಿ ಹೀಗೆ ಬರೆಯುತ್ತಾರೆ. "ಒಂದು ಕಲಶದ ಹೆಸರು 'ಹೀರೆಬೀರು'

ಬೀರು ದೇವಾಲಯದ ದೇವತೆಯ ಕಲಶ. ಹಿರಿಯವೀರ, ವೀರರಲ್ಲಿ ಹಿರಿಯ ತಲೆ ನಾಯಕ. ಮತ್ತೊಂದು ಕಲಶದ ಹೆಸರು ಶೂಲಬೀರು ಅಥವಾ ಶೂರಭದ್ರ. ಶೂಲವನ್ನೇ ತಿವಿದು ಯುದ್ಧದಲ್ಲಿ ಪರಾಕ್ರಮದಿಂದ ಹೋರಾಡಿ ಮಡಿದ ವೀರನಿರಬಹುದು. ಇನ್ನೊಬ್ಬ ಭಂಡಾರ ಕಾಯುವ 'ಭಂಡಾರ ಬೀರು' ಮತ್ತೊಬ್ಬ 'ಭಾಗ್ಯಬೀರು' ಕೋಟೆ ಕೊತ್ತಳ ಅಥವಾ ಅರಮನೆ ಕಾಯುವ ಕರ್ತವ್ಯದಲ್ಲಿ ಮಡಿದು ದೇವತ್ವಕ್ಕೇರಿದ ಶೂರ ಸೈನಿಕ. ಅಮ್ಮನವರ ಕಲಶವು ಇನ್ನೊಂದು ಕಲಶ. ಈ ಐದು ಕಲಶಗಳನ್ನು ಹೊರುವವರು ಈಗ ಜೈನರೇ ಆದರೂ ಹಿಂದೆ ಗ್ರಾಮೊಕ್ಕಲು ಅದನ್ನು ಹೊರುತ್ತಿದ್ದರೆಂದು ಹೇಳುತ್ತಾರೆ. ಯಾಕೆಂದರೆ ವರ್ಷದಲ್ಲಿ ಇಂದಿಗೂ ನಾಲ್ಕು ಪೂಜೆಗಳನ್ನು ಗ್ರಾಮೊಕ್ಕಲ ಮುಖ್ಯ ಜನರಾದ ಪಟಗಾರರು ಮಾಡಬೇಕಾಗುತ್ತದೆ. ಪಟಗಾರ ಎಂಬುದು ನಾಯ್ಕ ಎಂಬ ಸೈನ್ಯದ ಹುದ್ದೆಯವರಂತೆ."

ಈ ಕಲಶಗಳಲ್ಲಿ 'ಸೂಲೆಬೀರು' ತುಂಬ ಪ್ರತಾಪಿ ಕಲಶ ಎಂದು ಮೇಲಿನ ಅವತರಣಿಕೆಯಿಂದಲೇ ಗೊತ್ತಾಗುತ್ತದೆ.

ಸೂಲೆಬೀರ ಊರ ಸಂಚಾರ ಮುಗಿಸಿ ಅಮ್ಮನವರ ದೇವಾಲಯಕ್ಕೆ ಬರುತ್ತಾನೆ. ಪೂಜೆ ನಡೆಯುವ ಸಂದರ್ಭದಲ್ಲಿ ರೋಷಾವೇಶ ಉಕ್ಕುತ್ತದೆ. ಇದನ್ನು ನೋಡಲು ಜನಜಂಗುಳಿ ಸೇರಿರುತ್ತದೆ. ಕೂಡಲೆ ತನ್ನ ಮೊಣಕಾಲಿನಿಂದ ಗಂಟೆ ಮಂಟಪ ಹತ್ತುತ್ತಾನೆ. ಗಂಟೆ ಮಂಟಪವನ್ನು ಇತರ ಕಲಶಗಳು ಹತ್ತುವುದಿಲ್ಲ. ದಡದಡನೆ ಶಿಲೆ ಮೆಟ್ಟಲುಗಳನ್ನು ಹತ್ತಿ ಮುಂದೆನುಗ್ಗಿ ಅಮ್ಮನ ಬಳಿಗೆ ಹೋಗಲು ಧಾವಿಸುತ್ತಾನೆ. ಕೂಡಲೆ ಬಾಗಿಲು ಹಾಕುತ್ತಾರೆ. ತಾನು ಕೈಯಲ್ಲಿ ಹಿಡಿದುಕೊಂಡ ಗಂಟೆಯಿಂದ (ಕಲಶ ಹೊತ್ತವರು ಕೈಯಲ್ಲಿ ಸದಾ ಗಂಟೆ ತೂಗುತ್ತಲೇ ಇರುತ್ತಾರೆ) ಕದದ ಬಾಗಿಲನ್ನು ಜಪ್ಪುತ್ತಾನೆ. ಬಾಗಿಲು ತೆಗೆಯುವುದಿಲ್ಲ. ಅವನ ಹೋರಾಟ ವ್ಯರ್ಥವಾಗುತ್ತದೆ, ತಿರುಗಿ ಹಿಂದೆ ಬರುತ್ತಾನೆ. ನಂತರ ಪ್ರಸಾದ ಕೊಡಲಾಗುತ್ತದೆ.

ಇದೊಂದು ಧಾರ್ಮಿಕ ವಿಧಿ. ಸದಾ ನಡೆಯಬೇಕಾದದು. ಇದರ ಇಂಗಿತವನ್ನು ಊಹಿಸುವುದು ಕಷ್ಟವಲ್ಲ. 'ಅಮ್ಮ' ದ್ರಾವಿಡ ದೇವತೆ. ಈ ಅಮ್ಮ ಮಾರಿಕಾಮ್ಮನೂ ಹೌದು. ಈ ಆದಿವಾಸಿಗಳ ದೇವರು ಆರ್ಯ ಸಂಸ್ಕೃತಿಯಲ್ಲಿ ಸಂಸ್ಕೃತಿಗೊಳ್ಳುತ್ತದೆ. ಮಾರಿಯಮ್ಮ ಮಾರಿಕಾಂಬ (ಇಂಡಿಯನ್ |ಕ್ರಿಸ್ತರ ಪ್ರಜ್ಞೆಯಲ್ಲಿ ಮೇರಿಯಮ್ಮ ?) 'ದುರ್ಗ' ದುರ್ಗಾಂಬಿಕಾ 'ರಣಚಂಡಿ' ಶಾಂತಿಕಾಪರಮೇಶ್ವರಿ ಎಂದೆಲ್ಲ ಪರಿವರ್ತಿತವಾಗಿದೆ. ಹೀಗೆ ಪರಿವರ್ತನೆಗೊಂಡ ಈ ದೇವತೆ ಬ್ರಾಹ್ಮಣರ ಕೈಸೇರಿತು. ಆದರೆ ಈ ಸಂಸ್ಕೃತೀಕರಣವನ್ನು ಅಂದಿನ ಜನಪದ ಸಮ್ಮನೆ ಒಪ್ಪಲಿಲ್ಲ. ಅದಕ್ಕೆ ಬಲವಾದ

ಪ್ರತಿರೋಧ ಒಡ್ಡಿರಬೇಕು. ಈ ಪ್ರತಿರೋಧ ಕಾಲಕ್ರಮದಲ್ಲಿ ತಣ್ಣಗಾಯಿತು. ಆದರೆ ಅದು ಧಾರ್ಮಿಕ ವಿಧಿಯಾಗಿ ಪುರಾಣವಾಯಿತು.

ಅದೇ ಜಾತ್ರೆಯ ಸಂದರ್ಭದಲ್ಲಿ 'ಸಾರಂಗಬೀರು' ಎಂಬ ವೀರಾವೇಶದ ಕಲಶ ಒಂದಿದೆ. ಅದಕ್ಕೆ 'ಗಡಿಬಂಟ' ಎಂಬ ಹೆಸರೂ ಉಂಟು. ಇದನ್ನು ಹೊರುವವರು ಮಕರಿ ಜಾತಿಯವರು ಅವರು ಹರಿಜನರು. ಇದು ಹಿಂದೆ ಹೊಲೆಮಾದಿಗರು ಹೊರುತ್ತಿದ್ದರೆಂದು ಡಾ. ಎಲ್. ಆರ್. ಹೆಗಡೆಯವರು ಹೇಳುತ್ತಾರೆ. ಈ ಕಲಶ ಬಂದ ಹೊರತು ತೇರು ಎಳೆಯುವುದಿಲ್ಲ. ಇವೆಲ್ಲಾ ಆರು ಕಲಶಗಳಿವೆ. ಇವರು ಬಂದವರು ದೇವಾಲಯದ ಒಳನುಗ್ಗಲು ಪ್ರಯತ್ನಿಸುತ್ತಾರೆ. ಆದರೆ ಇವರನ್ನು ಹೊರಬಾಗಿಲಲ್ಲೇ ತಡೆಯುತ್ತಾರೆ. ಅಂದರೆ ಇವರು ಅಸ್ಪೃಶ್ಯ ದೇವರಾಗಿದ್ದರಿಂದ ಉಳಿದ ಕಲಶಗಳು ಹೋಗುವಷ್ಟು ಇವರಿಗೆ ಅವಕಾಶವಿಲ್ಲ. ಇದು ನಮ್ಮ ಜಾತಿಯ ತಾರತಮ್ಯತೆಯನ್ನು ಹೇಳುತ್ತದೆ. ಈ ದಲಿತ ದೇವರು ಬ್ರಾಹ್ಮಣ ಶೂದ್ರರಿಬ್ಬರನ್ನೂ ಎದುರಿಸಬೇಕಾಗುತ್ತದೆ. ಆದರೆ ಈ ಇಬ್ಬಣವನ್ನು ಎದುರಿಸುವ ರೋಷ ಅವರಿಗಿದೆ. ಹರಿಜನರ ಪ್ರಶ್ನೆ ಬಂದಾಗ ಈ ಬ್ರಾಹ್ಮಣ-ಶೂದ್ರ ದೇವತೆಗಳೂ ಒಂದಾಗುತ್ತವೆ. ಆದರೆ ದಲಿತರು ಆದಿವಾಸಿಗಳು ಅವರು ಕಾಲಕ್ರಮದಲ್ಲೂ ಮರೆಯಲಾಗದ ಪ್ರತಿರೋಧ ಒಡ್ಡಿರಲೇಬೇಕು. ಅದನ್ನು ಇಲ್ಲಿ ಧಾರ್ಮಿಕ ವಿಧಿಯನ್ನಾಗಿಸಿದೆ. ಆದರೆ ಈ ವಿಧಿಯಲ್ಲಿ ಅವರ ಪ್ರತಿಭಟನೆ ಮಾತ್ರ ನಿಗಿನಿಗಿ ಕೆಂಡವಾಗೇ ಇದೆ.

ಬಲೀಂದ್ರನ ಪದ

ಮಲೆನಾಡಿನಲ್ಲಿ ದೀಪಾವಳಿ ಆಚರಣೆಯ ನಿಮಿತ್ತ ಬಲೀಂದ್ರ ಹಬ್ಬ ನಡೆಯುತ್ತದೆ. ಆಗ ಬಲೀಂದ್ರನ ಪದ ಹಾಡಲಾಗುತ್ತದೆ. ಅಂಥಾ ಒಂದು ಬಲೀಂದ್ರ ಹಾಡು ಡಾ. ಎನ್. ಆರ್. ನಾಯಕರ 'ಜಾನಪದ ಸಿಂಹಾವಲೋಕನ' ಪುಸ್ತಕದಲ್ಲಿ ಹೀಗೆ ಇದೆ –

"ಬಲ್ಲಾಳಾ ಬಲೀಯೇಂದ್ರನೋ ರಾಜೀಕೆ ಸಿರಿವಂತನೂ
ಎಲ್ಲರಾ ಸಲುವಂತನು
ಇಂದ್ರಾಲೋಕದಿಂದ ಬಲ್ಲಾಳ ಬರುವಾಗ
ಕಲ್ಲಾ ಮಳೆಗಳು ಸುರಿದಾವು ಈ ಊರು
ಹುಲುಲ್ಲಗುಡ್ಡೆಲ್ಲಾ ಚಿಗರಾವು"

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಬಲೀಂದ್ರ ದೇವಲೋಕದಿಂದ ಬರುತ್ತಾನೆ. ಇದು ಜನಪದರ ದೃಷ್ಟಿ. ಶಿಷ್ಟ ಸಂಪ್ರದಾಯದ ಪ್ರಕಾರ ಬಲಿ ಪಾತಾಳ

ದಿಂದ ಬರುತ್ತಾನೆ. ಯಾಕೆಂದರೆ ದೇವೇಂದ್ರ ಪಟ್ಟವನ್ನು ಬಯಸಿದ ಬಲಿ ಅದಕ್ಕೆ ಶರತ್ತಾದ ನೂರು ಯಜ್ಞಗಳನ್ನು ಮಾಡಿಸುತ್ತಾನೆ. ನೂರನ್ನು ಪೂರ್ತಿ ಮಾಡಿದರೆ ದೇವೇಂದ್ರ ಪಟ್ಟ ಸಿಕ್ಕಬೇಕು. ಆದರೆ ದೇವತೆಗಳು ಅದನ್ನು ಆಗಗೊಡುವುದಿಲ್ಲ. ಇನ್ನೇನು ಯಾಗ ಪೂರ್ತಿಯಾಗುತ್ತದೆ ಎನ್ನುವಾಗ ಆರ್ಯ ದೇವರಾದ ವಿಷ್ಣು ವಾಮನನೆಂಬ ಬ್ರಾಹ್ಮಣನಾಗಿ ಅವತರಿಸಿ ಬಂದು ಬಲಿಯ ಔದಾರ್ಯವನ್ನೇ ದುರುಪ ಯೋಗಪಡಿಸಿಕೊಂಡು ಅವನನ್ನು ಪಾತಾಳಕ್ಕೆ ತುಳಿಯುತ್ತಾನೆ. ಆದರೂ ತನ್ನವರನ್ನು ನೋಡಲು ಆತ ವರ್ಷಕ್ಕೆ ಮೂರು ದಿನ ವಿಷ್ಣುವಿನ ಪರ್ಮಿಶನ್ ಪಡೆದು ಭೂಮಿಗೆ ಬರುತ್ತಾನೆ. ಆದರೆ ಜನಪದರು ಇದನ್ನು ಒಪ್ಪುವುದಿಲ್ಲ. ತನ್ನವನಾದ ಬಲೀಂದ್ರ ನನ್ನು ತುಳಿಯುವುದನ್ನು ಅಥವಾ ತುಳಿತವನ್ನು ಅವರು ಸಹಿಸರು. ಆದ್ದರಿಂದ ಅವರ ರಾಜ ಬಲೀಂದ್ರ ದೇವಲೋಕದಿಂದಲೇ ಬರುತ್ತಾನೆ. ಶಿಷ್ಟರ ದೃಷ್ಟಿಯಲ್ಲಿ ಬಲೀಂದ್ರ ರಾಕ್ಷಸರಾಜ. ಇಡೀ ಭೂಲೋಕದ ರಾಜನಾಗಬೇಕಾದ ಬಲಿ ಕೇವಲ ರಾಕ್ಷಸರಾಜನಾದ. ತಮಗಾಗದವರನ್ನು ರಾಕ್ಷಸರೆಂದು ಚಿತ್ರಿಸುವುದು ಆರ್ಯಜನಾಂಗ ಪದ್ಧತಿಯೇ ಆಗಿತ್ತು. ಕುವೆಂಪು ರಾಮಾಯಣದಲ್ಲಿ ರಾವಣನ ಮಾತನ್ನು ನೋಡಿ. "ನಾವು ರಾಕ್ಷಸರಂತೆ. ನೀನರಿಯೆ ನಮ್ಮ ನಂತವರು ಬಣ್ಣಿಪರೆಂಬುದಂ ದಶಶಿರಂ ಎಂಬೆನ್ನ ಬಿರುದನವರ್ಲೆದು ತಲೆಯೆಂದು ಚಿತ್ರಿಪರ್... ನಮ್ಮ ಪೆಣ್ಣಳನವರ್ ಕೋರೆಗಳ ಕೋಡುಗಳವೆರಸಿ ಬರೆದವರಂತೆ. ನಾವು ನರನಂ ಕಡಿದು ಬಿಸಿನೆತ್ತರಂ ಕುಡಿದು ಬರ್ದುಕುವವರಂತೆ" (ಕುವೆಂಪು ರಾಮಾಯಣ ಪುಟ 227-28)

ಹೆಂಗಸರ ಹಾಡು

"ಜನಕರಾಜನ ಮಗಳು ವನಕೆ ತೊಟ್ಟಿಲ ಕಟ್ಟಿ
ಲವ ಕುಸರನಿಟ್ಟು ತೂಗ್ಯಾಳೊ ಸೀತಾದೇವಿ
ನಗು ನಗುತ ಕಳೆದಾಳೊ ವನವಾಸ"

ಇದೊಂದು ಜನಪ್ರಿಯವಾದ ಜಾನಪದ ಗೀತೆ. ಇಲ್ಲಿ ಸೀತಾದೇವಿ ರಾಮನಿಂದ ತಿರಸ್ಕೃತಳಾದರೂ ವನವಾಸವನ್ನು ನಗುನಗುತ್ತಾ ಕಳೆದ ಬಗ್ಗೆ ವರ್ಣಿತವಾಗಿದೆ. ಅಂದರೆ ಇಲ್ಲಿ ಎರಡು ಅಂಶವನ್ನು ಗಮನಿಸಲಾಗುತ್ತದೆ. ಒಂದು, ಸೀತೆ ರಾಜಧಾನಿ ಯಲ್ಲಿ ಸಾವಿರ ಸೇವಕಿಯರಿಂದ ಓಲೈಸಿಕೊಳ್ಳಬೇಕಾದವಳು ಅಡವಿಯ ಮರಕ್ಕೆ ತೊಟ್ಟಿಲು ಕಟ್ಟಿ ಜೀವನ ಸಾಗಿಸಿದಳು. ಇದು ಮುಪ್ಪುರಿಗೊಂಡ ಕರುಣೆಗೆ ಆಕರ. ಎರಡು - ತನ್ನ ಮಕ್ಕಳೊಡನೆ ಎಂತಾ ಕಷ್ಟವನ್ನು ಮರೆತಳು. ತಾಯ್ತನದ ಮೇಲ್ಮೆ.

ಸಾಮಾನ್ಯವಾಗಿ ಈ ಪದ್ಯವನ್ನು ವಿವರಿಸುವವರು ಇಲ್ಲಿಯ ಕಾವ್ಯ ಸೊಗಸಿಗೇ ನಿಲ್ಲುತ್ತಾರೆ. ಆದರೆ ಅದರಲ್ಲಿ ಅಡಕವಾಗಿರುವ ಬಂಡಾಯದ ಎಳೆಯನ್ನು ಗ್ರಹಿಸಿ

ವಾಗ ಪದ್ಯದ ಅಸಾಮಾನ್ಯತೆ ಅರ್ಥವಾಗುತ್ತದೆ. ಈ ಜನಪದ ಹೆಣ್ಣಿಗೆ ತುಂಬಿದ ಬಸುರಿಯಾದ ಸೀತೆಯನ್ನು ಪರಿತ್ಯಜಿಸಿದ ರಾಮನ ಬಗ್ಗೆ ಎಂಥಾ ತಿರಸ್ಕಾರವಿದೆ ಯೆಂದರೆ ಆಕೆ ಒಮ್ಮೆಯೂ ರಾಮನ ಹೆಸರನ್ನು ಹೇಳಲು ಬಯಸುವುದಿಲ್ಲ. ರಾಮ ದೇವರು, ಪುರುಷೋತ್ತಮ ಇಂತೆಲ್ಲ ಶಿಷ್ಟ ದೃಷ್ಟಿಯಿದ್ದರೂ ಬಸುರಿಯನ್ನು ಕಾಡಿ ಗಟ್ಟಿದ ರಾಮನನ್ನು ಕವಿಯಿತ್ರಿ ಕ್ಷಮಿಸುವುದಿಲ್ಲ. ರಾಮನ ಹೆಸರು ಹೋಗಲಿ, ದಶರಥನ ಸೊಸೆ ಎಂದು ಸಹ ಆಕೆ ಹೇಳುವುದಿಲ್ಲ. ಸೀತೆ ಜನಕರಾಜನ ಮಗಳು ಆಗುತ್ತಾಳೆಯೇ ಹೊರತು ದಶರಥನ ಸೊಸೆ ಅಥವಾ ರಾಮನ ಮಡದಿ ಆಗುವುದಿಲ್ಲ. ಇದು ಕೇವಲ 'ಜನಕ' 'ವನಕೆ' ಎಂಬ ಪ್ರಾಸಕ್ಕಾಗಿ ಬಂದುದಲ್ಲ. ಹಾಡನ್ನು ಲೀಲಾಜಾಲವಾಗಿ ಹೆಣೆಯುವ ಆ ಅಶು ಕವಿಯಿತ್ರಿಗೆ ಪ್ರಾಸ ಕೂಡಿಸುವುದು ಒಂದು ತ್ರಾಸದಾಯಕವಲ್ಲ. ಆದರೆ ಜನಪದವಾಣಿ ಪುರುಷಪ್ರಜ್ಞೆಯ ವಿರುದ್ಧ ತನ್ನ ಪ್ರತಿಭಟನೆಯಲ್ಲಿ ಕಾವ್ಯದಲ್ಲಿ ದಾಖಲಿಸಿದೆ.

ಒಂದು ಜಾನಪದ ಕತೆ

ಇಲ್ಲಿ ಒಂದು ಜಾನಪದ ಕತೆ ಹೇಳುತ್ತೇನೆ. ಕತೆಯ ಹೆಸರು "ಜಾರ್‌ಬೋರ್ ಗಿಡ್ಡ ಜಾರ್‌ಬೋರ್ ಗಿಡ್ಡ" ಎಂದು. ಇದನ್ನು ಮಕ್ಕಳ ಬಾಯಿಂದ ನಾನೇ ಸಂಗ್ರಹಿ ಸಿದ್ದು. ಇದೊಂದು ಹಾಸ್ಯದ ಕತೆ. ಮಕ್ಕಳ ಕತೆಯೂ ಹೌದು. ಇದು ತುಂಬಾ ಸರಳವಾದ ರಚನೆ. ಮೇಲು ನೋಟಕ್ಕೆ ಬರೀ ಬುರ್ಲಾಸ್ (ಲಘು) ಎನ್ನುವಂತಹುದು. ಆದರೆ ಅಸಂಗತತೆ ಮತ್ತು ಫ್ಯಾಂಟಸಿಯನ್ನು ಬಳಸಿಕೊಂಡ ಈ ರಚನೆ ಎಷ್ಟು ಪ್ರತಿಭಟನಾ ಅಂಶವನ್ನು ಹೊಂದಿದೆ ನೋಡಿ.

ಒಂದಲ್ಲಾ ಒಂದೂರಲ್ಲಿ ಒಬ್ಬ ಗಿಡ್ಡಾ ಗಿಡ್ಡಿ ಇದ್ದರು. ಹೆಂಡತಿ ಗಂಡನಿಗೆ ಗಿಡ್ಡಾ ಗಿಡ್ಡಾ ಎಂದು ಕರೆಯುತ್ತಿದ್ದಳು. ಆದರೆ ಗಿಡ್ಡನಿಗೆ ಎಲಾ, ಇವಳು ನಂಗೆ ಗಿಡ್ಡಾ ಅಂತದ್ಯಲ್ಲಾ ಅಂತ ಸಿಟ್ಟು. ಹೆಂಡತಿಗೆ ಹೇಳಿದ: ನೋಡು, ನಂಗೆ ಜನರ ಮುಂದೆ ಗಿಡ್ಡಾ ಅನ್ನಬೇಡಾ. ಹೆಂಡತಿ ಹೂಂ ಅಂದಳು.

ಒಂದಿನ ಅವನ ಮನೆಗೆ ನೆಂಟರು ಬಂದಿದ್ದರು. ಗಿಡ್ಡಿ ಸಮ್ಮಾನ ಮಾಡಿದಳು. ಮಧ್ಯಾಹ್ನ ಆಯ್ತು. ಗಿಡ್ಡಿ ಚಲೋ ಮಾಡಿ ಅಡ್ಗಿ ಮಾಡಿದಳು. ಒಳಗೆ ಓರೀಲಿ ಎಡಿಸಿದಳು. ಹಾಂಗೆಯೇ ಗಿಡ್ಡಾ ಗಿಡ್ಡಾ ಉಂಬಕ್ಬಾ ಅಂದಳು ಗಿಡ್ಡಗ ಸಿಟ್ಟು ಬಂತು. ನೆಂಟರೆಲ್ಲ ಹೋದ ಮೇಲೆ ರಂಡಿ ನಂಗೆ ಗಿಡ್ಡಾ ಅಂತ್ಯಾ ಹೇಳಿ ಅವಳ ಕುತ್ತಿಗೆ ಕಡ್ದ. ಮೈ ಎಲ್ಲ ಚೂರು ಚೂರು ಮಾಡಿ ದೂರ ಬೇಣದಲ್ಲಿ ಹೊತ್ತಾಕಿ ಬಂದ. ಆ ಜಾಗದಲ್ಲಿ ಚಲೋ ಹುಲ್ಲು ಬೆಳೆಯಿತು.

ಒಂದಿನ ಅವನ ಮನೆ ದನ ಮೇಯಂಕ ಹೋಗಿತ್ತು. ಚಲೋ ಹುಲ್ಲಾದದ್ದು ನೋಡಿ ಮೇದು ಹೊಟ್ಟೆ ತುಂಬಿಕೊಂಡು ಕೊಟ್ಟಿಗೆಗೆ ಬಂತು. ಕೊಟ್ಟಿಗೆಗೆ ಹಾಲು ಕರೂಕ ಹೋದದ್ದೇ ದನ "ಅಂಬಾ ಅಂಬಾ ಗಿಡ್ಡ" ಹೇಳಿ ಕೂಗಿತು. ಗಿಡ್ಡಗೆ ಸಿಟ್ಟು ಬಂದು ದನವನ್ನು ಕಡಿದ. ಚೊಮ್ಮ ಸೊಲ್ಡು ಒಣಗಿಸಿ ಕಾಲಿಗೆ ಜೋಡು (ಕೆರವು) ಮಾಡಿಕೊಂಡ. ಒಳ್ಳೆದಾಗಿ ಎಣ್ಣೆ ಹಾಕಿ ಮೆತ್ತಗೆ ಮಾಡಿಕೊಂಡು ಸಂತೆಗೆ ಹೋಗಬೇಕಾದರೆ ಕಾಲಿಗೆ ಹಾಕಿಕೊಂಡು ನಡೆದ. ನಡೆಯುವಾಗ ಜೋಡು "ಜರ್ ಜರ್ ಗಿಡ್ಡ ಜರ್ ಬೋರ್ ಗಿಡ್ಡ" ಅಂತ ಸದ್ದು ಮಾಡ್ತು.

ಥೂತ್ ಇದರ ಮನೆ ಹಾಳಾಗ್ಲಿ ಎಂದು ಅದನ್ನು ಕೊಚ್ಚಿ ಚೂರು ಚೂರು ಮಾಡಿ ಹಿತ್ತಲಲ್ಲಿ ಒಗೆದ

ಅವನ ಮನೇಲಿ ಒಂದು ಕೋಳಿ ಇತ್ತು. ಅದು ಮೇವ್ಗೆಹೋದಾಗ ಎಲ್ಲಾ ಚೂರು ತಿಂತು. ಬೆಳಗಾಮುಂಚೆ ಸರಗೆಯಬೇಕಾದರೆ 'ಕೊಕೊಂಕೊ ಗಿಡ್ಡ, ಕೊಕೊಂಕೊ ಗಿಡ್ಡ' ಅಂತ ಕೂಗಿತು. ಗಿಡ್ಡನಿಗೆ ಸಿಟ್ಟು ನೆತ್ತಿಗೇರಿತು. ಕೂಡಲೇ ನಿನಗೆ ಮಾಡತ್ತೆ ಮದ್ದು ಹೇಳಿ ಕೋಳಿಯನ್ನು ಹಿಡಿದು ಕೊಚ್ಚಿ ಪದಾರ್ಥ ಮಾಡಿ ಉಂಡ.

ಉಂಡ ನಂತರ ಎಲೆನೆರಿ ತೆಗೆದು ಕವಳ ಹಾಕಬೇಕಾದರೆ ಹೊಟ್ಟೆಯಲ್ಲಿ ಏನೋ ಅಲವರಿಕೆ ಆಯಿತು. ಹೀಗೆ ಮುಕಳಿ ಓರೆ ಮಾಡಿ ಒಂದು ಹೂಂಸು ಬಿಟ್ಟ. ಅದು "ಡೊರ್‌ಡೊರಕ್ ಗಿಡ್ಡ ಡೊರರ್ ಗಿಡ್ಡ" ಅಂತ ಶಬ್ದ ಮಾಡಿತು.

ಗಿಡ್ಡನಿಗೆ ಜೋರು ಸಿಟ್ಟು ಬಂತು. ಕೂಡಲೇ ಒಂದು ಶೂಲದಂತಾ ಚೂರಿ ತೆಗೆದುಕೊಂಡು ತನ್ನ ಹೊಟ್ಟೆಗೇ ಹಾಕಿಕೊಂಡು ಬಿಟ್ಟ.

ಮತ್ತೆ ಗಿಡ್ಡ ಸತ್ತೇಹೋದ.

ಈ ಕತೆ ಪುರುಷ ಯಾಜಮಾನ್ಯದ ವಿರುದ್ಧ ಜಾನಪದ ಹೆಣ್ಣಿನ ಪ್ರತಿಭಟನೆಯನ್ನು ಅಂತರಾಳದಲ್ಲಿ ಹುದುಗಿಸಿಕೊಂಡಿದೆ. ಚರಿತ್ರೆಯ ಹಂತದಲ್ಲಿ ಯಾಜಮಾನ್ಯವನ್ನು ಪುರುಷ ಆಕ್ರಮಿಸಿದ್ದು ದಾಖಲಾಗಿದೆ. ಉತ್ಪಾದನೆಯ ಒಂದು ಹಂತದಲ್ಲಿ ಖಾಸಗಿ ಒಡೆತನ ಉದ್ಭವಿಸಿ ಅದು ಪುರುಷ ಯಾಜಮಾನ್ಯವನ್ನು ಸ್ಥಾಪಿಸಿದೆ. ಈ ಹಂತದಲ್ಲಿ ಸ್ತ್ರೀ ಸ್ವಾತಂತ್ರ್ಯದ ಮೇಲೆ ಒಂದೇ ಸಮನೆ ಕಬಳಿಸುವಿಕೆ ನಡೆದೇ ಇದೆ. ಆದರೆ ಜಾನಪದ ಹೆಣ್ಣು ಅದನ್ನು ಒಪ್ಪಲಿಲ್ಲ. ಅಲ್ಲೊಂದು ಸೆಣಸಾಟ ನಡೆದಿದೆ. ಆದರೆ ಪುರುಷನ ಪಾಶವೀ ಆಕ್ರಮಣದಲ್ಲಿ ಹೆಣ್ಣು ಸೋತಿರಬಹುದಾದರೂ ಕತೆಯಲ್ಲಿ ಆಕೆ

ಕೊಂದಿದ್ದಾಳೆ. ಈ ಪ್ರತಿಭಟನೆಯೇ ಇಲ್ಲಿ ಕಲಾತ್ಮಕವಾಗಿ ಅಸಾಧಾರಣ ರೂಪ ಪಡೆದಿದೆ.

"ಕಾವ್ಯವನ್ನು ವೈಜ್ಞಾನಿಕವಾದ ರೀತಿಯಲ್ಲಿ ಅಧ್ಯಯನ ಮಾಡುವಾಗ ಅದು ನಮಗೆ ಹೆಚ್ಚು ಖಿಂಷಿಯನ್ನು ಕೊಡಬಲ್ಲುದೇ ಹೊರತು ಬೇರೆಯಿಲ್ಲ. ನಾವು ಕಾವ್ಯವನ್ನು ಓದಿ ಸಂಪೂರ್ಣ ರಸಾನಂಭವ ಪಡೆಯಲು ಅದರ ರಚನಾಸ್ವರೂಪವೇನೆಂಬುದನ್ನು ಅರ್ಥಮಾಡಿಕೊಳ್ಳಬೇಕು" ಎಂದು ಜಾರ್ಜ್ ಥಾಮ್ಸನ್ ತನ್ನ 'ಮಾರ್ಕ್ಸ್‌ವಾದ ಮತ್ತು ಕಾವ್ಯ' ಎಂಬ ಕೃತಿಯಲ್ಲಿ ಹೇಳುವುದು ಇಲ್ಲಿ ಸಾರ್ಥಕವಾಗುತ್ತದೆ.

ಗೊಂಡರ ದೇವತೆಗಳು

ಡಾ॥ ಸೈಯದ್ ಜಮೀರುಲ್ಲಾ ಷರೀಫ್

ಸರ್ವ ಕಾಲದಲ್ಲೂ ಹಸಿರು ಹೊದ್ದಿರುವ ಉತ್ತರ ಕನ್ನಡ ಜಿಲ್ಲೆ ಪ್ರವಾಸಿಗರ ಮನ ತಣಿಸುವ ಆಕರ್ಷಣೀಯ ಸ್ಥಳ. ಅಂತಹ ಹಸಿರಿನ ನಡುವೆ ನಿಸರ್ಗ ಪ್ರಿಯರಾಗಿ, ಸ್ನೇಹದ ಮಡುವಾಗಿ, ಬದುಕುತ್ತಿರುವ ಪ್ರಮುಖ ಬುಡಕಟ್ಟು ಗೊಂಡರು. ದಟ್ಟ ಕಾಡಿನ ಬದಿಯಲ್ಲಿ, ಸಹ್ಯಾದ್ರಿಯ ಮಡಿಲಿಂದ ಹರಿದು ಬರುವ ನದಿಗಳ ದಡದಲ್ಲಿ ವ್ಯವಸಾಯವನ್ನು ಮುಖ್ಯ ಉದ್ಯೋಗವನ್ನಾಗಿಸಿಕೊಂಡು, ಪಶುಪಾಲನೆ, ಬಾವಿ ತೋಡುವುದು, ಬುಟ್ಟಿ ಹೆಣೆಯುವುದು ಮೊದಲಾದ ಕಸುಬನ್ನು ಬಿಡುವಿದ್ದಾಗ ಮಾಡಿಕೊಂಡು ಬಾಳು ಸಾಗಿಸುವ ಗೊಂಡರು ಮೂಲದಲ್ಲಿ ಆಂಧ್ರಪ್ರದೇಶದವರೆಂದು ತಿಳಿದು ಬರುತ್ತದೆ. ಮರಾಠಿಗರ ಮತ್ತು ಮೊಗಲರ ಧಾಳಿಗೆ ಸಿಕ್ಕಾಗ ಅವರು ಕರ್ನಾಟಕದ ಕಡೆಗೆ ವಲಸೆ ಬಂದಿರಬಹುದೆಂದು ಊಹಿಸಲು ಆಧಾರಗಳು ದೊರೆಯುತ್ತವೆ. ಭಟ್ಕಳ ತಾಲ್ಲೂಕಿನ ಕಾಡುಪ್ರದೇಶದಲ್ಲಿ ಮಾತ್ರ ಮೊದಲು ನೆಲೆಸಿದ್ದ ಗೊಂಡರು ಇತ್ತೀಚೆಗೆ ಸಾಗರ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ನೆಲೆಸಲು ಪ್ರಾರಂಭಿಸಿದ್ದಾರೆ.

ಬೊಜ್ಜು ಕಾಣದ ಶಕ್ತಿಯುತ ಮಾಂಸಖಂಡಗಳ ಅವರ ಮೈಕಟ್ಟು ಅವರು ಮಣ್ಣಿನ ಮಕ್ಕಳೆಂಬುದನ್ನು ಬಿಂಬಿಸುತ್ತಿರುತ್ತದೆ. ಗಂಡಸರು ಮೇಲ್ಭಾಗದಲ್ಲಿ ನಿಲುವಂಗಿ, ಕೆಳಭಾಗದಲ್ಲಿ ಮೊಣಕಾಲಿನ ಮೇಲೆ ಮಾಸಿದ ಬಿಳಿಯ ತುಂಡು ಪಂಚೆ ಧರಿಸಿ, ತಲೆಗೆ ಕೆಂಪು ಬಣ್ಣದ ಕಂಬಿಯ ಪೇಟ ಸುತ್ತಿರುತ್ತಾರೆ. ಕಿವಿಯಲ್ಲಿ ಗಾಲಿವಂಟಿ, ಬಲಗೈಲಿ ಹರಕೆಯ ಬೆಳ್ಳಿಯ 'ಸರಿಗೆ', ಎಡಗೈಲಿ ಬೆಳ್ಳಿಕಡ. ಅಡಿಕೆ - ಎಲೆ - ತಂಬಾಕು-

ಸುಣ್ಣ ಮತ್ತು ಚಾಕುವಿರುವ ಪ್ಲಾಸ್ಟಿಕ್‌ನ ಅಡಿಕೆ - ಎಲೆ ಚೀಲವನ್ನು ಜೊತೆಗಾತಿಯು ರೀತಿಯಲ್ಲಿ ಜೊತೆಗಿಟ್ಟಿರುತ್ತಾರೆ. ಹೆಂಗಸರು ಮಾಸಲು ಕೆಂಪು ಬಣ್ಣದ ಕಂಬಿಸೀರೆಯನ್ನು ತೊಟ್ಟು ಸೆರಗನ್ನು ಕೊರಳಲ್ಲಿನ ತಾಳಿಗೆ ತ್ರಿಕೋನಾಕಾರದಲ್ಲಿ ಸಿಕ್ಕಿಸಿ ಎದೆಯ ಭಾಗವನ್ನು ಮುಚ್ಚಿರುತ್ತಾರೆ. ಕೈಗೆ ಬೆಳ್ಳಿಯ ಕಡಗ, ಮಣ್ಣಿನ ಬಳೆ, ಕೊರಳಲ್ಲಿ 'ಕೊಳ್‌ಸೂಗ್ಲು' (ತಾಳಿ), ಮಣಿಸರ, ಕಾಸಿನಸರ, ಕಿವಿಯಲ್ಲಿ 'ಖರಾಪುಲಂ' 'ಮಂಗಳು' ಓಲೆ, ಮೂಗಿನಲ್ಲಿ ಮೂಗುತಿಯು ಧರಿಸಿರುತ್ತಾರೆ. ಕಾಲಿನ ಬೆರಳಿಗೆ ಬೆಳ್ಳಿಯ ಕಾಲುಂಗುರ (ಮದುವೆಯಾದ ನಂತರ) ಧರಿಸುವರು.

ಕಟ್ಟಾ ಸಂಪ್ರದಾಯಸ್ಥರಾದ ಗೊಂಡರು ತಮಗೊದಗುವ ಕಷ್ಟಗಳನ್ನು ದೂರ ಮಾಡಿಕೊಳ್ಳಲು ಹಲವಾರು ದೇವರುಗಳಿಗೆ ತಲೆಬಾಗುತ್ತಾರೆ. ಅವರು ನಂಬುವ ದೇವರುಗಳನ್ನು ಪ್ರಮುಖವಾಗಿ ಐದು ಭಾಗಗಳಾಗಿ ವಿಂಗಡಿಸಬಹುದು.

1) ಪುರುಷ ದೇವತೆಗಳು :
   ಜಟ್ಟಿಗ, ಯಂಕ್ಷೆ, ಬ್ಯಾಟೆಬೀರ, ಬೀರರ ದೆವ್ವ, ತಿರುಪತಿ ತಿಮ್ಮಪ್ಪ, ಈಶ್ವರ, ಮಂಜುನಾಥ, ಬಲೀಂದ್ರ ಇತ್ಯಾದಿ.

2) ಸ್ತ್ರೀದೇವತೆಗಳು :
   ಕೋಗ್ರಿ, ಮಾಸ್ತಿ, ಮಾರಿ, ಚೌಡಿ, ಯಕ್ಷಿ ಇತ್ಯಾದಿ.

3) ಆಯುಧಗಳು :
   ವೀರರಕೊಂಬು, ನಾಗಬೆತ್ತ, ಜಟ್ಟಿಗನ ಕೊಂಬು, ತ್ರಿಶೂಲ ಕೀಳನಕೊಂಬು, ಕತ್ತಿ ಇತ್ಯಾದಿ.

4) ಪ್ರಾಣಿಗಳು :
   ಹಾಯಿಗ್ಹೋಳಿ, ಬೀರರಗೂಳಿ, ಹುಲಿಗಿರ್ರಿ, ಹಂದಿಗಿರ್ರಿ, ಹಸು, ನಾಗರಹಾವು, ನವಿಲು ಇತ್ಯಾದಿ.

5) ಸಸ್ಯಗಳು :
   ತುಳಸಿ, ಭತ್ತ, ತೆಂಗಿನಮರ, ಅಡಿಕೆಮರ, ಮೊಗೆಕಾಯಿ, ಅರಳಿ, ಆಲ. ಹಾಲ್ಸೂಸಿದ ಮರಗಳು ಇತ್ಯಾದಿ.

ಗೊಂಡರ ಕುಲದೇವರು ತಿರುಪತಿ ತಿಮ್ಮಪ್ಪ, ಕುಲದೇವತೆ, ಕೋಗ್ರಿ.

ಪುರುಷ ದೇವತೆಗಳಲ್ಲಿ ಜಟ್ಟಿಗನನ್ನು ಹೆಚ್ಚು ನಂಬುತ್ತಾರೆ. ಆಂಧ್ರಮೂಲದವರಾದ ಜಟ್ಟಿಗರು ರಾಣಿ ಚೆನ್ನಭೈರಾದೇವಿಯ ಆಡಳಿತದಲ್ಲಿ ರಕ್ಷಣಾ ಕಾರ್ಯ

ನಿರ್ವಹಿಸುತ್ತಿದ್ದವರು. ಅಂತಹವರು ಶತ್ರುಗಳಿಂದ ನಾಡಿಗಾಗಿ ಪ್ರಾಣತ್ಯಾಗ ಮಾಡಿದ್ದರಿಂದ ಆರಾಧ್ಯಮೂರ್ತಿಗಳಾಗಿ ಉಳಿದರು. ಗೊಂಡರು ಮರದಿಂದ ಐದು ಅಡಿ ಎತ್ತರದ ಕಂಬ ಮಾಡಿ ಅದರ ಅಡಿಯಲ್ಲಿ ಚೆಡ್ಡಿತೊಟ್ಟಿರುವ ಜಟ್ಟಿಗನನ್ನು ಕೆತ್ತಿ ಅದನ್ನು 'ಜಟ್ಟಿಗನ ಕಂಬ' ಎಂದು ಕರೆದು ಅದಕ್ಕೆ ಪೂಜೆ ಸಲ್ಲಿಸುತ್ತಾರೆ.

'ಯಕ್ಷಿ' ಎಂಬುದು ಜೈನದೇವತೆ. ಭಟ್ಕಳದಲ್ಲಿ ಜೈನರು ಹೆಚ್ಚಾಗಿದ್ದ ಸಂದರ್ಭದಲ್ಲಿ ಅವರು ಪೂಜಿಸುತ್ತಿದ್ದ ದೇವರು ಇಂದು ಗೊಂಡರಲ್ಲಿ ಉಳಿದುಕೊಂಡಿದೆ. ಇದು ಮರದಲ್ಲಿ ಮಾಡಿದ ಐದು ಅಡಿಯ ಕಂಬವಾಗಿದೆ. ಇದರಲ್ಲಿ ಯಾವ ಮೂರ್ತಿಯನ್ನು ಕಾಣಲಾಗುವುದಿಲ್ಲ.

'ಬ್ಯಾಟೆಬೀರ' ಎಂಬ ಪುರುಷ ದೇವತೆಯನ್ನು ಗೊಂಡರು ಬೇಟೆಗೆ ಹೋಗುವ ಮುಂಚೆ ಪೂಜಿಸಿ, ಆ ದಿನ ಬೇಟೆ ಹೆಚ್ಚಾಗಿ ಸಿಕ್ಕರೆ ಅದರಲ್ಲಿ ಅರ್ಧಭಾಗವನ್ನು ಆ ದೇವತೆಗೆ ಅರ್ಪಿಸುವ ಹರಕೆ ಹೊತ್ತು ಬೇಟೆ ಪ್ರಾರಂಭಿಸುತ್ತಾರೆ. ಬೇಟೆಗೆ ಹೋದ ವ್ಯಕ್ತಿ ಕ್ರೂರ ಮೃಗಗಳಿಗೆ ಬಲಿಯಾದ ಕಾರಣದಿಂದ ಆ ವ್ಯಕ್ತಿ ಆರಾಧ್ಯನಾಗಿ ಉಳಿದಿರುವಂತೆ ಕಾಣುತ್ತದೆ.

ತಿರುಪತಿ ತಿಮ್ಮಪ್ಪ, ಮಂಜುನಾಥ ಇವರ ಭಾವಚಿತ್ರಗಳನ್ನು ಮನೆಯಲ್ಲಿ ತೂಗುಹಾಕಿದ್ದು ವರ್ಷಕ್ಕೊಮ್ಮೆ ಯಾತ್ರೆಗೆ ಹೋಗುವವರಿಗೆ ಮುಡಿಪು ಕಟ್ಟಿದ್ದ ಹಣವನ್ನು ಕೊಟ್ಟುಕಳುಹಿಸುತ್ತಾರೆ.

ಗೊಂಡರು ದೀಪಾವಳಿ ಹಬ್ಬದ ದಿನ ಬಾವಿಯ ನೀರನ್ನು ಹೊಸ ಗಡಿಗೆಯಲ್ಲಿ ತುಂಬಿಕೊಂಡು ಅದನ್ನು ಬಲೀಂದ್ರನೆಂದು ಭಾವಿಸಿ ಮನೆಗೆ ಕರೆತರುತ್ತಾರೆ. ಮನೆಯಲ್ಲಿನ ಪವಿತ್ರ ಕಂಬವಾದ ಮುಂಡಿಕಂಬದ ಬಳಿ ಅದನ್ನು ಕೂಡಿಸಿ ಅದಕ್ಕೆ ಮೂರು ದಿನಗಳವರೆಗೆ ರುಚಿಕರವಾದ ಸಿಹಿ ಅಡಿಗೆಯ ನೈವೇದ್ಯ ಮಾಡಿ ಅನಂತರ ಕಳುಹಿಸಿಕೊಡುತ್ತಾರೆ. ಬಲೀಂದ್ರನಿಡುವ ಸ್ಥಳದಲ್ಲಿ 'ಫಲಾವಳಿ'ಯಿಂದ ಶೃಂಗಾರ ಮಾಡಿರುತ್ತಾರೆ. ಸಾಮಾನ್ಯವಾಗಿ ಬಲೀಂದ್ರನನ್ನು ಬೆಳೆಯ ಅಭಿವೃದ್ಧಿಯ ಸಂಕೇತವಾಗಿ ಪೂಜಿಸುತ್ತಾರೆ.

ಸ್ತ್ರೀದೇವತೆಗಳಲ್ಲಿ 'ಕೋಗ್ತಿ' ಎಂಬ ದೇವತೆಯು ಗೊಂಡರ ಪ್ರಮುಖ ದೇವತೆ. ಪ್ರತಿವರ್ಷ ಅದರ ಜಾತ್ರೆ ಮಾಡುತ್ತಾರೆ. ಆಗ ಆ ವರ್ಷ ಮದುವೆಯಾದ ಮದುಮಗಿತ್ತಿಯರೆಲ್ಲಾ ತಲೆತುಂಬ ಹೂ ಮುಡಿದು, ಹೊಸಬಟ್ಟೆಯುಟ್ಟು ಕೋಗ್ತಿಗೆ ಪೂಜೆ ಸಲ್ಲಿಸುತ್ತಾರೆ. ಹೆಂಗಸೋರ್ವಳು ಸತಿಹೋದ ಕಾರಣದಿಂದ ಕೋಗ್ತಿಯಾಗಿ ಆರಾ

ಧಿಸಲ್ಪಡುತ್ತಿದ್ದಾಳೆ. ಇದೇ ರೀತಿ ಸತಿಹೋದ ಸ್ತ್ರೀಯರೆಲ್ಲಾ 'ಮಾಸ್ತಿ' ಎಂಬ ಹೆಸರು ಪಡೆದು ಪೂಜಿಸಲ್ಪಡುತ್ತಿದ್ದಾರೆ. ಹರಕೆಹೊತ್ತಿರುವವರು ಮರದ ಮಾಸ್ತಿಯ ಮೂರ್ತಿಗಳನ್ನು ಮಾಡಿಸಿ ತಂದು ಅರ್ಪಿಸುವ ಸಂಪ್ರದಾಯವಿದೆ.

ಭಟ್ಕಳದ ಗ್ರಾಮದೇವತೆಯಾದ 'ಮಾರಿ'ಯ ಪೂಜಾರಿಕೆಯನ್ನು ಕೆಲವು ವರ್ಷಗಳ ಹಿಂದೆ ಗೊಂಡರು ಮಾಡುತ್ತಿದ್ದರು. ಮಾರಿಗೆ ಪ್ರಾಣಿಬಲಿಯನ್ನು ನಿಷೇಧಿಸಿದ ಕಾರಣದಿಂದ ಮಾಂಸಾಹಾರಿಗಳೆಲ್ಲಾ ಮಾರಿಜಾತ್ರೆಯಲ್ಲಿ ಭಾಗವಹಿಸುವುದನ್ನು ನಿಲ್ಲಿಸಿ ಪ್ರತಿಭಟನೆ ವ್ಯಕ್ತಪಡಿಸಿದರು. ಗೊಂಡರು ತಮ್ಮ ಪೌರೋಹಿತ್ಯವನ್ನು ನಿಲ್ಲಿಸಿ ಪ್ರತಿಭಟನೆಗೆ ಕೈಗೂಡಿಸಿದರು. ಆದರೂ ಮಾರಿಜಾತ್ರೆಯಲ್ಲಿ ಹೊರಡುವ ಮಾರಿಯ ಮೆರವಣಿಗೆಯ ಸಂದರ್ಭದಲ್ಲಿ ಅವರು ದಾರಿಯಲ್ಲೇ ಪ್ರಾಣಿ ಬಲಿ ಅರ್ಪಿಸುತ್ತಾ ತಮ್ಮ ಸಂಪ್ರದಾಯವನ್ನು ಮುಂದುವರಿಸುತ್ತಿದ್ದಾರೆ.

ಚೌಡಿ ದೇವತೆಯು ಕಾವಲು ಕಾಯುವ ದೇವತೆಯಾಗಿ ಗೊಂಡರಲ್ಲಿ ಕಾಣಿಸಿಕೊಳ್ಳುತ್ತದೆ. ಜಟ್ಟಿಗ – ಮಾಸ್ತಿ ದೇವಸ್ಥಾನಗಳ ಹೊರಗಡೆ ಚೌಡಿಯನ್ನು ನಿಲ್ಲಿಸಿ ಪೂಜೆ ಸಲ್ಲಿಸುತ್ತಾರೆ.

ಯಕ್ಷಿ ಎಂಬುದು 'ಯಂಕ್ಷಿ'ಯಂತೆ ಜೈನದೇವತೆ. ಒಂದು ಕಂಬದ ಆಕೃತಿಯಲ್ಲಿ ಅದು ಇರುತ್ತದೆ. ಜಟ್ಟಿಗ – ಮಾಸ್ತಿ ಇವುಗಳ ಜೊತೆಯಲ್ಲಿ 'ಯಕ್ಷಿ'ಯ ಕಂಬವನ್ನು ನಿಲ್ಲಿಸಿ ಗೊಂಡರು ಪೂಜೆ ಮಾಡುವ ಪದ್ಧತಿ ಇದೆ.

ವೀರರಕೊಂಬು, ಜಟ್ಟಿಗನ ಕೊಂಬು, ಕೀಳನ ಕೊಂಬುಗಳೆಲ್ಲಾ, ಮರದ ತುಂಡಿಗೆ ಕೊಂಬಿನಾಕಾರದಲ್ಲಿರುವ ಕೋಲುಗಳನ್ನು ಸಿಕ್ಕಿಸಿರುವ, ವೀರರು ಶತ್ರುಗಳನ್ನಟ್ಟಲು ಬಳಸುತ್ತಿದ್ದ ಆಯುಧಗಳು. ತಮ್ಮ ಕಷ್ಟಗಳನ್ನು ಹೊಡೆದೋಡಿಸಲು ಗೊಂಡರು ಹರಕೆಯಾಗಿ ಈ ಆಯುಧಗಳನ್ನು ಹಾಲ್ಗೊಡದ ಮರದಡಿಗಳಲ್ಲಿ ನಿಲ್ಲಿಸಿ ಪೂಜೆ ಸಲ್ಲಿಸುತ್ತಾರೆ. ವ್ಯವಸಾಯ ಪ್ರಾರಂಭಿಸುವ ಮುಂಚೆ ಜಟ್ಟಿಗನ ಕೊಂಬನ್ನು ತಮ್ಮ ಜಮೀನಿನ ಗಡಿಯಲ್ಲಿ ನಿಲ್ಲಿಸುವ ಪದ್ಧತಿಯಿದೆ. ಆ ಕೊಂಬನ್ನು ಜಟ್ಟಿಗನು ಬಳಸಿಕೊಂಡು ಬೆಳೆನಾಶ ಮಾಡಲು ಬರುವ ಶತ್ರುಗಳನ್ನು ನಾಶಮಾಡುತ್ತಾನೆಂದು ಅವರು ನಂಬುತ್ತಾರೆ. ನಾಗಬೆತ್ತವನ್ನು ಮಂತ್ರದಂಡವೆಂದು ತಿಳಿದು ಪೂಜಿಸುತ್ತಾರೆ.

ಹಸು ಮತ್ತು ನವಿಲುಗಳ ಹೊರತು ಉಳಿದ ಪ್ರಾಣಿಗಳಾದ ಹಾಯ್ಗೂಳಿ, ಜೀರಗೂಳಿ, ಹುಲಿಗಿರ್ಲಿ, ಹಂದಿಗಿರ್ಲಿ ಮತ್ತು ನಾಗರಹಾವು ಮೊದಲಾದವು ತೊಂದರೆ ಕೊಡದಿರಲೆಂಬ ಕಾರಣದಿಂದ ಪೂಜಿಸಲು ಅರ್ಹವಾದವು. ದನಕರುಗಳಿಗೆ ತೊಂದರೆ

ಕೊಡುತ್ತಿದ್ದುದನ್ನು ತಪ್ಪಿಸುವ ಸಲುವಾಗಿ ಹಾಯ್ಗೂಳಿ, ಬೀರರಗೂಳಿ, ಹುಲಿಗಿರ್ರಿ ಪ್ರಾಣಿಗಳನ್ನು ಪೂಜಿಸಿದರೆ, ಬೆಳೆಗಳನ್ನು ನಾಶಗೊಳಿಸದಿರಲೆಂದು ಹಂದಿಗಿರ್ರಿಯನ್ನು ಪೂಜಿಸುವರು. ಕೆಲವರು ಅವುಗಳ ಮರದ ಮೂರ್ತಿಗಳನ್ನು ಹರಕೆಯಾಗಿ ಒಪ್ಪಿಸು ವುದೂ ಉಂಟು. ಹಸು ಮತ್ತು ನವಿಲುಗಳು ಉಳಿದ ಜಾತಿಗಳಲ್ಲಿ ಆರಾಧಿಸಲ್ಪಡು ವಂತೆ ಗೊಂಡರಲ್ಲೂ ಸಹ ಆರಾಧಿಸಲ್ಪಡುತ್ತಿವೆ.

ಸಸ್ಯದೇವತೆಗಳಲ್ಲೆಲ್ಲಾ ತುಳಸಿ ಗೊಂಡರ ಪ್ರಮುಖ ದೇವತೆ. ಅವರ ಪ್ರತಿ ಮನೆಯ ಮುಂದೆಯೂ ತುಳಸಿಯ ಕಟ್ಟೆ ಇದ್ದೇ ಇರುತ್ತದೆ. ಎದ್ದ ತಕ್ಷಣವೇ ಅವರು ತುಳಸಿಯನ್ನು ಮೊದಲು ನೋಡುತ್ತಾರೆ. ಕರೆದ ಹಾಲಿನ ಮೊದಲ ಪಾಲು ತುಳಸಿ ಗಿಡಕ್ಕೆ ಸಲ್ಲುತ್ತದೆ. ತುಳಸಿಹಬ್ಬದ ಸಂದರ್ಭದಲ್ಲಿ ಕಟ್ಟೆಯ ಮೇಲೆ ಚಪ್ಪರಹಾಕಿ, ಅದರೊಳಗಡೆ 'ಫಲಾವಳಿ'ಗಳಿಂದ ಶೃಂಗರಿಸಿ ಹೆಚ್ಚು ಭಯ ಭಕ್ತಿಯಿಂದ ಪೂಜಿಸು ತ್ತಾರೆ. ಅವರಲ್ಲಿ ಅಪರೂಪವಾಗಿ ಆಚರಿಸುವ ದುಬಾರಿ ಆಚರಣೆಯಾದ 'ಹರಿದಿನ'ದ ಸಂದರ್ಭದಲ್ಲಿ ತುಳಸಿಯ ಸುತ್ತಾ ಐದು ಗೋಪುರದ ಬಾಳೆಪಟ್ಟೆಯ ಮಂಟಪ ಕಟ್ಟು ತ್ತಾರೆ. ಅದರ ಮೇಲೆ ವಿಶಾಲವಾದ ಚಪ್ಪರ ಹಾಕುತ್ತಾರೆ. ಹರಿದಿನದ ಆಚರಣೆ ಸುಮಾರು ಎಂಟು ದಿನ ನಡೆಯುತ್ತದೆ. ತಮ್ಮ ಜಾತಿಯ ಜನರನ್ನೆಲ್ಲಾ ಆಹ್ವಾನಿಸು ತ್ತಾರೆ. ಶನಿವಾರ ಹರಿದಿನವಾದರೆ ಭಾನುವಾರ ಜೋಗಿ ತುಂಬುವ ಕಾರ್ಯವಿರುತ್ತದೆ. ಶನಿವಾರದ ಕಾರ್ಯದಲ್ಲಿ ಕಳಸವನ್ನು ಗದ್ದೆಯಿಂದ ಹೊತ್ತು ತರುವುದು ಬಹುಮುಖ್ಯ ವಾಗಿರುತ್ತದೆ. ಗದ್ದೆಯಿಂದ ತಂದ ಶೃಂಗಾರಗೊಂಡ ಕಳಸವನ್ನು ತುಳಸಿಯ ಕಟ್ಟೆಯ ಮುಂದಿಟ್ಟು ಪೂಜಿಸುತ್ತಾರೆ. ಕಟ್ಟೆಯ ಸುತ್ತಾ "ಹೌದಾರಣ್ಣಾ ಗೋವಿಂದೊ !" ಎಂದು ಹೇಳಿಕೊಂಡು ಕುಣಿಯುತ್ತಾರೆ. ಅನಂತರ ಅನ್ನ – ಕಾಯಿಪಲ್ಯ ಮತ್ತು ಪಾಯಸದ ವಿಶೇಷ ಊಟವಿರುತ್ತದೆ. ಮಾರನೇ ದಿನ ಬೇಟೆಯಾಡುವ, ಜೋಗಿ ತುಂಬುವ ಕಾರ್ಯಗಳು ಪ್ರಮುಖ. ಅವುಗಳ ನಂತರ ಮೀನಿನ ಊಟವಿರುತ್ತದೆ. ಗೊಂಡರ ಪ್ರಿಯವಾದ ಆಹಾರ 'ಮೀನೂಟ'. ಅವರು ವೈಷ್ಣವ ಸಂಪ್ರದಾಯದ ಅನುಸಾರ ಹರಿದಿನವನ್ನು ಆಚರಿಸಿದರೂ, ಅವರ ಮೂಲ ಸಂಪ್ರದಾಯವಾದ ಬೇಟೆ ಯಾಡುವ ಮತ್ತು ಮೀನಿನೂಟ ಹಾಕುವ ಪದ್ಧತಿಯನ್ನು ಮಾತ್ರ ಬಿಡುವುದಿಲ್ಲ.

ತುಳಸಿಯ ನಂತರ ಹಾಲ್ಗೂಡಿದ ಮರಗಳು ಗೊಂಡರ ಪವಿತ್ರ ವೃಕ್ಷಗಳು. ಅವುಗಳಲ್ಲಿ ದೇವತೆಗಳು ವಾಸವಾಗಿರುತ್ತಾರೆಂಬ ಕಾರಣದಿಂದ ಅವರು ಆ ಮರಗಳನ್ನು ಪೂಜಿಸುತ್ತಾರೆ. ಅಲ್ಲದೆ ಆ ಮರಗಳ ಅಡಿಯಲ್ಲಿ ಜಟ್ಟಿಗನ ಕೊಂಬು, ವೀರರಕೊಂಬು, ಮಾಸ್ತಿ, ಜಟ್ಟಿಗನಕಂಬ ಮೊದಲಾದ ಮೂರ್ತಿಗಳನ್ನು ನಿಲ್ಲಿಸುತ್ತಾರೆ.

'ಮೊಗೆಕಾಯಿ' ಉತ್ತರಕನ್ನಡ ಜಿಲ್ಲೆಯಲ್ಲಿ ಪ್ರಸಿದ್ಧವಾದ ಕಾಯಿಪಲ್ಯ. ಇದನ್ನು ಸಾಂಬಾರಿಗೆ ಉಪಯೋಗಿಸುತ್ತಾರೆ. ಗೊಂಡರು ಬೆಳೆಕೊಯ್ಯುವ ಮುನ್ನ ಆಚರಿಸುವ

'ಹೊಸ್ತು' ಹಬ್ಬದಲ್ಲಿ ಬೊಗೆಕಾಯಿ ಮತ್ತು ಹಣ್ಣಾದ ಭತ್ತದ ತೆನೆ, ಹಣ್ಣೆಸೊಪ್ಪು, ಮಾವಿನಎಲೆ, ಅಡಿಕೆಕಾಯಿಂಗಳನ್ನೆಲ್ಲಾ ಸೇರಿಸಿ ಮನೆಯ ಕಣದಲ್ಲಿನ ಮೇಟಿಕಂಬಕ್ಕೆ ಕಟ್ಟಿ ಅದಕ್ಕೆ ಕೆಂಪು, ಬಿಳಿ ಪಟ್ಟಿಗಳನ್ನು ಎಳೆದು ಪೂಜಿಸುತ್ತಾರೆ.

ಗೊಂಡರಿಗೆ ತೆಂಗಿನಮರ ಅಚ್ಚುಮೆಚ್ಚಿನ ವೃಕ್ಷ. ಅವರ ಮನೆಯ ಅಕ್ಕಪಕ್ಕದಲ್ಲಿ ಎಲ್ಲಾದರೂ ಒಂದೆರಡು ತೆಂಗಿನಮರಗಳನ್ನು ಕಂಡೇ ಕಾಣಬಹುದು. ಅದರ ಬಗ್ಗೆ ಅವರಿಗೆ ಎಷ್ಟು ಭಯ ಭಕ್ತಿ ಎಂದರೆ ಅದರ ಬುಡಕ್ಕೆ ಬಚ್ಚಲಿನ ನೀರನ್ನಾಗಲಿ, ಹೊಲಸನ್ನಾಗಲಿ ಹಾಕುವುದಿಲ್ಲ. ಮರದಿಂದ ಕಾಯಿಕೀಳುವ ಮುಂಚೆ ಮರಕ್ಕೆ ಪೂಜೆ ಮಾಡುತ್ತಾರೆ. ಭಾನುವಾರದ ದಿನ ಅವರು ತೆಂಗಿನಮರ ಹತ್ತುವುದಿಲ್ಲ. ಏಕೆಂದರೆ ತೆಂಗಿನಮರದ ಹುಟ್ಟು ಭಾನುವಾರವಾಯಿತೆಂದು ಹೇಳುತ್ತಾರೆ. ಹಸಿಯಾಗಿರುವ ತೆಂಗಿನಮರವನ್ನು ಅವರೆಂದೂ ಕಡಿಯುವುದಿಲ್ಲ.

ಗೊಂಡರು ತಮಗೆ ನೆರವಾದವರಿಗೆ ಕೃತಜ್ಞತೆಗಳನ್ನು ಅರ್ಪಿಸುವ ಗುಣ ಉಳ್ಳವರು. ಆದ್ದರಿಂದಲೇ ಅವರು ತಮ್ಮ ಕಷ್ಟಗಳನ್ನು ದೂರ ಮಾಡುವ ದೇವರು, ಫಲ ಕೊಟ್ಟು ಸಿಹಿ ನೀಡುವ ವೃಕ್ಷ, ಅನ್ನ ಕೊಟ್ಟು ಸಲಹುವ ಭೂಮಿ, ಮಳೆ ಸುರಿಸಿ ಬೆಳೆ ಹಸಿರುಗೊಳಿಸುವ ಮೋಡ, ವ್ಯವಸಾಯಕ್ಕೆ ನೆರವಾಗುವ ಪ್ರತಿಯೊಂದು ವಸ್ತು ಪ್ರಾಣಿ ಮೊದಲಾದವುಗಳನ್ನು ಸ್ಮರಿಸಿಕೊಂಡು ಆರಾಧಿಸುವ ಹೃದಯವಂತಿಕೆ ಉಳ್ಳವರು.

ಗೊಂಡರು ಪೂಜಿಸುವ ದೇವರ ಸಂಖ್ಯೆ ಹೆಚ್ಚಾಗಿರುವುದರಿಂದ ಅವರ ಮೂಲ ದೇವರುಗಳಾವುವು, ಇತರರಿಂದ ಪ್ರಭಾವಗೊಂಡ ದೇವರುಗಳಾವುವು ಎಂದು ಖಚಿತವಾಗಿ ಬೇರ್ಪಡಿಸುವುದು ಕಷ್ಟಕರವಾದುದ್ದಾಗಿದೆ. ಆದರೂ ಕೆಲವು ಆಧಾರಗಳ ಮೇರೆಗೆ ಅವರ ಮೂಲ ದೇವರುಗಳು ಹುಲಿಗಿರ್ರಿ, ಹಂದಿಗಿರ್ರಿ, ಹಾಯ್ಗೊಳಿ, ಜಟ್ಟಿಗನ ಕಂಬ ಮತ್ತು ಕೊಂಬು, ಮಾಸ್ತಿ, ಕೀಳನಕೊಂಬುಗಳಾಗಿರಬಹುದೆಂದು ಹೇಳಬಹುದು.

ಗಾದೆಗಳ ಪ್ರಾಗ್ಮ್ಯಾಟಿಕ್ (ಸಂಕೇತ ಪ್ರಯೋಗ) ಅಧ್ಯಯನ

ಡಾ. ಎ. ಮುರಿಗೆಪ್ಪ

1. ನಗರ ಪ್ರದೇಶವನ್ನು ಸೇರಿದಂತೆ ಜನಪದರ ವಿಶಾಲವಾದ, ಸೃಜ ಅನುಭವಗಳ ಸಂಕ್ಷಿಪ್ತ, ಶಾಬ್ದಿಕ ಅಭಿವ್ಯಕ್ತಿಯೇ ಗಾದೆಗಳು. ಗ್ರಂಥಸ್ಥ ಭಾಷೆಯೇ ಇರಲಿ, ಆಡುಮಾತಿನ ಪರಂಪರೆಯೇ ಇರಲಿ, ಗಾದೆಯಿಲ್ಲದ ಜನಾಂಗವೇ ಇಲ್ಲ ಎನ್ನ ಬಹುದು. ಗಾದೆಗಳನ್ನು ಕುರಿತ ವಿವರಣಾತ್ಮಕ ಅಧ್ಯಯನ ಹಾಗೂ ಗಾದೆಗಳ ಸಂಗ್ರಹಕಾರ್ಯ ಭಾರತೀಯ ಭಾಷೆಗಳಲ್ಲಿ ನಡೆದಿದೆ ; ಕನ್ನಡ ಭಾಷೆ ಇದಕ್ಕೆ ಹೊರ ತಾಗಿಲ್ಲ. ಗಾದೆಗಳ ಸ್ವರೂಪ, ಅರ್ಥ, ಸಮಾನಾರ್ಥಕ ಗಾದೆಗಳ ವಿವರಣೆಯನ್ನು ಕುರಿತಂತೆ ಗಣನೀಯವಾದ ಕಾರ್ಯ ಕನ್ನಡದಲ್ಲಿ ಆಗಿದೆ, ಆಗುತ್ತಿದೆ.

ಜೀವನದ ಎಲ್ಲ ಸ್ತರಗಳಲ್ಲಿ ಎಲ್ಲ ವಲಯಗಳಲ್ಲಿ ಗಾದೆ ಕಂಡುಬರುತ್ತದೆ. ಇಡಿಯಾದ ಜೀವನಾನುಭವವನ್ನು ಸಂಕ್ಷಿಪ್ತವಾಗಿ ತಿಳಿಸುವುದರ ಮೂಲಕ ಗಾದೆ ಚಿಕ್ಕದರಲ್ಲಿಯೇ ದೊಡ್ಡ ಅನುಭವವನ್ನು ಮುಂದಿಡುತ್ತದೆ. ಗಾದೆಯು ಮಾಧ್ಯಮಾಂತರ ವಾಗಿ ಅದನ್ನು ಬಳಸುವ ವ್ಯಕ್ತಿಯ ಸಂಸ್ಕೃತಿಯನ್ನು ಸುಲಭವಾಗಿ ಅರಿಯಬಹು ದಾಗಿದೆ. ಇದಕ್ಕೆ ಕಾರಣ ಗಾದೆ ಬೆಳೆದುಬಂದಿರಬಹುದಾದ ಸಾಂಸ್ಕೃತಿಕ ಹಿನ್ನೆಲೆ. ಗಾದೆಯಲ್ಲಿ ವಿಷಯ ಮಂಡನೆ ನೇರವಾಗಿದ್ದು ಅದು, ಸರಳವಾದ ನಿರೂಪಣಾತಂತ್ರ ವನ್ನು ಹೊಂದಿರುತ್ತದೆ. ಗಾದೆಗೆ ಕಾವ್ಯಗುಣವನ್ನು ತಂದುಕೊಡುವ ಸಲುವಾಗಿ

ಯಮಕ, ಪ್ರಾಸ, ಪುನರಾವರ್ತನಾ ತಂತ್ರವನ್ನು ಬಳಸಲಾಗುತ್ತದೆ. ಗಾದೆಗಳು ಚುಟುಕಾಗಿದ್ದರೂ ಚುರುಕಾಗಿರುತ್ತವೆ. ಸರಳವಾದ ಭಾಷೆ, ಉಪಮಾ ತಂತ್ರ ಮಂತ್ರ ವಿಷಯವನ್ನು ಸಹಜವಾದ ಬದುಕಿನಿಂದ ನೇರವಾಗಿ ಆಯ್ದ ಕಾರಣ ಗಾದೆ ಕೇಳುಗರನ್ನು ಸುಲಭವಾಗಿ ತಲುಪಿ ತಬ್ಬುತ್ತವೆ. ಗಾದೆಗಳು ಜೀವನಸತ್ಯಗಳೇ ವಿನಹ ಕಾಲ್ಪನಿಕವಲ್ಲ. ಆದ್ದರಿಂದ ಧರ್ಮಬೋಧೆಯನ್ನು ಪ್ರವಚನ ಗುಣವನ್ನು ಮೀರಿ ನಿಲ್ಲುವ ಶಕ್ತಿ ಗಾದೆಗಿದೆ. ನಿತ್ಯಜೀವನದಲ್ಲಿ ಆಚರಿಸಬಹುದಾದ ಸರಳ ಆಚರಣೆಗಳನ್ನು ಕುರಿತು ಗಾದೆ ತಿಳಿಸಿಕೊಡುತ್ತದೆಯೇ ವಿನಹ, ಆಚರಣೆಗೆ ಕಷ್ಟಕರವಾದ ಸಾಧನೆಯನ್ನು ವಿವರಿಸುವುದಿಲ್ಲ. ಧಾರ್ಮಿಕ, ಪೌರಾಣಿಕ ಸಂಗತಿಗಳನ್ನು ಗಾದೆ ಬಳಸಿಕೊಂಡರೂ, ಅದು ಜನಸಾಮಾನ್ಯರ ಬದುಕಿಗೆ ನೇರವಾಗಿ ಸಂಬಂಧಿಸಿರುತ್ತದೆ. ಗಾದೆಯ ಉಗಮವನ್ನು ಕುರಿತಂತೆ ಸ್ಪಷ್ಟವಾದ ಚಿತ್ರಣ ಸಿಗಲಾರದು. ಕೇವಲ ಜನಸಾಮಾನ್ಯರಿಂದ ಮಾತ್ರ ಗಾದೆ ರಚಿತವಾಗಿರದೆ, ಸಂಪ್ರದಾಯ, ಸಾಹಿತ್ಯ ಪರಂಪರೆ ಸಂದರ್ಭದಲ್ಲಿ ಮೂಡಿಬರುವ ಕ್ರಮಬದ್ಧವಾದ ಕಾವ್ಯಮಯ ಹೇಳಿಕೆಯಲ್ಲಿ ಕೂಡ ಸೇರ್ಪಡೆಗೊಂಡಿದೆ.

ಗಾದೆಯನ್ನು ವೇದಕ್ಕೆ ಹೋಲಿಸಲಾಗಿದೆ. ವೇದವೆಷ್ಟು ಚಿರಂತನವಾದ ಸತ್ಯವೆಂಬ ನಂಬಿಕೆ ಇದೆಯೋ ಗಾದೆಯೂ ಅಷ್ಟೇ ಸತ್ಯವೆಂಬ ನಂಬಿಕೆಯಿದೆ - ಎಂಬೆಲ್ಲ ವಿದಯಗಳು ಈವರೆಗಿನ ಅಧ್ಯಯನದಿಂದ ತಿಳಿದುಬರುತ್ತದೆ.

2. ಯಾವುದೇ ವಿಷಯ ನಿರೂಪಣಾ ಸಂದರ್ಭದಲ್ಲಿ ಅಥವಾ ಪ್ರತ್ಯೇಕವಾಗಿಯೂ ಗಾದೆಯನ್ನು ಬಳಸಬಹುದು. ಜನಪದ ಕಥೆ, ಪ್ರಸಂಗ ನಿರೂಪಣೆಯ ಸಮಯದಲ್ಲಿಯೂ ಗಾದೆಯ ಬಳಕೆಯಾಗಬಹುದು. ಸಿದ್ಧಗಾದೆಯನ್ನು ಸಮಯೋಚಿತವಾಗಿ ಅನ್ವಯಿಸಿ ಬಳಸಲಾಗುತ್ತದೆ. ಭಾಷಾಘಟಕವಾಗಿ ರಚನೆಯ ಸ್ವರೂಪ ಹೇಗೇ ಇದ್ದರೂ ಸಹ, ಸಮಯೋಚಿತ ಬಳಕೆಯಿಂದಾಗಿ ತನ್ನ ರಾಚನಿಕ ಮಿತಿಯನ್ನೂ ಮೀರಿ, ಮಾನಸಿಕವಾದ ಗ್ರಹಿಕೆಯ ರಚನೆಯಿಂದಾಗಿ, ಗಾದೆಯನ್ನು ಅರ್ಥೈಸಲಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಬಳಸಬಹುದಾದ ಒಂದು ಗಾದೆ, ಅದರ ಸಹಜ ಸಾಂಸ್ಕೃತಿಕ ಹಿನ್ನೆಲೆಯಿಂದಾಗಿ ವಿಶಿಷ್ಟವಾದ ವಾತಾವರಣವನ್ನು ನಿರ್ಮಿಸುತ್ತದೆ. ಅನೇಕ ಸಾಮ್ಯ ಸಂದರ್ಭಗಳ ಒಂದು ಗಾದೆಯ ಬಳಕೆಯಿಂದಾಗಿ ಅದರ ರಚನಾವಳಿ (Paradigm) ನಿರ್ಮಾಣವಾಗುತ್ತದೆ. ಕಾಲ್ಪನಿಕ ರಚನೆಯ ಮೂಲಕ ಅರ್ಥೈಸಿಕೊಳ್ಳಬಹುದಾದ ಪದಗಳ ಕಾವ್ಯಾತ್ಮಕ ರಚನೆಯ ಅರ್ಥ ಅದರ ಬಳಕೆಯ ಸಂದರ್ಭಕ್ಕನುಗುಣವಾಗಿ ನಿರ್ಧಾರವಾಗುತ್ತದೆ. ಜನಪದ ಕಥೆ ಅಥವಾ ವಿಷಯ ನಿರೂಪಣೆಯಲ್ಲಿ ಬಳಕೆಯಾಗುವ ಗಾದೆಯು ಅದರ ಸಾದೃಶ್ಯ ಸಂದರ್ಭಗಳ ರಚನಾವಳಿ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಪರಿಚಯಿಸುತ್ತದೆ. ಗಾದೆಯ ಅರ್ಥವು ಅದರ ರಚನಾ

ವಳಿಯ ವಿಸ್ತಾರ, ಅದು ಹುಟ್ಟಿಬಂದ, ಬೆಳದ ಸಂಸ್ಕೃತಿಯನ್ನು ಅವಲಂಬಿಸಿರುತ್ತದೆ. ಪ್ರಸ್ತುತ ಲೇಖನದಲ್ಲಿ ತಮ್ಮ ರಚನೆಯನ್ನು ಮೀರಿ ನಿಲ್ಲುವ ಗಾದೆಗಳ ಅರ್ಥಕ್ಕೆ ಸಂಬಂಧಿಸಿದ ವಿಶ್ಲೇಷಣಾ ವಿಧಾನವನ್ನು ಕುರಿತು ಚರ್ಚಿಸಲಾಗುತ್ತದೆ. ನಿರ್ದಿಷ್ಟ ಘಟನೆಯಿಂದಾಗಿ ಅಥವಾ ರೂಪಕವಾಗಿ ನಿರ್ಮಾಣವಾಗುವ ಗಾದೆಗಳು, ಬಳಕೆಯು ವಿಸ್ತಾರವಾದಂತೆಲ್ಲ ಅರ್ಥವಿಸ್ತಾರ ಹಾಗೂ ಅರ್ಥಾಂತರವನ್ನು ಹೊಂದುತ್ತವೆ.

3. ಗಾದೆ ತನ್ನ ರಚನಾವಳಿಯ ವಿಸ್ತಾರವನ್ನು ಅಂದರೆ ಅದನ್ನು ಬಳಸಬಹು ದಾದ ವಿವಿಧ ಸಂದರ್ಭಗಳಿಂದ ನಿರ್ಮಿತವಾಗುವ ರಚನಾವಳಿಯ ಜೊತೆಗೆ, ನಿರೂಪಣಾ ಸಂದರ್ಭದಲ್ಲಿ ಒಂದು ಭಾಷಾ ಘಟಕವಾಗಿ ವಾಕ್ಯಾತ್ಮಕವಾಗಿ ಬಳಸಲ್ಪಡುತ್ತದೆ. ಗಾದೆಯ ಈ ವಾಕ್ಯಾತ್ಮಕ ಬಳಕೆ ಅದನ್ನು ಬಳಸಬಹುದಾದ ರಚನಾವಳಿ ಜ್ಞಾನವನ್ನು ಅವಲಂಬಿಸಿರುತ್ತದೆ. ಈ ಜ್ಞಾನವು ವ್ಯಕ್ತಿಗತವಾಗಿದ್ದು, ವ್ಯಕ್ತಿಗತವಾದ ಈ ಜ್ಞಾನ ವನ್ನು ಗಾದೆಯ ಮೇಲಿನ ಹಿಡಿತ ಎಂದು ಗುರುತಿಸಲಾಗುತ್ತದೆ. ಈ ಜ್ಞಾನವು ಕಥನ ಕಾರನ ಜ್ಞಾಪಕಶಕ್ತಿ, ಜಾಣತನ ಮತ್ತು ಕರ್ತೃತ್ವಶಕ್ತಿಯನ್ನು ಅವಲಂಬಿಸಿರುತ್ತದೆ.

ಗಾದೆಯ ಅರ್ಥವು ಅದರ ರಚನಾವಳಿಯ ವಿಸ್ತಾರವನ್ನು (range) ಹೇಗೆ ಅವಲಂಬಿಸಿರುತ್ತದೆಯೋ ಅಂತೆಯೇ ವಾಕ್ಯಾತ್ಮಕ ಸಾಧ್ಯತೆಯಿಂದಲೂ ನಿರ್ಧಾರವಾಗು ತ್ತದೆ. ಗಾದೆಯು ತನ್ನಲ್ಲಿ ಅಡಕವಾದ ಪದಗಳ ಅರ್ಥವನ್ನೂ ಮೀರಿ, ಬೇರೆಯೇ ಆದ ಮಾನಸಿಕ ಗ್ರಹಿಕೆಯ ಅರ್ಥ ಹೊಂದಿದ್ದು, ಈ ಅರ್ಥವು ಗಾದೆಯ ರಚನಾ ವಿಸ್ತಾರ ಹಾಗೂ ವಾಕ್ಯಾತ್ಮಕ ಬಳಕೆಯನ್ನು ಅವಲಂಬಿಸಿರುವ ಕಾರಣ ಗಾದೆಗಳನ್ನು ಈ ಹಿನ್ನೆಲೆ ಯಲ್ಲಿ ಅಭ್ಯಸಿಸುವದು ಅವಶ್ಯಕವಾಗುತ್ತದೆ. ಮೊದಲನೆಯದಾಗಿ ಗಾದೆಗಳನ್ನು ವಿವಿಧ ಸಂದರ್ಭಗಳ ಹಿನ್ನೆಲೆಯಲ್ಲಿ ಅಭ್ಯಸಿಸುವುದು. ಎರಡನೆಯದಾಗಿ ಸಾದೃಶ್ಯ ಅರ್ಥ ವನ್ನು ಹೊಂದಿರಬಹುದಾದ ಗಾದೆಗಳನ್ನು ಒಟ್ಟಾಗಿ ಗಮನಿಸುವುದು. ಅಲ್ಲದೆ ಇವೆರಡೂ ಒಂದರಿಂದ ಇನ್ನೊಂದು ಹೇಗೆ ಭಿನ್ನವಾಗುತ್ತದೆ ಎಂಬುದನ್ನು ತೋರಿಸು ವುದು. ಒಂದು ಪದವನ್ನು ಅದರ ಸಾಧ್ಯ ಪರಿಸರಗಳಲ್ಲಿ ಅಭ್ಯಸಿಸುವುದು ಗಾದೆಯ ಮೊದಲನೆಯ ಅಧ್ಯಯನ ವಿಧಾನಕ್ಕೆ ಸಮಾನವಾದರೆ, ಅದೇ ಪದವನ್ನು ಅದರ ಅರ್ಥ ದಿಂದಾಗಿ ಇತರ ಪದಗಳಿಂದ ಪ್ರತ್ಯೇಕಿಸಿ ತೋರಿಸುವುದು ಗಾದೆಯ ಎರಡನೆಯ ಅಧ್ಯ ಯನ ವಿಧಾನಕ್ಕೆ ಸಮಾನವಾಗುತ್ತದೆ.

4. ಪದಗಳ ರಚನೆಯಲ್ಲಿ ಕಂಡುಬರುವಂತೆ ಗಾದೆಗಳಲ್ಲಿಯೂ ಸಾಂದ್ರ ರಚನಾ ವಿಧಾನವು ಕಂಡುಬರುತ್ತದೆ. ಒಂದು ಪದರಚನೆಯ ನಂತರ ಹೇಗೆ ಆಂತರಿಕ ಬದಲಾವಣೆ ಹಾಗೂ ಆಂತರಿಕ ವಿಸ್ತಾರ ಸಾಧ್ಯವಿಲ್ಲವೋ ಅಂತೆಯೇ ಗಾದೆಯ ರಚನೆಯಲ್ಲಿಯೂ ಸಹ ನಿರೂಪಣಾ ಸಂದರ್ಭಕ್ಕನುಗುಣವಾಗಿ ಗಾದೆಯೊಳಗಣ ಅಖ್ಯಾತ ಘಟಕಗಳು

ಬದಲಾವಣೆಯನ್ನು ಹೊಂದದೆ, ಎಲ್ಲ ಕಾಲ, ಪುರುಷ - ವಚನ ಸಂದರ್ಭದಲ್ಲಿ ಅದು ಇದ್ದಂತೆಯೇ ಬಳಸಲ್ಪಡುತ್ತದೆ. 'ಆರು ಹಡೆದವಳ ಮುಂದೆ ಮೂರು ಹಡೆದವಳ ಹಾಗೆ' ಎಂಬ ಗಾದೆಯನ್ನು ಯಾವುದೇ ಬದಲಾವಣೆ ಇಲ್ಲದೆ, ವಿವಿಧ ಕಾಲ, ಪುರುಷ, ಲಿಂಗ ವಚನ ಸಂದರ್ಭದಲ್ಲಿ ಬಳಸುವುದನ್ನು ಗಮನಿಸಿದಾಗ ಈ ಅಂಶ ತಿಳಿದುಬರುತ್ತದೆ. ಹೀಗಾಗಿ ಗಾದೆಗೆ ಕಾಲ ವಚನ ಲಿಂಗ ಮಿಕ್ಕೆಲ್ಲ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವತ್ರಿಕತೆ ಬರುತ್ತದೆ.

ಗಾದೆಗಳನ್ನು ಯಾವುದೇ ಪ್ರಸಂಗದಲ್ಲಿ ಬಳಸಿದಾಗ ಸ್ವತಂತ್ರ ಘಟಕವಾಗಿ ಬರದೆ, ಆಯಾ ಸಂದರ್ಭದಲ್ಲಿ "ಅದೇನೋ ಹೇಳ್ತಾರಲ್ಲ........ಅಂತ" "........ಅವರು ಹೇಳಿದ ಹಾಗೆ", "ಅದೇನೊ ಅಂತಾರಲ್ಲ ...... ಹಾಗೆ", "........ಅಂದ ಹಾಗೆ", "........ ಹಾಗೆ", "........ ಅಂತೆ" - ಇತ್ಯಾದಿಯಾದ ಪರಿಚಯ ನುಡಿಯಿಂದ ಸೇರಿಸಲ್ಪಡುತ್ತದೆ. ಉದಾಹರಣೆಗೆ "ಅದೇನೋ ಹೇಳ್ತಾರಲ್ಲ ಒಳಗೆ ಗುಂಬ್ಬಚ್ಚಿ ಮರಿ, ಹೊರಗೆ ಗಿಡುಗನ ಮರಿ ಅಂತ". "ಅದೇನೂ ಅಂತಾರಲ್ಲ ಮೂರು ವರ್ಷದ ಬುದ್ಧಿ ನೂರರ ತನಕ ಅಂತ ಹಾಗೆ", "ಮುಂಡೆ ಸಾಕಿದ ಮಗ ಹೊಲೆಯ ಸಾಕಿದ ಗೂಳಿ ಅಂದ ಹಾಗೆ" "ಊರ ನೋಡೊ ಅಂದ್ರೆ ಸೂರು ನೋಡಿದ್ರಂತೆ", "ಹಂಗಾಮು ಹೋದ ಮೇಲೆ ನಿಂಗಮ್ಮ ಬಸುರಾದ ಹಾಗೆ" ಇತ್ಯಾದಿ ಗಾದೆಗಳನ್ನು ನೋಡಬಹುದು.

5. ಗಾದೆಗಳು ಪದರಚನೆಯ ದೃಷ್ಟಿಯಿಂದಲೇ ಅಲ್ಲ ತಾನು ಕೃತಿಯ ಪರಿಮಿತಗಳ ದೃಷ್ಟಿಯಿಂದಲೂ ವಿಶಿಷ್ಟವಾಗಿದ್ದು, ಉತ್ತಮ ಮತ್ತು ಮಧ್ಯಮ ಪುರುಷವನ್ನು ನಿರಾಕರಿಸಿ ಪ್ರಥಮ ಪುರುಷವನ್ನು ಬಳಸುವುದರ ಮೂಲಕ ಪರೋಕ್ತಿಗಳಾಗಿ ಪರಿಣಮಿಸುತ್ತವೆ; ಖಚಿತವಾಗಿರುತ್ತವೆ. ಗಾದೆ ಮಾತಿನ ಪದಘಟಕಗಳ ಒಟ್ಟರ್ಥವೇ ಉದ್ದೇಶಿತಾರ್ಥವಾಗಿರುವುದು ಅತಿ ಕಡಿಮೆ. ಗಾದೆ, ಬಳಸಿದಂತೆಲ್ಲ ಅದರ ಬಳಕೆಯ ವಿಸ್ತಾರ ಜಾಸ್ತಿಯಾದಂತೆ; ಅದು ತನ್ನ ಪದಗಳ ಅರ್ಥಸ್ತರವನ್ನೂ ಮೀರಿ ಬೆಳೆಯುತ್ತದೆ. ಮತ್ತು ಗಾದೆಯ ಅರ್ಥವ್ಯಾಪ್ತಿ ಕಾವ್ಯಾತ್ಮಕ ಸ್ವರೂಪ, ಅದನ್ನು ಬಳಸುವ ಜನಾಂಗದ ನಿರಂತರವಾದ ಬಳಕೆಯಿಂದಾಗಿ ಉಂಟಾಗುತ್ತದೆ. ಕನ್ನಡದ ಸುಪರಿಚಿತವಾದ 'ಗಾಳಿ ಬಂದಾಗ ತೂರಿಕೊ' ಎಂಬ ಗಾದೆ, ವಾಸ್ತವತೆಯ, ವ್ಯವಸಾಯಾನುಭವದ ಶಬ್ದ ಸಂಕ್ಷೇಪ, ಅದರ ಬಳಕೆಯ ಹರವು ಜಾಸ್ತಿಯಾದಂತೆ ಗಾದೆಯಾಗಿ ಪರಿಣಮಿಸಿದ್ದನ್ನು ಗಮನಿಸಬಹುದು. ಗಾಳಿ ಬರುವುದು ಒಕ್ಕಲಿಗರಿಗೆ ಧಾನ್ಯವನ್ನು ತೂರಿಕೊಳ್ಳಲು ಒಂದು ಅವಕಾಶ. ಅದನ್ನು ಬಿಟ್ಟರೆ ಧಾನ್ಯವನ್ನು ತೂರಲಾಗದು. ಆದ್ದರಿಂದ ಗಾಳಿ ಬಂದಾಗ ತೂರುವ ಕೆಲಸವನ್ನು ಮುಗಿಸಿಕೊಳ್ಳಬೇಕಾಗುತ್ತದೆ. ಈ ವಾಸ್ತವ ಸತ್ಯ ಮುಂದೆ ಅವಕಾಶ ದೊರಕಿದಾಗಲೇ ಕಾರ್ಯನಿರತರಾಗಬೇಕು ಎಂಬ ಅರ್ಥವನ್ನು ಪಡೆಯಿತು. ಮುಂದೆ ಅವಕಾಶವಿದ್ದಾಗ ಮಾತ್ರ ಕಾರ್ಯನಿರತರಾಗುವ ಅವಕಾಶ

ವಾದಗಳನ್ನು, ಪುರುಷ ಪ್ರಯತ್ನಕ್ಕೆ ಮನಸ್ಸನ್ನು ತೊಡಗಿಸದೆ ಕೇವಲ ಅವಕಾಶ ದೊರೆತಾಗ ಇತರರನ್ನು ಬದಿಗೊತ್ತಿ ತಾವೇ ಅವಕಾಶವನ್ನು ಬಳಸಿಕೊಳ್ಳುವ ಜನರನ್ನು ಕಂಡು 'ಗಾಳಿ ಬಂದಾಗ ತೂರಿ ಕೊಳ್ಳುವ' ಜನ ಎಂಬುದಾಗಿ ಹೀನಾರ್ಥದಲ್ಲಿ ಕೂಡ ಬಳಸುವುದನ್ನು ಕಂಡಾಗ, ಗಾದೆಯ ಬೆಳವಣಿಗೆಯ ದಿಕ್ಕನ್ನು ಗುರುತಿಸಬಹುದಾಗಿದೆ.

6. ಸಂಭಾಷಣೆಯ ಸಂದರ್ಭದಿಂದಾಗಿ ಗಾದೆಯ ಅರ್ಥವು ಅದರ ವಾಕ್ಯ ಸ್ವರೂಪದಿಂದ ಭಿನ್ನವಾಗುತ್ತದೆ ಎಂಬುದನ್ನು ಕೆಳಗಿನ ಗಾದೆಗಳಲ್ಲಿ ಕಾಣಬಹುದು. ಒಂದು ಗಾದೆ ವಾಕ್ಯರಚನೆಯ ದೃಷ್ಟಿಯಿಂದ ಪ್ರಶ್ನಾರ್ಥಕ ವಾಕ್ಯವಾಗಿರಬಹುದು. ವಿಧ್ಯರ್ಥಕ ವಾಕ್ಯವಾಗಿರಬಹುದು. ಅಥವಾ ಬೇಡಿಕೆಯಾಗಿರಬಹುದು. ಆದರೆ ಸಂದರ್ಭಕ್ಕೆ ಅನುಗುಣವಾಗಿ ಈ ವಾಕ್ಯಗಳ ಪ್ರಶ್ನಾಭಾವ, ವಿಧ್ಯರ್ಥಭಾವವಳಿದು, ಸಾಮಾನ್ಯ ಹೇಳಿಕೆಗಳಾಗಿ ಪರಿಣಮಿಸುತ್ತವೆ.

'ರಂಗನ ಮುಂದೆ ಸಿಂಗನೆ?' 'ಧೋತ್ರ ದೊಡ್ಡದಾದರೆ ಗೋತ್ರ ದೊಡ್ಡದೆ?', 'ಹಡೆದವರೇನು ಹಣೆಯಲ್ಲಿ ಬರೆದರೆ?' ಎಂಬ ಗಾದೆಗಳು ಪ್ರಶ್ನಾರ್ಥಕ ವಾಕ್ಯಗಳಾದರೂ ಸಹ ಸಂದರ್ಭಕ್ಕೆ ಅನುಗುಣವಾಗಿ 'ರಂಗನಿಗೆ ಸಿಂಗನು ಸಮನಲ್ಲ', 'ಧೋತ್ರ ದೊಡ್ಡದಾದ ಮಾತ್ರಕ್ಕೆ ಗೋತ್ರ ದೊಡ್ಡದಾಗಿರಬೇಕಿಲ್ಲ', 'ಹಡೆದವರು ಹಣೆಬರಹವನ್ನು ಬರೆಯಲಿಲ್ಲ' - ಎಂಬ ನಕಾರಾತ್ಮಕಭಾವ ಮೂಡಿಬರುತ್ತದೆ.

ಪ್ರಶ್ನಾರ್ಥಕ ವಾಕ್ಯದ ಗಾದೆಗಳು ಕೇವಲ ನಕಾರವನ್ನು ಮಾತ್ರ ಸೂಚಿಸುತ್ತವೆಯೆಂದೇನೂ ಅಲ್ಲ. 'ನೀರುಳ್ಳಿಯವನ ಸಂಗಡ ಹೋರಾಟ ಮಾಡಿದರೆ ಮೋರೆಯೆಲ್ಲ ನಾರದೆ?' 'ಊರಿಗೆ ಬಂದವಳು ನೀರಿಗೆ ಬಾರಳೆ?' ಎಂಬ ಗಾದೆಗಳು 'ಮುಖವೆಲ್ಲ ನಾರುತ್ತದೆ', 'ನೀರಿಗೆ ಬಂದೇ ಬರುತ್ತಾಳೆ' ಎಂಬ ಸಾಮಾನ್ಯ ಹೇಳಿಕೆಗಳಾಗಿ ಪರಿಣಮಿಸುತ್ತವೆ.

ಇನ್ನು 'ದಂಡ ತೆರಬೇಡ, ಮುಂದೆ ಕೊಡಬೇಡ', 'ಕುದುರೆಯ ಹಿಂದಿರಬೇಡ, ಹಾರುವವನ ಮುಂದಿರಬೇಡ', ಆಯ ನೋಡಿ ಪಾಯ ಹಾಕು', 'ಹತ್ತಿರದ ಹಸು ತಾ, ದೂರದ ಹೆಣ್ಣು ತಾ' ಎಂಬ ಉಕ್ತಿಗಳು ತೋರಿಕೆಗೆ ವಿಧ್ಯರ್ಥಗಳಾಗಿದ್ದರೂ ಸಹ ಅರ್ಥದ ದೃಷ್ಟಿಯಿಂದ ಸಹಜವಾದ ಸಾಮಾನ್ಯ ಹೇಳಿಕೆಗಳಾಗುತ್ತವೆ.

ಮೇಲಿನ ಗಾದೆಗಳನ್ನು ಗಮನಿಸಿದಾಗ ಗಾದೆಯನ್ನು ಅದರ ವಾಕ್ಯ ಸ್ವರೂಪದಿಂದ ಅರ್ಥೈಸಲಾಗುವುದಿಲ್ಲ. ಅದಕ್ಕೆ ಬದಲು ಅದನ್ನು ಬಳಸುವ ಸಂದರ್ಭದಿಂದಾಗಿ ಮಾನಸಿಕವಾಗಿ ಮೂಡಿಬರುವ ಪ್ರತಿಕ್ರಿಯೆಯಿಂದಾಗಿ ಅರ್ಥೈಸಬೇಕಾಗುತ್ತದೆ. ಅನು

ಭವಗಳ ಭಾವ ಸಾಂದ್ರತೆಯನ್ನು ಸಾರಾಂಶಗೊಳಿಸಿ ಸರಳವಾಗಿ ಕೇಳುಗರ ಮನದಟ್ಟುವಂತೆ ಹೇಳುವಲ್ಲಿ ಗಾದೆಗಳು ಕಾವ್ಯಗುಣವನ್ನು ಪಡೆಯುತ್ತವೆ. ವಾಕ್ಯಸ್ವರೂಪವನ್ನು ಮೀರಿದ ಅರ್ಥ ಗಾದೆಗಳಲ್ಲಿರುವ ಕಾರಣ ಅವು ವಾಕ್ಯರಚನಾ ವಿಶ್ಲೇಷಣೆಗೆ ನಿರುಪಯುಕ್ತವಾಗುತ್ತವೆ.

7. ಗಾದೆಯ ವಾಕ್ಯರಚನಾ ವಿಶ್ಲೇಷಣೆಯಂತೆ, ಗಾದೆಯಲ್ಲಿ, ಬಳಸಲ್ಪಡುವ ಪದಘಟಕಗಳ ಅರ್ಥ ವಿಶ್ಲೇಷಣೆಯೂ ಸಹ ಅದರ ಅರ್ಥವನ್ನು ಹೊರಡಿಸುವಲ್ಲಿ ನಿರುಪಯುಕ್ತವಾಗುತ್ತದೆ. ಗಾದೆಯನ್ನು ಆಂತರಿಕವಾಗಿ ಹಾಗೂ ಅದನ್ನು ಹೊಂದಿ ಬರುವ ಇತರ ಸಾಂದರ್ಭಿಕ ಘಟಕಗಳ ನಡುವೆ ಇರುವ ಹೊಂದಾಣಿಕೆಯನ್ನು ಗುರುತಿಸದೆ ಕೇವಲ ಗಾದೆಮಾತಿನ ಘಟಕಗಳ ಪ್ರತ್ಯೇಕವಾದ ವಿಶ್ಲೇಷಣೆ ಗಾದೆಯನ್ನು ಸರಿಯಾಗಿ ಅರ್ಥೈಸಲಾರದು. ಗಾದೆಯ ಪದಮೂಲವಾದ ಅರ್ಥ ಹಾಗೂ ರೂಪಾತ್ಮಕವಾದ ಅರ್ಥಗಳ ನಡುವಿನ ಅಂತರವನ್ನು ಗುರುತಿಸುವುದು ಸಹ ಅತಿ ಅವಶ್ಯಕವಾಗುತ್ತದೆ. "ತರ್ಲಿಲ್ಲ ಬರ್ಲಿಲ್ಲ ಗಿರ್ಲ್ ತಿಂದ ನೋಡು", "ಉತ್ತರನ ಪೌರುಷ ಒಲೆಯ ಮುಂದ", "ಆಚಾರ ಬಲ್ಲಂದೆ ಈಚಲಮರ ?" - ಎಂಬ ಗಾದೆಗಳ ಪದಮೂಲವಾದ ಅರ್ಥವು ಗಾದೆಯ ಆಶಯವನ್ನು ಬಿಂಬಿಸಲಾರದು. ಮೇಲಿನ ಗಾದೆಗಳಲ್ಲಿ ಮೊದಲನೆಯ ಗಾದೆ ಒಂದು ವಾಸ್ತವ ಸಂಗತಿಯಾಗಿರಲು ಸಾಧ್ಯ. ಯಾವ ಕೆಲಸಕ್ಕೂ ಹೋಗದೆ ಕುಳಿತು ತಿನ್ನುವ ವ್ಯಕ್ತಿಯೋರ್ವನು ರುಚಿ ರುಚಿಯಾದುದನ್ನು ಬಯಸಿ ತಿನ್ನುತ್ತಿದ್ದಿರಬಹುದು. ಅಂತಹ ಸೋಮಾರಿಯ ಗಿರ್ಲ್ ಮೀನನ್ನು ಬಯಸಿ ತಿನ್ನುವ ಬಯಕೆಯನ್ನು ಮೂದಲಿಸುವ ಉಕ್ತಿಯೇ ಮುಂದೆ ಅಂತಹ ಸೋಮಾರಿಗಳನ್ನು ಕುರಿತು ಹೇಳುವ ಗಾದೆಯಾಗಿ ಪರಿಣಮಿಸಿರಬಹುದು. ಎರಡನೆಯ ಗಾದೆಯಲ್ಲಿ ಉತ್ತರಕುಮಾರನು ಬಡಾಯಿಕೊಚ್ಚುವುದು ಪೌರಾಣಿಕ ಸತ್ಯ. ಆದರೆ ಆತನ ಪೌರುಷ ಒಲೆಯ ಮುಂದೆ ಎಂದು ನಿರ್ದಿಷ್ಟೀಕರಿಸುವುದು ಪೌರಾಣಿಕ ಸತ್ಯವಿರಲಿಕ್ಕಿಲ್ಲ. ಆದರೂ ಸಹ ಯಾವ ಕಾರ್ಯವನ್ನೂ ಮಾಡದೆ 'ಬಾಯಿ ಬಡಾಯಿ' ಹೇಳುವವರನ್ನು ಹೆಣ್ಣಿಗೆ ಹೋಲಿಸುವ ಉದ್ದೇಶ ಇದರಲ್ಲಿ ಕಂಡುಬರುತ್ತದೆ. ಮೂರನೆಯ ಗಾದೆಯಲ್ಲಿ ಈಚಲ ಮರ ಹಾಗೂ ಆಚಾರದ ಪ್ರಸ್ತಾಪವಿದೆ. ಈಚಲಮರ ಒಂದು ಜಡವಸ್ತು. ಒಳ್ಳೆಯದು ಕೆಟ್ಟದ್ದು ಎಂಬ ವಿಚಾರ ವಿಶ್ಲೇಷಣೆಯ ಪ್ರಶ್ನೆ ಈಚಲಮರದ ಸಂದರ್ಭದಲ್ಲಿ ಏಳದು. ಹಾಗಾಗಿ ಪದಗಳ ಅರ್ಥವನ್ನು ಗ್ರಹಿಸಿ ಈಚಲಮರಕ್ಕೆ ಆಚಾರದ ಪರಿವೆಯಿಲ್ಲ ಎಂಬುದು ಅವಾಸ್ತವವಾಗುತ್ತದೆ. ಗಾದೆಯಾಗಿ ಬಳಸಿದಾಗ, ಈ ಗಾದೆ ತನ್ನ ಪರಿಸರದಲ್ಲಿ ಬರುವ ಘಟಕಗಳ ಹೊಂದಾಣಿಕೆಯಿಂದಾಗಿ "ದಾರಿಬಿಟ್ಟವನಿಗೆ ಆಚಾರದ ಪರಿವೆಯಿಲ್ಲ" ಎಂಬ ಅರ್ಥವನ್ನು ಪಡೆಯುತ್ತದೆ.

ಮೇಲಿನ ಗಾದೆಗಳನ್ನು ಗಮನಿಸಿದಾಗ, ವಾಸ್ತವ ಘಟನೆಗಳಿಂದ ಮೂಡಿಬರುವ ಅನುಭವ ಸಾಂದ್ರತೆಯು ಸಂಕೀರ್ಣ ಶ್ರವ್ಯಾತ್ಮಕ ಅಭಿವ್ಯಕ್ತಿಯು ಗಾದೆಯಾಗುವುದರ

ಜೊತೆಗೆ ಅವಾಸ್ತವ ಸಂಗತಿಗಳು ಸಹ ರೂಪಕವಾಗಿ ಗಾದೆಯಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ.

8. ಒಂದೇ ಜನಾಂಗದ ಹಾಗೂ ಭಿನ್ನ ಸಂಸ್ಕೃತಿಗಳ ನಡುವಿನ ಗಾದೆಗಳನ್ನು ಅವುಗಳ ಸಾಮ್ಯತೆಯಿಂದ ವಿಶ್ಲೇಷಿಸಿದಾಗ ಕೆಲವೊಂದು ಅಂಶಗಳು ಅರ್ಥಕ್ಕೆ ಸಂಬಂಧಿಸಿದಂತೆ ಕಂಡುಬರುತ್ತದೆ. ಜನಾಂಗ ಸಂಸ್ಕೃತಿ ಬೇರೆಯಾದರೂ ಸಹ ಸಮಾನವಾದ ಅನುಭವಗಳು ಮತ್ತು ನಿರಂತರ ಸತ್ಯಗಳೇ ಕಾರಣವಾಗಿ ಒಂದೇ ರೀತಿಯ ಆಶಯವನ್ನು ಹೊಂದಿರುವ ಗಾದೆಗಳು ಕಾಣಸಿಗುತ್ತವೆ. ಆದರೂ ಸಹ, ಪರಿಸರ, ನಂಬಿಕೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಭಿನ್ನ ಸಂಸ್ಕೃತಿಯ ಸಾಮ್ಯ ಗಾದೆಗಳ ನಡುವೆ ಕೆಲವೊಮ್ಮೆ ಅಂತರವನ್ನು ಕಾಣಬಹುದು.

'ಕರ್ಮ' 'ವಿಧಿ'ಗೆ ಸಂಬಂಧಿಸಿದಂತೆ ಬೇರೆ ಬೇರೆ ಸಂಸ್ಕೃತಿಗಳಲ್ಲಿ ಗಾದೆಗಳು ಇವೆ. ಇಸ್ಲಾಂ ಧರ್ಮದ ಪ್ರಕಾರ ವಿಧಿಯ ಬರಹವನ್ನು ತಪ್ಪಿಸಲಾಗುವುದಿಲ್ಲ. (Fate cannot be avoided) ಇರಾಕಿನ ಗಾದೆಯಂತೆ ಹುಟ್ಟಿದ ದಿನವೆ ಹಣೆ ಬರಹವನ್ನು ಬರೆಯಲಾಗುತ್ತದೆ. ಇದನ್ನು ಅಳಿಸಲಾಗದು (Fate is inscribed on the day of birth and cannot be erased.) ಕನ್ನಡದಲ್ಲಿಯೂ ಸಹ 'ನೊಸಲಕ್ಕರವ ಬಸಲೆಯಿಂದ ಒರಸಬಹುದೆ?', 'ತಪ್ಪಲೇಲಿ ಇದ್ದದ್ದು ಹೋದರೆ ಕಪಾಲದಲ್ಲಿ ಇದ್ದದ್ದು ಹೋದೀತೆ?' ಎಂಬ ಗಾದೆಗಳನ್ನು ಗಮನಿಸಿದಾಗ ಈ ಎಲ್ಲ ಸಂಸ್ಕೃತಿಗಳಲ್ಲಿ ವಿಧಿಯ ಕಲ್ಪನೆ ಇದೆ. ವಿಧಿ ಮಾನವನ ಆಗು - ಹೋಗುಗಳನ್ನು ನಿರ್ಣಯಿಸುತ್ತದೆ. ವಿಧಿ ಬರಹವನ್ನು ಹಣೆಯಲ್ಲಿ ಬರೆಯಲಾಗುತ್ತದೆ. ಕನ್ನಡದ ಗಾದೆಯೊಂದರ ಪ್ರಕಾರ ಕಪಾಲದಲ್ಲಿ ವಿಧಿಲಿಖಿತವಿರುತ್ತದೆ ಎಂಬ ಪ್ರಸ್ತಾಪ ಬಂದಿದ್ದರೂ ಸಹ ನಂಬಿಕೆಯ ಪ್ರಕಾರ ವಿಧಿಲಿಖಿತ ಹಣೆಯಲ್ಲಿ. ಈ ಗಾದೆಗಳ ಪ್ರಕಾರ ವಿಧಿಬರಹವನ್ನು ತಪ್ಪಿಸಲಾಗದು. ವಿಧಿಗೆ ಸಂಬಂಧಿಸಿದ ಈ ಗಾದೆಗಳನ್ನು ಬಳಸುವ ಸಂದರ್ಭ ಸಾಮಾನ್ಯವಾಗಿ ಪ್ರಪಂಚದ ಎಲ್ಲ ಸಂಸ್ಕೃತಿಗಳಲ್ಲಿ ಏಕಮುಖವಾಗಿದೆ. ಸಾವು-ಕಷ್ಟ-ನಷ್ಟ-ಬಡತನ-ಅಪಘಡದಂತಹ ಅನಿಷ್ಟ ಪ್ರಸಂಗಗಳಲ್ಲಿ ಈ ಗಾದೆಗಳನ್ನು ಬಳಸಲಾಗುತ್ತದೆ. ಆದರೆ ವಿಧಿಬರಹದ ಕರ್ತೃತ್ವ ಹಾಗೂ ಅದರ ನಿಯತತೆಯನ್ನು ಕುರಿತ ಏಕಾಭಿಪ್ರಾಯ ಈ ಸಂಸ್ಕೃತಿಗಳಲ್ಲಿ ಇಲ್ಲ. ಇರಾಕಿನ ಕತೆಯೊಂದರ ಪ್ರಕಾರ ವಿಧಿ ದೈವನಿರ್ಮಿತ, ಅದನ್ನು ಮೀರಲಾಗದು. ಈ ಕತೆಯ ಪ್ರಕಾರ ವಿಧಿಯೆಂಬುದು ದೇವರನ್ನು ಮೀರಿದ ಸ್ವತಂತ್ರ ಕಲ್ಪನೆಯಿಲ್ಲ. ಈಜಿಪ್ಟಿನ ನಂಬಿಕೆಯ ಪ್ರಕಾರ ದೇವರು ಎಲ್ಲ ಒಳಿತು - ಕೆಡಕುಗಳಿಗೆ ಕಾರಣ. ಹಿಂದೂ ಸಂಸ್ಕೃತಿಯ ಪ್ರಕಾರ ವಿಧಿಗ ಸ್ಪಷ್ಟ ಆಕಾರವಿಲ್ಲದಿದ್ದರೂ ಸಹ, ವಿಧಿ ದೇವರಲ್ಲ. ದೈವದಿಂದ ಬೇರೆಯೇ ಆದ ಒಂದು ಕಲ್ಪನೆ. "ಪರಮೇಶ್ವರನಾದರೂ ಸ್ಮಶಾನ ತಪ್ಪಲಿಲ್ಲ", "ರಾಘವೇಂದ್ರ ರಾಜ್ಯವಾಳಿದ, ಯಾದವೇಂದ್ರ ದನ

ಕಾದ" ಎಂಬ ಗಾದೆಗಳನ್ನು ಗಮನಿಸಿದಾಗ ದೇವರು ಸಹ ವಿಧಿವಶ ಎಂಬ ಭಾರತೀಯ ಕಲ್ಪನೆ ತಿಳಿದು ಬರುತ್ತದೆ. ಮಾನವ ತನ್ನ ಸತ್ಕ್ರಿಯೆಗಳಿಂದ, ಧಾರ್ಮಿಕ ಆಚರಣೆಗಳಿಂದ ವಿಧಿಯನ್ನು ಗೆಲ್ಲಬಹುದು ಎಂಬ ವಿಚಾರ ಗಾದೆಯು ವಂಶಾಂತರ ಭಿನ್ನ ಸಂಸ್ಕೃತಿಗಳಲ್ಲಿ ಕಂಡುಬರುತ್ತದೆ. ಮಧ್ಯ ಏಶಿಯಾದ ''change of locality changes luck'' ಎಂಬ ಗಾದೆ ಹಾಗೂ ಈಜಿಪ್ಟ್, ಪಾಲೇನೇಶಿಯಾ, ಮೊರಾಣಿ ಪ್ರದೇಶದ ''charity saves death.'' ಎಂಬ ಗಾದೆಗಳನ್ನು ಗಮನಿಸಿದಾಗ ವಿಧಿಯನ್ನು ಗೆಲ್ಲುವುದು ಸಾಧ್ಯ ಎಂಬ ವಿಚಾರ ಮೂಡಿ ಬರುತ್ತದೆ. ಕನ್ನಡದ "ಊರು ಬಿಟ್ಟರೂ ಪ್ರಾರಬ್ಧ ಬಿಡಲಿಲ್ಲ", "ಹಣೆಯಲ್ಲಿ ಹತ್ತಿದ್ದು ಹರಿಹರಕ್ಕೆ ಹೋದರೂ ಬಿಡಲಿಲ್ಲ"- ಎಂಬ ಗಾದೆಗಳನ್ನು ಗಮನಿಸಿದಾಗ ವಿಧಿಗೆ ಸಂಬಂಧಿಸಿದಂತೆ ಭಿನ್ನ ಸಂಸ್ಕೃತಿಗಳಲ್ಲಿ ಏಕಾಭಿಪ್ರಾಯವಿಲ್ಲ ಎಂಬ ಅಂಶ ತಿಳಿದುಬರುತ್ತದೆ. ಅಲ್ಲದೆ ಮೇಲಿನ ಗಾದೆಗಳನ್ನು ಗಮನಿಸಿದಾಗ ಒಂದೇ ಸಂಸ್ಕೃತಿಯಲ್ಲಿ ವಿಧಿಗೆ ಸಂಬಂಧಿಸಿದಂತೆ ವಿರೋಧ ಅಭಿಪ್ರಾಯಗಳು ಇರುವುದು ಗಮನಿಸಬೇಕಾದ ಅಂಶ. ಭಾರತೀಯ ಸಂಸ್ಕೃತಿಯಲ್ಲಿ ವಿಧಿ, ಕರ್ಮ, ಗ್ರಹಚಾರ ಎಂಬ ತ್ರಿವಿಧ ಕಲ್ಪನೆಗಳು ಇವೆ. ಭಾರತೀಯ ಸಂಸ್ಕೃತಿಯ ಪ್ರಕಾರ ವಿಧಿ ಹಣೆಯಲ್ಲಿ ಬರೆದ ಬರಹ, ಕರ್ಮ ವ್ಯಕ್ತಿಯಿಂದ ಪೂರ್ವಾರ್ಜಿತ, ಗ್ರಹಚಾರ ವ್ಯಕ್ತಿ ಹಾಗೂ ಗ್ರಹಗಳ ನಡುವಿನ ಸಂಬಂಧದಿಂದ ಉಂಟಾಗಬಹುದಾದ ಒಳಿತು-ಕೆಡುಕುಗಳು, ಇದರಲ್ಲಿ ಕರ್ಮ ಮತ್ತು ಗ್ರಹಚಾರಗಳನ್ನು ಧಾರ್ಮಿಕ ವಿಧಿ - ವಿಧಾನ, ಸದಾಚಾರ, ದಾನ - ಧರ್ಮದಿಂದ ಮೀರಬಹುದು. ಆದರೆ ವಿಧಿಯನ್ನು ಮಾತ್ರ ಮೀರಲಾಗದು.

ಒಟ್ಟಿನಲ್ಲಿ ಗಾದೆಗಳ ಶಬ್ದಾರ್ಥ ಮತ್ತು ವಾಕ್ಯಾರ್ಥವು ಗಾದೆಗಳಿಗೆ ಆಕಾರವನ್ನು ನೀಡುತ್ತದೆ. ಮತ್ತು ವಿವಿಧ ರಚನಾತ್ಮಕ, ಸಾಂಸ್ಕೃತಿಕ ಸಂದರ್ಭಗಳ ಹಿನ್ನೆಲೆಯಲ್ಲಿ ಸಾಮ್ಯ ಗಾದೆಗಳ ಒಟ್ಟಾರ್ಥವನ್ನು ಪರಿಶೀಲಿಸಿ, ಅವುಗಳ ಅರ್ಥವನ್ನು ಗುರುತಿಸಲು ಸಾಧ್ಯ. ಗಾದೆಗಳು ವಾಕ್ಯಘಟಕಗಳು, ಶಬ್ದ ಮತ್ತು ವಾಕ್ಯರಚನೆಯ ದೃಷ್ಟಿಯಿಂದ ವ್ಯಾಕರಣಬದ್ಧವಾದ ರೂಪಗಳಾಗಿದ್ದರೂ ಸಹ ಅರ್ಥದ ದೃಷ್ಟಿಯಿಂದ ಕೆಲವೊಮ್ಮೆ ಸಹಜವಾಗಿಯೇ ಅರ್ಥಪೂರ್ಣ ರಚನೆಗಳಾಗಿರುತ್ತವೆ. ಕೆಲವೊಮ್ಮೆ ಸಹಜವಾಗಿಯೇ ಅರ್ಥಪೂರ್ಣವಾಗಿರದಿರಬಹುದು. ಸಹಜ ಅರ್ಥಪೂರ್ಣ ರಚನೆಗಳೂ ಸಹ ತಮ್ಮ ಸಹಜ ಅರ್ಥವನ್ನು ಮೀರಿ ವಿಶಿಷ್ಟ ಅರ್ಥವನ್ನು ಪಡೆಯುವ ಸಾಧ್ಯತೆಯೂ ಇರುತ್ತದೆ. ಆದ್ದರಿಂದ ಗಾದೆಗಳನ್ನು ರಚನಾತ್ಮಕವಾಗಿ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಪರಿಶೀಲಿಸುವುದರ ಜೊತೆಗೆ ಸಾಮ್ಯ ಗಾದೆಗಳ ಒಟ್ಟು ಅರ್ಥವನ್ನು ಗಮನಿಸಿ ಒಂದು ಗಾದೆಯನ್ನು ಅರ್ಥೈಸುವುದು ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಸಹಾಯಕ ಗ್ರಂಥಗಳು :

ಹಾ. ಮಾ. ನಾಯಕ : ಜಾನಪದ ಸ್ವರೂಪ, ತ. ವೆಂ. ಸ್ಮಾರಕ ಗ್ರಂಥಮಾಲೆ ಮೈಸೂರು – 1975.

ನಂ. ತಪಸ್ವಿಕುಮಾರ್ : ಜನಪದ ಸಂಸ್ಕೃತಿ, ಪ್ರಬುದ್ಧ ಪ್ರಕಾಶನ, ಮೈಸೂರು – 1970.

ಹು. ಮ. ರಾಮಾರಾಧ್ಯ : ಕನ್ನಡ ಗಾದೆಗಳ ಮಹಾಕೋಶ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – 1982.

ಹೆಚ್ಚಿನ ಗ್ರಂಥಗಳು :

ಎಲ್. ಆರ್. ಹೆಗಡೆ – ಜನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, 1972.

ರಾಮೇಗೌಡ – ಜಾನಪದ ಸಂಕೀರ್ಣ, ಗಂಗಾ ಪ್ರಕಾಶನ, ವಿ. ವಿ. ಪುರಂ, ಮೈಸೂರು – 1974.

ನಗರ ಜಾನಪದ - ಒಂದು ಗ್ರಹಿಕೆ

ಚಿಕ್ಕಣ್ಣ ಯೆಣ್ಣೆಕಟ್ಟೆ

ಜಾನಪದ ಅಂದ ಕೂಡಲೆ ಹಳ್ಳಿಗೆ ಹೋಗಿ ಎರಡು ಬೆರಳು ತೋರಿಸುವ ರೂಢಿ ನಗರವಾಸಿಗಳದಾಗಿದೆ. ಆದರೆ ಬದುಕಿನಲ್ಲಿ ರೂಢಿಸಿ ಬೆಳಸಿಕೊಂಡು ಬಂದಿರುವ ಜಾನಪದ ಪ್ರಕಾರಗಳಾದ ಗೀತೆ, ಕಲೆ, ವೈದ್ಯ, ನಂಬಿಕೆ, ಸಂಪ್ರದಾಯ ಮುಂತಾದ ಜನಪದ ಅಂಶಗಳನ್ನು ಗಮನಿಸಿದಾಗ ಸಂಪ್ರದಾಯವನ್ನು ಮುರಿಯುಲಿಕ್ಕೆ ಬರುವುದಿಲ್ಲ, ಅನ್ನುವ ತಾರ್ಕಿಕ ಮನೋಭಾವದವರು ಪಟ್ಟಣಿಗರು ಅನ್ನುವುದು ಕೇವಲ ಊಹೆ ಅಲ್ಲ. ಪ್ರತಿದಿನ ತಮ್ಮ ಬದುಕಿನಲ್ಲಿ ನಡೆದುಕೊಳ್ಳುವ, ಆಚರಿಸುವ ಧಾರ್ಮಿಕ ವಿಧಿ ವಿಧಾನಗಳನ್ನು ಮೀರಲಾರದ ಪರಿಸ್ಥಿತಿ ಈ ನಗರವಾಸಿಗಳದ್ದು ಅನ್ನುವುದನ್ನು ತಳ್ಳಿ ಹಾಕುವಂತಿಲ್ಲ.

'ವೈಜ್ಞಾನಿಕ ಮನೋಭಾವನೆ ಬಲವಾಗಬೇಕು' ಎಂದು ವೇದಿಕೆಗಳಲ್ಲಿ ಸಾರುವ ಬುದ್ಧಿಜೀವಿಗಳು, ವಿಜ್ಞಾನಿಗಳು ಮತ್ತೊಂದು ಕಡೆ ಅಷ್ಟೇ ಪ್ರಮಾಣದಲ್ಲಿ ಧರ್ಮ ಆಚರಣೆ ಮುಂತಾದ ಸಂಪ್ರದಾಯವನ್ನು ಅಪ್ಪಿಕೊಂಡಿರುವುದು ಅಷ್ಟೇ ಸತ್ಯ. ಮಾನವ ತಾನು ಒಪ್ಪಿಕೊಂಡಿರುವ ಧಾರ್ಮಿಕ, ನಂಬಿಕೆ ಮತ್ತು ಸಂಪ್ರದಾಯವನ್ನು ಸುಲಭ ವಾಗಿ ಬಿಡಲಾರ. ಜಾನಪದ ಬದುಕಿನ ಪ್ರತಿಯೊಂದು ಮಜಲಲ್ಲೂ ಪರಿಣಾಮಕಾರಿ

ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಕೆಲವು ಮಾಹಿತಿ ನೀಡಿದ ಶ್ರೀ ಬರಗೂರು ರಾಮಚಂದ್ರಪ್ಪ ಅವರಿಗೆ ಲೇಖಕ ಋಣಿ.

ಯವಾಗಿ ಕೆಲಸ ಮಾಡುತ್ತದೆ ಅನ್ನುವುದನ್ನು ಅಲ್ಲಗಳೆಯುವಂತಿಲ್ಲ. ಸಂಪ್ರದಾಯ ಒಂದು ಬಂಧವಾಗಿ, ಮನುಷ್ಯನನ್ನು ಬಂಧಿಸಿದೆ. ನಾವು ಈ ಬಂಧನದಿಂದ ಹೊರಗಿದ್ದೇವೆ ಎಂದು ಹೇಳಿದಾಗಲೂ ಅವರು ಆ ಸಮಾರಂಭದ ದೀಪವನ್ನು ಬೆಳಗಿಯೇ ಮಾತನ್ನಾಡುತ್ತಾರೆ. ಇಲ್ಲಿ ಟೇಪನ್ನು ಕತ್ತರಿಸಿ ಬಂದಿರುತ್ತಾರೆ. ಈ ಸಂಪ್ರದಾಯದ ಬಿಗಿಯಿಂದ ತಪ್ಪಿಸಿಕೊಳ್ಳುವುದು ಮನುಷ್ಯ ಹೇಳಿದಷ್ಟು ಸುಲಭವಾದುದಲ್ಲ. ತಾವು ಇದಕ್ಕೆ ಹೊರತು ಎಂಬ ಹೇಳಿಕೆ ಕೇವಲ ಹೇಳಿಕೆಯಾಗಿಯೇ ಉಳಿದುಬಿಡುತ್ತದೆ.

ಸಂಪ್ರದಾಯ ಜಾನಪದದ ಒಂದು ಪ್ರಕಾರ. ಆದುದರಿಂದ ಈ ಶಬ್ದದ ಅರ್ಥ ಅನಿವಾರ್ಯ. ಸಂಪ್ರದಾಯ ಈ ಪದದ ಅರ್ಥ ವಿಶ್ಲೇಷಣೆಯನ್ನು ಡಾ. ಹಾ. ಮಾ. ನಾಯಕರು ಜಾನಪದ ಶಾಸ್ತ್ರೀಯ ಆಕರವಾದ Standard Dictionary of Folk-lore Mythologhy and Legend ನಲ್ಲಿ ಜಾನಪದದ ಬಗೆಗೆ ಪ್ರತಿಪಾದಿಸಿರುವ ಸುಮಾರು ಇಪ್ಪತ್ತು ಜನ ವಿದ್ವಾಂಸರ ಹೇಳಿಕೆಗಳನ್ನು ಗಮನಿಸಿ ತಮ್ಮ 'ಜಾನಪದ ಸ್ವರೂಪ' ಗ್ರಂಥದಲ್ಲಿ ಹೀಗೆ ಹೇಳುತ್ತಾರೆ. 'ಸಂಪ್ರದಾಯವನ್ನು ಕುರಿತ ಒಂದು ವಿಜ್ಞಾನ ಜಾನಪದ' ಅಂದರೆ ಸಂಪ್ರದಾಯ ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುವ ಆಚರಣೆಗಳನ್ನು ನಮ್ಮ ಹಿರೀಕರು ಮಾಡಿದ್ದು ಎಂದು ನಂಬಿ, ಅದನ್ನು ತಪ್ಪದೆ ಪಾಲಿಸುವ ಒಂದು ವಿಧಾನ. ಈ ಸಂಪ್ರದಾಯ ನಂಬಿಕೆಯಾಗಿ, ರಕ್ತಗತವಾಗಿ ಮುಂದುವರೆಯುತ್ತದೆ. ಈ ನಂಬಿಕೆಗಳ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಸಂಪ್ರದಾಯ ಕೆಲಸ ಮಾಡುವುದರಿಂದ, ಈ ಸಂಪ್ರದಾಯದ ಮೂಲ ಜಾನಪದೀಯವಾದುದರಿಂದಲೂ, ಈ ಎಲ್ಲ ನಿಯಮಗಳನ್ನು ನಗರವಾಸಿಗಳು ಗ್ರಾಮೀಣರಿಗಿಂತ ಯಾವುದೇ ವ್ಯತ್ಯಾಸವಿಲ್ಲದೆ ಬದುಕಿನಲ್ಲಿ ಅಳವಡಿಸಿಕೊಂಡು ಮುಂದುವರಿಸುತ್ತಿರುವುದರಿಂದ ನಗರದಲ್ಲೂ ಜಾನಪದ ಉಸಿರಾಗಿದೆ, ಬದುಕಿನೊಂದಿಗೆ ಬೆರೆತಿದೆ ಅನ್ನುವುದನ್ನು ಸೂಚಿಸುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ವೈಜ್ಞಾನಿಕ ವಿಚಾರಗಳನ್ನು ಪ್ರತಿಪಾದಿಸುವ ವೈದ್ಯರು ಮೊದಲಾದವರೂ ಕೂಡ ಆಯುಧ ಪೂಜೆಯ ಸಂದರ್ಭದಲ್ಲಿ ತಮ್ಮ ಎಲ್ಲ ಆಯುಧಗಳನ್ನು ಒಂದೆಡೆ ಇಟ್ಟು ಪೂಜಿಸುವ ಪರಿಪಾಠವನ್ನು ಯಾರು ಬಿಟ್ಟಿದ್ದಾರೆ? ಇವರು ಮಾಡುವ ಪೂಜೆ, ಪ್ರಸಾದ ವಿನಿಯೋಗ, ಯಾವ ಗ್ರಾಮೀಣರಿಗಿಂತ ಕಡಿಮೆಯಾದುದು ? ಭಿನ್ನವಾದುದು ? ಇದು ವಿಚಾರ ಮಾಡುವ ಸಂಗತಿ.

ಬೆಂಗಳೂರಿನ ಕೆಲವು ಭಾಗಗಳನ್ನು ಗಮನದಲ್ಲಿಟ್ಟುಕೊಂಡು ಈ ಲೇಖನವನ್ನು ಬರೆಯಲಾಗಿದೆ.

ಅಣ್ಣಮ್ಮ ಬೆಂಗಳೂರಿನ ಗ್ರಾಮದೇವತೆ. ಈ ದೇವತೆಯ ಉತ್ಸವ ಇಡೀ ಬೆಂಗಳೂರು ನಗರವನ್ನೇ ಆವರಿಸಿದೆ. ವರ್ಷಕ್ಕೊಮ್ಮೆ ನಡೆಯುವ ಈ ಜಾತ್ರೆಯು

ಪರದಿಯಂತೆ ಇಡೀ ನಗರವನ್ನೇ ಸುತ್ತುವರಿದಿದೆ. ಅಣ್ಣಮ್ಮನನ್ನು ಕರೆತರುವ ಧಾರ್ಮಿಕ ವಿಧಾನ ಗ್ರಾಮೀಣರಿಗಿಂತ ಕೊಂಚ ಭಿನ್ನವಾಗಿದ್ದು, ನಗರದಲ್ಲಿ ಟೆಂಪೋ, ಲಾರಿಗಳ ಮೂಲಕ ತಮ್ಮ ಪೇಟೆಗೆ ತರುತ್ತಾರೆ. ಅಲ್ಲಿಯೂ ವಾದ್ಯಗಳು ಇದ್ದೇ ಇರುತ್ತವೆ. ಬೀದಿಯ ಮುಖ್ಯ ಭಾಗದಲ್ಲಿ ದೊಡ್ಡ ಪೆಂಡಾಲನ್ನು ಹಾಕಿ ಅಲ್ಲಿ ದೇವರ ಗದ್ದಿಗೆಯನ್ನು ಮಾಡಿ ಕೋಳಿ, ಕುರಿಯನ್ನು ಬಲಿಕೊಡುವ ಪದ್ಧತಿ ಬೆಂಗಳೂರಿನ ರಾಜಾಜಿನಗರದ ಸಿದ್ಧರಾಮ ದಿಣ್ಣೆಯಲ್ಲಿ, ಇಂದಿಗೂ ನಡೆಯುತ್ತಿದೆ. ಆರತಿ, ಸಂಗೀತ, ನೃತ್ಯ ಮೊದಲಾದ ಜಾನಪದ ಕಲೆಗಳು ಮಾಮೂಲಾಗಿಯೇ ಜರುಗುತ್ತವೆ. ಎಲ್ಲ ವರ್ಗದವರು ಪರಸ್ಪರ ಪ್ರೀತಿಯಿಂದ ಕಲೆಯುವ ಈ ಹಬ್ಬ ತುಂಬು ಸಡಗರವನ್ನು ಉಂಟುಮಾಡುತ್ತದೆ.

ಬೆಂಗಳೂರಿನ ಕರಗ ನಾಡಿನ ಪ್ರಸಿದ್ಧ ಉತ್ಸವ ಯುಗಾದಿಯ ಮೊದಲು ನಡೆಯುವ ಈ ಆಚರಣೆ ಬೆಂಗಳೂರಿಗೆ ಮಾತ್ರ ಸೀಮಿತವಾದುದಲ್ಲ. ದೂರ ದೂರದಿಂದ ಭಕ್ತರು ತಂಡ ತಂಡೋಪವಾಗಿ ಬಂದು ಇಲ್ಲಿ ಸೇರುತ್ತಾರೆ.

ಕರಗವನ್ನು ಹಸಿ ಮಣ್ಣಿನಿಂದ ತಯಾರಿಸುವಾಗಿನಿಂದ ಹಿಡಿದು ಕರಗವನ್ನು ಹೊತ್ತುಕೊಳ್ಳುವ ಉಪವಾಸ ವ್ರತವೂ ಸೇರಿದಂತೆ ಎಲ್ಲವೂ ಅತ್ಯಂತ ಕಟ್ಟುನಿಟ್ಟಾಗಿ ನೆರವೇರಬೇಕು. ದೇವರನ್ನು ಹೊಳೆಗೆ ತೆಗೆಯುವುದು, ಕರಗವನ್ನು ಹೊರುವವನು ವೇಷವನ್ನು ಬದಲಾಯಿಸಿ ಸ್ತ್ರೀವೇಷ ಧರಿಸುವುದು, ಹೊಳೆಯಿಂದ ದೇವರ ಗುಡಿಗೆ ಬರುವುದು. ಇಲ್ಲೆಲ್ಲ ಅತ್ಯಂತ ಎಚ್ಚರಿಕೆಯಿಂದ ಮಡಿ ಮೈಲಿಗೆಯನ್ನು ಆಚರಿಸುವುದು ಬೆರಗುಗೊಳಿಸುವಂತಹದುದು. ಬೀದಿ ಬೀದಿಯಲ್ಲಿ ಶೃಂಗಾರ. ಪಾನಕ, ನೀರುಮಜ್ಜಿಗೆ, ಕೋಸಂಬರಿ ದಾನ ಅಂಗಡಿ ಮುಂದೆಲ್ಲ ವಿಜೃಂಭಣೆಯಿಂದಲೇ ನಡೆಯುತ್ತಿರುತ್ತದೆ. ಅದುವರೆಗೆ ದಾನ ಧರ್ಮ ಮಾಡದೆ ಇದ್ದವರು ಇಂದು ಈ ರೀತಿಯಿಂದಲಾದರೂ ದಾನ ಮಾಡುವ, ಆ ಮೂಲಕ ತಾವು ಮಾಡಿದ್ದ ಪಾಪ ಪರಿಹಾರದ ನಂಬಿಕೆ ಇಲ್ಲೆಲ್ಲ ಬಲವಾಗಿ ಕೆಲಸ ಮಾಡುತ್ತಿದೆ ಅನ್ನುವುದನ್ನು ತಳ್ಳಿಹಾಕುವಂತಿಲ್ಲ.

ಗಣಪತಿಯ ಉತ್ಸವವನ್ನು ಬೆಂಗಳೂರಿನ ಬೀದಿ ಬೀದಿಗಳಲ್ಲಿ ಅತ್ಯಂತ ಸಡಗರದಿಂದ ಆಚರಿಸುತ್ತಾರೆ. ಹಬ್ಬ ಒಂದು ತಿಂಗಳು ಇರುವಾಗಲೆ ಬಲವಾದ ಸಿದ್ಧತೆ, ನಡೆಯುತ್ತದೆ. ದೊಡ್ಡ ದೊಡ್ಡ ಪೆಂಡಾಲನ್ನು ಹಾಕಿ ಬೀದಿ ಬೀದಿಗಳಲ್ಲೂ ಗಣಪತಿಯನ್ನು ಕೂರಿಸುವ ಪರಿಪಾಠ ಸಹಜವಾಗಿಯೇ ನಡೆದು ಬಂದಿದೆ. ಹರಿಕತೆ, ಜನಪದ ಗೀತೆ, ನಾಟಕ, ನೃತ್ಯ ಮೊದಲಾದ ಮನರಂಜನೆಯನ್ನು ನಡೆಸುವ ವಿಧಾನ ಯಾವ ಹಳ್ಳಿಗಿಂತಲೂ ಭಿನ್ನವಾದುದೇನಲ್ಲ. ಹಣಕಾಸಿನ ಸಮಸ್ಯೆ ಮತ್ತಿತರ ತೊಂದರೆಗಳಿಂದ ಧಾರ್ಮಿಕ ವಿಧಿಗಳನ್ನು ಕರಾರುವಕ್ಕಾಗಿ ಆಚರಿಸಲು ಸಾಧ್ಯವಾಗದೇ ಇರುವ ಹಲವಾರು

ನಿದರ್ಶನಗಳು ಗ್ರಾಮೀಣ ಪರಿಸರದಲ್ಲಿ ಕಂಡುಬರುತ್ತವೆ. ಅಲ್ಲದೆ ಚಿಕ್ಕ ಚಿಕ್ಕ ಹಳ್ಳಿಗಳಲ್ಲಿ ಇಂದಿಗೂ ಗಣಪತಿಯನ್ನು ಇಡಲಾರದೆ ಇರುವ ಹಲವಾರು ಪ್ರಸಂಗಗಳಿವೆ. ಆದರೆ ಅತ್ಯಂತ ಶ್ರದ್ಧೆ. ಭಕ್ತಿಪೂರ್ವಕವಾಗಿ ದೇವರು - ಧರ್ಮಗಳ ಬಗೆಗೆ ವಿಧಿವತ್ತಾಗಿ ನಡೆದುಕೊಳ್ಳುವ ಪರಂಪರೆಯನ್ನು ಉಳಿಸಿಕೊಂಡಿರುವವರಲ್ಲಿ ಸಿಂಹಪಾಲು ನಗರವಾಸಿಗಳು ಅನ್ನುವುದನ್ನು ತಳ್ಳಿ ಹಾಕುವಂತಿಲ್ಲ.

ಹೆಣ್ಣು ತನ್ನ ಯೌವ್ವನಾವಸ್ಥೆಯನ್ನು ರುಜುವಾತುಪಡಿಸುವುದು ಮೈನೆರೆಯುವುದರ ಮೂಲಕ. ಇದನ್ನು ಋತುಶ್ಯಾಂತಿ, ಪುಷ್ಪವತಿ, ದೊಡ್ಡವಳಾಗುವುದು ಎಂದೂ ಕರೆಯುತ್ತಾರೆ. ಶಿವಮೊಗ್ಗ ಸುತ್ತಮುತ್ತ ಕೆಲವು ಸ್ಥಳಗಳಲ್ಲಿ 'ಹುಡುಗಿಯ ಮುಃಕಳಿ ಬೆದರಿದೆ' ಎಂದೂ ಕರೆಯುವ ಪರಿಪಾಠ ಉಂಟು. ಪ್ರಾದೇಶಿಕ ವ್ಯತ್ಯಾಸಗಳು ಈ ಪದ ಬಳಕೆ ಬೇರೆ ಬೇರೆಯಾದರೂ ಈ ಸಂದರ್ಭಗಳಲ್ಲಿ ಆಚರಿಸುವ ವಿಧಿ ವಿಧಾನಗಳು ಸಾಮಾನ್ಯವಾಗಿ ಒಂದೇ ರೀತಿಯದಾಗಿರುತ್ತದೆ ಅನ್ನುವುದನ್ನು ಮರೆಯುವಂತಿಲ್ಲ.

ನಗರಗಳಲ್ಲೂ ಹೆಣ್ಣು ಮೈನೆರೆದ ಕೂಡಲೆ ಆಕೆಯನ್ನು ಮನೆಯ ಮೂಲೆಯಲ್ಲಿ ಕೂಡಿಸುತ್ತಾರೆ. ನಿರ್ದಿಷ್ಟ ದಿನಗಳವರೆಗೆ ಕುಟುಂಬದ ಇತರರು ಆಕೆಯನ್ನು ಮುಟ್ಟುವಂತಿಲ್ಲ. ಒಂಬತ್ತು ದಿನ ಕಳೆದ ನಂತರ ಈಕೆಯನ್ನು 'ಕುಳ್ಳಿರಿಸುವ' ಶಾಸ್ತ್ರವಿರುತ್ತದೆ. ಇದಕ್ಕೆ ಬೇರೆ ಬೇರೆ ಭಾಗಗಳಲ್ಲಿ ಭಿನ್ನವಾದ ಪದ ಬಳಕೆ ಇದೆ. ಗಂಡ್ಹಾಕುವುದು, ಹೊಸಗೆ ಹಾಕುವುದು, ಮುಂತಾಗಿ ಕರೆಯುತ್ತಾರೆ. ಈ ಸಂದರ್ಭಗಳಲ್ಲೂ ಗ್ರಾಮೀಣರಂತೆ ಶಾಸ್ತ್ರೋಕ್ತವಾಗಿ ಈ ಕ್ರಿಯೆಯನ್ನು ಆಚರಿಸುತ್ತಾರೆ. ಅದೇ ಶಾಸ್ತ್ರ, ದೇವರ ಪೂಜೆ, ಮುತ್ತೈದೆಯರಿಗೆ ಅರಿಸಿಣ ಕುಂಕುಮ ದಾನ ಮೊದಲಾದವು ತಪ್ಪುವುದಿಲ್ಲ. ಇನ್ನು ಹೆಚ್ಚೆಂದರೆ ಇಲ್ಲಿಯೂ ಕೆಲವು ಮನೆಗಳಲ್ಲಿ 'ಸೋಬಾನೆ ಪದ' ಅಂದರೆ ಮದುವೆಯ ಸಂದರ್ಭದಲ್ಲಿ ಹೇಳುವಂತೆ ಇಲ್ಲಿಯೂ ಹೇಳುವುದನ್ನು ನಾನು ಗಮನಿಸಿದ್ದೇನೆ.

ಮನೆಗೆ ಯಾವುದೇ ತೊಂದರೆಯಾಗದಿರಲಿ ಎಂದು ಶಾಂತಿ ಮಾಡಿಸುವ ವಿಧಾನ ಇಲ್ಲಿಯೂ ದೂರ ಉಳಿದಿಲ್ಲ. ಇದನ್ನು 'ಕಟ್ಲೆ ಮಾಡಿಸುವುದು' ಅಂದೇ ಕರೆಯುತ್ತಾರೆ. ಭೂತ ಪ್ರೇತಗಳಲ್ಲಿ ನಂಬಿಕೆ ಇರುವ ಗ್ರಾಮೀಣರು ಇವುಗಳ ಚೇಷ್ಟೆ ತಮಗುಂಟಾಗದಿರಲಿ ಎಂದು ಈ ಶಾಸ್ತ್ರವನ್ನು ಮಾಡಿದರೆ ಯಾಂತ್ರಿಕ ಬದುಕಿನ ನಾಗರೀಕರೂ ಈ ಸೋಂಕಿಗೆ ಅಂಟಿಕೊಂಡಿರುವುದು ಇವರ ದಟ್ಟ ನಂಬಿಕೆಯನ್ನು ಪ್ರದರ್ಶಿಸುತ್ತದೆ. ಮನೆಯ ಬಾಗಿಲಿಗೆ ತೆಂಗಿನಕಾಯಿ ಅಥವಾ ಕುಂಬಳಕಾಯಿಯನ್ನು ಕಟ್ಟಿರುವ ನೂರಾರು ಮನೆಗಳು ಇಂದಿಗೂ ಬೆಂಗಳೂರಿನಲ್ಲಿವೆ. ಅಷ್ಟೆ ಅಲ್ಲ ಇದರ ಮತ್ತೊಂದು ರೂಪ

ವಾದ ಚಕ್ರವನ್ನು ಗಾಜು ಹಾಕಿಸಿ ಬಾಗಿಲಲ್ಲಿ ನೇತು ಹಾಕಿರುವುದನ್ನು ಗಮನಿಸಬಹು ದಾಗಿದೆ.

ಭೂತ, ದೇವರು ಮೇಲೆ ಬರುವುದು ಕೇವಲ ಹಳ್ಳಿಗರಿಗೆ ಸೇರಿದ್ದು ಅಂದು ಕಿವಿ ಮುರಿಯಬೇಕಾದುದೇನಿಲ್ಲ. ಬೆಂಗಳೂರಿನ ಶ್ರೀರಾಮಪುರದ ಅಂಬೇಡ್ಕರ ನಗರದಲ್ಲಿ ಎಲ್ಲಮ್ಮ ದೇವತೆಯ ದೇವಾಲಯವಿದೆ. ಇದರ ಪಕ್ಕದಲ್ಲೇ ದ್ರೌಪದಿಯ ದೇವಾ ಲಯವೂ ಇದೆ. ಎಲ್ಲಮ್ಮ ದೇವಾಲಯದ ವಿಶೇಷ ಪೂಜೆ ಮಂಗಳವಾರ ಮತ್ತು ಶುಕ್ರವಾರ ನಡೆಯುತ್ತದೆ. ಅಂದು ಸಂಜೆ ಸುಮಾರು 6-30ರ ಸಮಯಕ್ಕೆ ದೇವರು ಮೇಲೆ ಬರುವುದನ್ನು ಗಮನಿಸಬಹುದು. ಎಲ್ಲಮ್ಮ ದೇವಸ್ಥಾನದ ಸುತ್ತಲೂ ಮಹಿಳೆಯರು ಮೈದುಂಬಿ ಕುಣಿಯುವ ಪರಿಪಾಠ ಇಲ್ಲಿಯೂ ಆಶ್ಚರ್ಯ ಉಂಟು ಮಾಡುತ್ತದೆ. ಬಹುತೇಕ ತಮಿಳರೇ ವಾಸಿಸುವ ಈ ಪ್ರದೇಶದಲ್ಲಿ ಅಮ್ಮ ಮೇಲೆ ಬಂದರೆ ಅಂಥವರ ಬಗೆಗೆ ವಿಶೇಷ ಗೌರವ ತೋರಿಸುವುದನ್ನು ಇಂದಿಗೂ ನೋಡಬಹು ದಾಗಿದೆ.

ಈ ದೇವಸ್ಥಾನಕ್ಕೆ ಅರ್ಧ ಕಿ.ಮೀ. ದೂರದಲ್ಲಿ ಬೈರವನ ದೇವಾಲಯವಿದೆ. ಇದು ಸೆಂಟ್ರಲ್ ಟಾಕೀಸಿನ ಎದುರು, ಕೆ.ಆರ್. ಮಿಲ್ಲಿನ ಹಿಂಭಾಗದಲ್ಲಿದೆ. ಇಲ್ಲಿ ನಾಗರ ವಿಗ್ರಹಗಳೂ ಹಲವಾರು ಇದ್ದು, ಪ್ರತಿ ಭಾನುವಾರ ದೂರದೂರುಗಳವರೂ ಸೇರಿದಂತೆ ಬೆಂಗಳೂರಿನ ಹಲವಾರು ಭಾಗಗಳಿಂದ ಭಕ್ತರು ಬರುತ್ತಾರೆ. ಕೋಳಿ, ಕುರಿ ಯನ್ನು ಈ ದೇವಾಲಯದ ಎದುರು ಕತ್ತರಿಸಿ, ಅಲ್ಲಿಯೇ ಅಡುಗೆ ಮಾಡಿ ದೇವರಿಗೆ ನೈವೇದ್ಯ ಮಾಡುವ ಪದ್ಧತಿ ಇಂದಿಗೂ ನಡೆಯುತ್ತಿದೆ. ಎಂತಹ ಬಲವಾದ ಮರಿ ಯಾದರೂ ಅದರ ಮಾಂಸವನ್ನಾಗಲಿ, ಅದರಿಂದ ತಯಾರಿಸಿದ ಅಡಿಗೆಯನ್ನಾಗಲಿ ಮನೆಗೆ ತೆಗೆದುಕೊಂಡು ಹೋಗುವುದಿಲ್ಲ. ಅಲ್ಲಿಯೇ ಅವರವರ ಮಟ್ಟಿಗೆ ಅನ್ನದಾನ ಮಾಡುವ ಪದ್ಧತಿಯನ್ನು ಜನಜಂಗುಳಿ ಇರುವ ಬೆಂಗಳೂರಲ್ಲೇ ಆಚರಿಸುವುದನ್ನು ಕಂಡು ಚಕಿತನಾದದ್ದೂ ಉಂಟು. ಇಂತಹದೇ ಧಾರ್ಮಿಕ ವಿಧಿ ಮಿನರ್ವಮಿಲ್ಲಿನ ಒಳಗಡೆ, ಬೆಳೆದಿರುವ ಮರಗಳ ನೆರಳಿನಲ್ಲಿ, ಕಲ್ಲುಗಳನ್ನು ಇಟ್ಟು, ಹಸಿರು ಚಪ್ಪರ ಹಾಕಿ, ಮರಿ ಹೊಡೆದು ಹರಿಸೇವೆ ಮಾಡುವ ಪದ್ಧತಿ ಇಂದಿಗೂ ನಡೆಯುತ್ತಿದೆ. ಇದಕ್ಕೆ ಹಳ್ಳಿಗಳ ಕಡೆಯಿಂದ ಬಂದವರು ಹೀಗೆ ಮಾಡಬಹುದೆಂದು ವಾದಿಸಬಹುದು. ನಾನು ಇವ ರೊಂದಿಗೆ ಮಾತಾಡಿದಾಗ ಇವರೆಲ್ಲ ಮೂಲ ಬೆಂಗಳೂರಿನವರೆ ಆಗಿರುತ್ತಾರೆ ಅನ್ನುವುದು ತಿಳಿದು ಇವರ ಧಾರ್ಮಿಕ ಒಲವನ್ನು ಕಂಡು ಆಶ್ಚರ್ಯವಾಗಿದೆ.

ಇವರ ಈ ಧಾರ್ಮಿಕ ಆಚರಣೆ ಮುತ್ತೈದೆಮ್ಮ ದಾಸಯ್ಯನಿಗೆ ಇಕ್ಕುವುದು ಎಂದು ಕರೆಯುತ್ತಾರೆ. ಹಳ್ಳಿಗಳಲ್ಲಿ ಮನೆಗಳಲ್ಲೇ ದಾಸಯ್ಯನಿಗಿಕ್ಕಿಸುವ ಶಾಸ್ತ್ರ ಮಾಡಿದರೆ

ಪಟ್ಟಣದವರಿಗೆ ಪಕ್ಕದ ಮನೆಗಳವರ ಮುಖಾಂತರದಿಂದ ಈ ರೀತಿಯ ಆಚರಣೆಯನ್ನು ರೂಢಿಸಿ ಬೆಳೆಸಿಕೊಂಡಿರಬೇಕು. ಇದು ಗ್ರಾಮೀಣರ ಹೊರಜೀವನ್ನು ನೆನಪಿಗೆ ತರುತ್ತದೆ ಅನ್ನುವುದನ್ನು ಮರೆಯುವಂತಿಲ್ಲ.

ಹಬ್ಬ ಹರಿದಿನಗಳ ಸಂದರ್ಭದಲ್ಲಿ ಪಟ್ಟಣಿಗರದು ಹಳ್ಳಿಗರಿಗಿಂತ ಕೊಂಚ ಮುಂದೆ ಅನ್ನುವುದು ಬೇರೆಯಾಗಿಯೇ ಹೇಳಬೇಕಾಗಿಲ್ಲ. ಹಬ್ಬಹಬ್ಬಕ್ಕೂ ಹೊಸಬಟ್ಟೆ ಧರಿಸಿ, ಕೈಗೆ ಅರಿಶಿಣದ ದಾರದಿಂದ 'ಹೂ' ಕಟ್ಟಿಕೊಂಡು ಅಡ್ಡಾಡುವ ರೀತಿ, ಹಸು ಮುಂತಾದ ಪ್ರಾಣಿಗಳನ್ನು ಅಂದು ಪೂಜಿಸಿ ಆಹಾರ ನೀಡುವ ರೀತಿ ಹಳ್ಳಿಗರಿಗಿಂತ ತುಸು ಭಿನ್ನವಾಗಿ, ಅವರಿಗಿಂತ ಸಂಪ್ರದಾಯದ ಅತಿರೇಕತೆಯನ್ನು ತಲುಪಿರುವುದನ್ನು ನಾನು ಇಲ್ಲಿಗೆ ಬಂದ ಮೇಲೆಯೇ ಅರಿತದ್ದು. ಹಬ್ಬವೆಂದರೆ ಒಂದಿಷ್ಟು ಹೊಸ ಊಟ, ಬಟ್ಟೆ ಬೇರೇನೂ ಕಾಣದ ನಾನು ಇಲ್ಲಿ ಧರಿಸುವ ಸಾಂಕೇತಿಕ ಚಿಹ್ನೆಗಳನ್ನು ಪರಿಚಯ ಮಾಡಿಕೊಳ್ಳಲು ವಾರಗಟ್ಟಲೇ ಬೇಕಾಯಿತು.

ಮನೆಯಿಂದ ಹೊರಡುವ ಹೆಣ್ಣುಮಗು ತಲೆಯ ಮೇಲೆ ಅಕ್ಕಿಕಾಳು ಹಾಕದೇ ಹೊರಡುವುದಿಲ್ಲ. ಇದೊಂದು ರಕ್ಷಾಬಲವೆಂದು ಅವರು ನಂಬುತ್ತಾರೆ. ಈಗ ಅವರಿಗೆ ಸಂಪ್ರದಾಯ, ವೈಜ್ಞಾನಿಕತೆ ಭಿನ್ನವಾಗಿ ಕಾಣುವುದಿಲ್ಲ. ಅಲ್ಲವೆ? ಹೊಸದಾಗಿ ಮನೆ ಕಟ್ಟಿಸಿದರೆ ಅದಕ್ಕೆ ಪ್ರವೇಶ ಮಾಡುವುದಕ್ಕೆ ಮುಂಚೆ ಹಸುವನ್ನು ಒಳಗೆ ಕರೆದುಕೊಂಡು ಬರುವುದು ವಾಡಿಕೆ ಅಷ್ಟೆ ಅಲ್ಲ ಹೊಸ ಮನೆಗೆ ಬರುವಾಗ ಆಚರಿಸುವ ಧಾರ್ಮಿಕ ವಿಧಾನಗಳು ಸಂಪ್ರದಾಯದ ಸವಿಯನ್ನು ಸದಾ ಪ್ರದರ್ಶಿಸುತ್ತಿರುತ್ತದೆ. ಮನೆಯ ಮೇಲೆ ಗೊಂಬೆಗಳನ್ನಿಡುವುದು, ಮನೆಯ ಗೋಡೆಗೆ ಓಂ ಎಂದು ಬರೆಯುವುದು, ಕೆಲವರು ನವಗ್ರಹ ದಾನ, ಕತೆ ಹೇಳಿಸುವುದು, ಇನ್ನು ಕೆಲವರು ಸ್ವಾಮಿಗಳನ್ನು ಒಳಗೆ ಕರೆದುಕೊಂಡು ಬಂದು ಪಾದಪೂಜೆ ಮಾಡುವುದು ಇವೆಲ್ಲ ತಪ್ಪಿಲ್ಲ.

ಇಂದು ಪಟ್ಟಣದ ಸಾಮಾನ್ಯ ಮನೆಯಾದರೂ ಮನೆಯ ಮುಂದೆ ತುಳಸಿಗಿಡ ಇದ್ದೇ ಇರುತ್ತದೆ. ಬೆಳಗಾದ ಕೂಡಲೆ ತುಳಸಿ ಪೂಜೆ ನೇಮವಾಗಿ ಪರಿಗಣಿಸಿದೆ. ಬ್ರಾಹ್ಮಣ, ಶೂದ್ರ ಇವರಿಬ್ಬರ ಅಂತರ ಹಳ್ಳಿಗಳಲ್ಲಿ ಹೆಚ್ಚು ಕಂಡುಬಂದರೂ ಸಾಮಾನ್ಯವಾಗಿ ಬ್ರಾಹ್ಮಣರೇ ಹೆಚ್ಚು ಪೂಜಿಸುವ ತುಳಸಿಕಟ್ಟೆ ಬೆಂಗಳೂರಿನಲ್ಲಿ ಶೂದ್ರರನ್ನೂ ಇದರಿಂದ ಹೊರತುಪಡಿಸಿಲ್ಲ.

ಪಿತೃಪಕ್ಷವನ್ನು ಆಚರಿಸುವ ಪರಿಪಾಠ ನಗರದಿಂದ ದೂರವಾಗಿಲ್ಲ. ಅತ್ಯಂತ ನಿಯಮಬದ್ಧರಾಗಿ ಹಿರಿಯರನ್ನು ಪೂಜಿಸುವ, ಅವರು ಬಳಸುತ್ತಿದ್ದ ಎಲ್ಲ ಆಹಾರವನ್ನು ಎದುರುಗೋಡೆಯಲ್ಲಿ ಶೃಂಗರಿಸಿದ ಹಿರಿಯರ ಛಾಯಾಚಿತ್ರದ ಮುಂದ ಇಡುವುದು

ತಪ್ಪುವುದಿಲ್ಲ. ಈ ಬಗೆಗೆ ನನ್ನ ಸ್ನೇಹಿತರೊಬ್ಬರು ಇದು ಜನಪದ ಅಲ್ಲ. ಏಕೆಂದರೆ ಇದನ್ನು ಪೂಜಿಸುವಾಗ ಪುಸ್ತಕವನ್ನು ನೋಡಿಕೊಂಡು ಅವರಂತೆ ಪೂಜಿಸುವರು ಎಂದು ಹೇಳಿದರು. ಆದರೆ ಮಂತ್ರ ಪುಸ್ತಕದದ್ದು ಇರಬಹುದು. ಅನುಕರಿಸುವ ವಿಧಾನ ಭಾವಚಿತ್ರವನ್ನು ಅಲಂಕರಿಸುವ ಬಗೆ ಇವೆಲ್ಲ ಅನುಕರಣೆಯಾಗಿ ನಂಬಿಕೆಯಿಂದಲೇ ಈ ರೀತಿ ನಡೆದುಕೊಳ್ಳುತ್ತಾರೆ ಅನ್ನುವುದನ್ನು ತಳ್ಳಿಹಾಕುವಂತಿಲ್ಲ. ಸಂಪ್ರದಾಯ ಇಲ್ಲಿ ಬಲವಾಗಿ ಕೆಲಸ ಮಾಡುತ್ತಿರುತ್ತದೆ ಅಂದಾಗ ಇದು ಜನಪದದ ವ್ಯಾಪ್ತಿಯಲ್ಲೇ ಬರು ವುದರಿಂದ ಇದು ಜನಪದ ಅಲ್ಲ ಎಂದು ತಳ್ಳಿಹಾಕುವುದೇಗೆ? ಜಾನಪದ, ಗೀತೆ, ನಾಟಕ, ನಂಬಿಕೆ, ಗಾದೆ, ಮೊದಲಾದ ಹಲವಾರು ಪ್ರಕಾರಗಳು ಇಂದು ಸಂಗ್ರಹವಾಗಿ ಪುಸ್ತಕದಲ್ಲೇ ದೊರೆಯುವುದು. ಅಂದಾಗ ಇವೆಲ್ಲ ಜನಪದ ಆಗಲಾರವೆ?

'ನಾಮಕರಣ' ಮಗು ಹುಟ್ಟಿದ ಐದು ದಿನದಿಂದ ಮೂರು ತಿಂಗಳ ಒಳಗೆ ಸಾಮಾನ್ಯವಾಗಿ ಈ ನಾಮಕರಣದ ಶಾಸ್ತ್ರ ಇರುತ್ತದೆ. ಅಂದು ಅವರವರ ಅರ್ಹತೆಗೆ ಅನುಗುಣವಾಗಿ ಊಟವನ್ನು ಏರ್ಪಡಿಸುತ್ತಾರೆ. ಆದರೆ ಪಟ್ಟಣಿಗರೇನು ಕಡಿಮೆಯೆ? ಇಲ್ಲ ಹಳ್ಳಿಗರಿಗಿಂತ ತುಸು ಮುಂದೆ. ತೊಟ್ಟಿಲು ಶಾಸ್ತ್ರವನ್ನು ಕಟ್ಟುನಿಟ್ಟಾಗಿ ಪಾಲಿಸು ತ್ತಾರೆ. ಅಂತೆಯೇ ತೊಟ್ಟಿಲಿಗೆ ಮಾಡುವ ಅಲಂಕಾರ, ಮಗುವಿಗೆ ಹೆಸರಿಡುವಾಗ ಮಾಡುವ ಹಲವಾರು ಶಾಸ್ತ್ರಗಳು, ಇವೆಲ್ಲ ಇವರ ದಟ್ಟವಾದ ಸಂಪ್ರದಾಯದ ಪ್ರತೀಕವಾಗಿದೆ.

ಇವರು ಸಂಪ್ರದಾಯದಲ್ಲಿ ಎಷ್ಟು ಮುಳುಗಿದ್ದಾರೆಂದರೆ ದೂರದ ದೇವಾಲಯಕ್ಕೆ ಹೊರಡಲು ಸಿದ್ಧವಾಗಿ ಬೆಳಿಗ್ಗೆ ಆ ಮನೆಯಲ್ಲಿ ಯಾರೋ ಹೊರಗಡೆಯಾದರು ಅನ್ನುವ ಒಂದು ಕಾರಣದಿಂದ ಅಂದಿನ ಪ್ರವಾಸವನ್ನೇ ಮುಂದೂಡಿದ ಪ್ರಸಂಗವನ್ನು ನಾನು ಹತ್ತಿರದಿಂದ ಅರಿತಿದ್ದೇನೆ. ಅಷ್ಟೇ ಅಲ್ಲ ರಜತಾದಿ ಸೂತಕಗಳಲ್ಲಿ ಹೆಣ್ಣು ಮೂರು ದಿನಗಳ ತನಕ ಮನೆಯ ಇತರ ಕುಟುಂಬದ ಸಹಪಾಠಿಗಳೊಂದಿಗೆ ಬೆರೆಯುವಂತಿಲ್ಲ. ಅವಳಿಗೆ ಅಂದು ಶೂದ್ರತನದ ಗ್ರಹ ಬಡಿಯುವುದು ಶಾಪವಾಗಿದೆ ಅನ್ನುವುದನ್ನು ನಾಗರೀಕರಾದ ಪಟ್ಟಣಿಗರೇಕೆ ತಿಳಿಯುವದಿಲ್ಲ? ನಾಗರಿಕತೆ, ವೈಚಾರಿಕತೆ, ಪ್ರತಿಗತಿ ಎಂದೆಲ್ಲ ವೇದಿಕೆಯ ಮೇಲೆ ಬಡಬಡಾಯಿಸುವ ಇದೇ ಮಂದಿ ಮನೆಗೆ ಕಾಲು ಸೋಕಿದ ಕೂಡಲೆ ಮಡಿ ಮೈಲಿಗೆಯ ಧೂಳು ಅರಿವಾಗುವುದು ಇವರ ಸಂಪ್ರದಾಯಕ್ಕೆ ಹಿಡಿದ ಕನ್ನಡಿ ಅಲ್ಲವೆ? ಗ್ರಹಣದ ಬಗೆಗೆ ಅರಿವೇ ಇಲ್ಲದ ಗ್ರಾಮೀಣರು ತಮ್ಮ ಕಾಯಕದಲ್ಲಿ ತಲ್ಲೀನರಾಗಿ ಬದುಕಿನಲ್ಲಿ ದೇವರನ್ನು ಕಾಣುವ ರೈತರು ಅಂದು ಸ್ನಾನ ಮಾಡುವು ದಂತಿರಲಿ, ಗ್ರಹಣ ಹಿಡಿದಿದೆ ಈಗ ಊಟ ಮಾಡಬಾರದು ಅಂದು ಕೂಡ ಇವರು ಲೆಕ್ಕ ಹಾಕುವುದಿಲ್ಲ. ನಗರದವರು ಗ್ರಹಣ ಹಿಡಿದು ಬಿಟ್ಟ ಮೇಲೆ ಸ್ನಾನ ಮಾಡಿಕೊಂಡೇ

ಊಟ - ತಿಂಡಿ ಮಾಡುವುದು. ಇದು ಅವರ ನಾಗರೀಕತೆಯು ಹಿಂದುಳಿದಿರುವುದಕ್ಕೆ ನಿದರ್ಶನವೆ ?

ನಗರಗಳಲ್ಲಿ ಭವಿಷ್ಯ ಹೇಳುವವರು ಬೀದಿ ಬೀದಿಗೂ ಕಂಡುಬರುತ್ತಾರೆ. ವೈಭವದ ಉಡುಗೆ ತೊಡಿಗೆಯ ಆಸಾಮಿಗಳು ಈ ಜೋತಿಷ್ಯಕಾರರ ಮುಂದೆ ಸಾಲು ಗಟ್ಟಿ ನಿಂತಿರುವುದನ್ನು ಗಮನಿಸಿದಾಗ ತಾವು ನಂಬಿದ ಸಂಪ್ರದಾಯವನ್ನು ಎಷ್ಟು ಚೆನ್ನಾಗಿ ಉಳಿಸಿಕೊಳ್ಳುತ್ತಾರೆ ಅನ್ನುವುದನ್ನು ಸ್ಥಿರಪಡಿಸುತ್ತಿರುತ್ತಾರೆ.

ಕ್ಷೌರ ಮಾಡಿಸಿಕೊಂಡು ನೀರುಮನೆಯಲ್ಲಿ ತಾನಾಗಿಯೇ ಸ್ನಾನ ಮಾಡುವಂತಿಲ್ಲ. ಮೊದಲು ಮೂರ್ನಾಲ್ಕು ಚೆಂಬನ್ನು ಬೇರೆಯವರು ಹಾಕಿದ ಮೇಲೆಯೇ ಆತ ಬಚ್ಚಲ ಪಾತ್ರೆಗಳನ್ನು ಮುಟ್ಟುವುದು. ಇದೆಲ್ಲ ಸಂಪ್ರದಾಯ ಈ ನಾಗರೀಕತೆಯ ಮಹಿಮರಿಗೆ ಅರಿವಾಗಿರಲಿಕ್ಕಿಲ್ಲ.

ಇನ್ನು ಲಿಖಿತ ಜಾನಪದದ ಕಡೆ ಬಂದರೆ ಆಶ್ಚರ್ಯ ಮೂಡಿಸುವಷ್ಟು ಭಾಷೆಯ ಅಭಿವ್ಯಕ್ತಿ ಗೋಡೆ - ಬಸ್ಸು, ಆಟೋರಿಕ್ಷಗಳ ಮೇಲೆ ದಾಖಲುಪಡಿಸಿರುತ್ತಾರೆ.

ಮನುಷ್ಯ ಕೊಟ್ಟಿದ್ದು ಮನೆತನಕ
ದೇವರು ಕೊಟ್ಟಿದ್ದು ಕೊನೆತನಕ.

ಇಲ್ಲಿ ದೇವರ ಮಹತ್ವವನ್ನು ಈ ಮೂಲಕ ಅಭಿವ್ಯಕ್ತಿಸಿದರೆ ಇನ್ನು ಕೆಲವರು ತಾಯಿಯ ಮಹತ್ವವನ್ನು ಹೀಗೆ ದಾಖಲುಪಡಿಸುತ್ತಾರೆ.

ಮುತ್ತು ಕೊಟ್ಟ ಹೆಂಡತಿಯಿಂದ
ತುತ್ತು ಕೊಟ್ಟ ತಾಯಿಯನ್ನು ಮರೆಯಬೇಡ.

ಮುಂತಾಗಿ ಬರೆದಿರುತ್ತಾರೆ. ಇಲ್ಲಿಯೂ ಜನಪದ ಶೈಲಿ, ಭಾಷಾ ಸೊಗಡು, ದೇಶೀ ಯತೆಯೊಂದಿಗೆ ಪ್ರಾಸಬದ್ಧವಾಗಿರುವುದರಿಂದ ಮನಸ್ಸಿನಲ್ಲಿ ಬಹಳ ಕಾಲ ನಿಲ್ಲುವಂತವು ಗಳಾಗಿವೆ. ಗ್ರಾಮೀಣ ಆಚಾರ ನಂಬಿಕೆ - ರೂಢಿಗಳು ಪಟ್ಟಣಗಳಲ್ಲೂ ಕಂಡು ಬರು ತ್ತವೆ. ಒಟ್ಟಾರೆ ಜಾನಪದ ಸಾಯುವುದಿಲ್ಲ, ಒಂದಲ್ಲ ಒಂದು ವಿಧದಲ್ಲಿ ಅದು ಮುಂದುವರಿದುಕೊಂಡು ಹೋಗುತ್ತದೆ ಎನ್ನುವುದನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳ ಬೇಕಾಗುತ್ತದೆ.

ಗ್ರಂಥಋಣಿ

'ಜಾನಪದ ಸ್ವರೂಪ' - ಡಾ. ಹಾ.ಮಾ. ನಾಯಕ.

'ಲಿಖಿತ ಜಾನಪದ' - ರಂಗಾರೆಡ್ಡಿ ಕೋಡಿರಾಂಪುರ.

'ದಖನಿ' ಭಾಷೆಯ 'ಚಕ್ಕಿನಾಮೆ' (ಬೀಸುಕಲ್ಲಿನ ಹಾಡುಗಳು) - ಒಂದು ಲಘುಟಿಪ್ಪಣಿ

ಡಾ. ದೇವೇಂದ್ರಕುಮಾರ ಸಿ. ಹಕಾರಿ

ಜಾನಪದ ಒಂದು ವಿಸ್ಮಯಕಾರಿ ಪ್ರಪಂಚ. ಅದರ ಸಾಹಿತ್ಯ ಮತ್ತು ಸಾಹಿತ್ಯೇತರ ಪ್ರಕಾರಗಳು ಸೇರ ಜನಸಮೂಹದ ಹೃದಯಕ್ಕೆ ಸಂವಹನಗೊಳ್ಳುತ್ತವೆ. ಭಾವನೆಗಳನ್ನು ಸ್ಪರ್ಶಿಸುತ್ತವೆ. ಏಕೆಂದರೆ ಇದು ಜನಪದರ ಸೃಷ್ಟಿ. ಜನಪದರ ಒಂದು ಕ್ರಿಯಾಮೂಲ ನೆಲೆಯಲ್ಲಿ ಹುಟ್ಟಿದ ಜಾನಪವ ಮತ್ತೆ ಮತ್ತೆ ಅದೇ ಜನಪದರಿಂದ ಚಲಾವಣೆಯಲ್ಲಿ ಬರುತ್ತದೆ. ಜನಪದ ಬದುಕಿನ ಸಮಗ್ರ ವಲಯ ಗಳಲ್ಲಿ ಪ್ರಸರಣಗೊಳ್ಳುತ್ತದೆ. ಇದು ಜನಪದರ ವಿವಿಧ ಅನುಭವ ಅನಿಸಿಕೆಗಳ ಸಂವೇದನೆಗಳ ಅಪರಿಮಿತ ಆಕರ; ಅಪೂರ್ವ ಭಂಡಾರ. ಭಾರತವನ್ನು ಅನೇಕ ಜನಾಂಗಗಳ ಕರಗುಮಡಿಕೆ ಎಂದು ಕರೆಯಲಾಗುತ್ತದೆ. ಅದರಂತೆ ಅದು ವಿವಿಧ ಸಂಸ್ಕೃತಿಗಳ ಸಂಗಮವೂ ನಿಜ. ಇಂದು ಜಾನಪದವನ್ನು ಈ ಬೆಳಕಿನಲ್ಲಿ ಅಧ್ಯಯನ ಮಾಡಲಾಗುತ್ತದೆ.

ಭಾರತ, ಅಗಣಿತ ಜನಾಂಗ ಮತ್ತು ಭಾಷೆಗಳ ತವರು. ಯಾವುದೇ ಪ್ರದೇಶದ ಭಾಷೆಯನ್ನು ಗಮನಿಸಿದರೂ ಅದಕ್ಕೆ ತನ್ನದೇ ಆದ ಮೌಖಿಕ ಪರಂಪರೆ ಇದೆ ಮತ್ತೂ ಅದು ಆಯಾ ಜನಪದ ಸಮುದಾಯಗಳ ಅಗಣಿತ ಜೀವನಾನುಭವ ಗಳ ಉಗ್ರಾಣವಾಗಿರುವುದು ಕೂಡ ಮೇಲುನೋಟಕ್ಕೇ ಸಾಬೀತಾಗುತ್ತದೆ. ಉರ್ದು ಭಾಷೆಯ ಒಂದು ಉಪಭಾಷೆ ದಖನಿ. ಒಂದು ಹಂತದಲ್ಲಿ ಕನ್ನಡದ ಸೀಮಿತ ಗುಂಪಿನ ಜನಪದರು ಈ ದಖನಿ ಭಾಷೆಯನ್ನು ವಿವಿಧ ರಾಜಕೀಯ ಇತ್ಯಾದಿ ಕಾರಣಗಳಿಂದಾಗಿ

ಮತ್ತು ಸಾಂಸ್ಕೃತಿಕ ಆದಾನಪ್ರದಾನಗಳ ಪ್ರಕ್ರಿಯೆಯಿಂದಾಗಿ ತಮ್ಮ ಮೌಖಿಕ ಪರಂಪರೆಯಲ್ಲಿ ಅಳವಡಿಸಿಕೊಂಡರು. ಅದರಲ್ಲಿ ಕನ್ನಡ ಪದ ನುಡಿಗಟ್ಟುಗಳನ್ನು ಆಡುವ ರೀತಿ ಶೈಲಿಗಳನ್ನು ಲೀಲಾಜಾಲವಾಗಿ ದಖನಿ ಭಾಷೆಯಲ್ಲಿ ಬಳಸಿಕೊಂಡರು.[1] ದಖನಿ ಭಾಷೆಯ ಮೌಖಿಕ ಪರಂಪರೆಯ ಸಾಹಿತ್ಯ ಈಗ ಕಣ್ಮರೆಯಾಗಿದೆಯೆಂದು ತೋರುತ್ತಿದೆ. ಈಗ 3 ದಶಕಗಳ ಹಿಂದೆ ಗುಲಬರ್ಗಾ, ಬೀದರ, ರಾಯಚೂರಿನ ಕೆಲವು ಭಾಗಗಳಲ್ಲಿ ಕೇಳಿಬರುತ್ತಿದ್ದ ದಖನಿ ಹಾಡು, ಗಾದೆ ಇತ್ಯಾದಿಗಳು, ಈಗ ವಿರಳ. ಅಂಥವುಗಳಲ್ಲಿ 'ಚಕ್ಕಿನಾಮೆ' ಬೀಸುಕಲ್ಲಿನ ಹಾಡು ಒಂದು ವಿರಳ ಪ್ರಕಾರ.

ಕನ್ನಡ ಜನಪದ ಗೀತೆಗಳಲ್ಲಿ ಬೀಸುಕಲ್ಲಿನ ಹಾಡುಗಳ ಪರಂಪರೆ ಮೊನ್ನೆ ಮೊನ್ನೆಯವರೆಗೆ ಒಂದು ಬತ್ತದ ತೊರೆಯಾಗಿ ಸಾಗಿಬಂದಿತು. ಒಂದು ವೇಳೆ ಹಲಸಂಗಿ ಗೆಳೆಯರ ಗುಂಪು ಈ ಹಾಡುಗಳ ಸೊಬಗಿಗೆ ಮನಸೋತು, 1930ರ ಸುಮಾರು 'ಗರತಿಯಹಾಡು' ಉನ್ನತ ಸಂಕಲನ ತರದೆಹೋಗಿದ್ದರೆ ಇಂದು ಬಹುಶಃ ಅವು ಕೂಡ ನಾಪತ್ತೆಯಾಗುತ್ತಿದ್ದುವೆಂದು ತೋರುತ್ತದೆ. ಅದರಂತೆ ಈ 'ದಖನಿ' ಹಾಡು ಇತ್ಯಾದಿ ಪ್ರಕಾರಗಳ ಸಂಗ್ರಹವಾಗಲಿಲ್ಲ. ಅವು ಚಲಾವಣೆಯಲ್ಲಿದ್ದ ಮೌಖಿಕ ಪರಂಪರೆಯ ಜನರಿಗೆ ಇವುಗಳನ್ನು ಒಂದೆಡೆ ಸಂಗ್ರಹಿಸುವ ಕಲ್ಪನೆ ಕೂಡ ಬರಲಿಲ್ಲ. 1957ರ ಸುಮಾರು ಗುಲಬರ್ಗಾ ಪ್ರದೇಶದಲ್ಲಿ ಕೇಳಿದ್ದ ಕೆಲವು ಹಾಡುಗಳನ್ನು[2] ಆಧರಿಸಿ ಈ ಟಿಪ್ಪಣಿ ರೂಪಗೊಂಡಿದೆ.

'ದಖನಿ' ಭಾಷೆಯ 'ಚಕ್ಕಿನಾಮೆ' ಮತ್ತು ಕನ್ನಡದ ಬೀಸುಕಲ್ಲಿನ ಹಾಡುಗಳ ಪರಸ್ಪರ ಹೋಲಿಕೆ ಮತ್ತು ರಚನೆಯ ವಸ್ತುಗಳು ಜನಪದರ ಮಾನಸಿಕ ಸ್ಪಂದನಗಳ ಏಕರೂಪತೆ ಮತ್ತು ಸಂವೇದನೆಗಳ ಸಾಮ್ಯರೂಪಕ್ಕೆ ಮಾದರಿಯಾಗಿವೆ.

---

1. 'ದಖನಿ' ಭಾಷೆ, ಉರ್ದು ಭಾಷೆ, ಸಾಹಿತ್ಯ ಚರಿತ್ರೆಗಳ ಒಂದು ಪ್ರತ್ಯೇಕ ವಿವೇಚನೆಯ ವಿಷಯವಾಗಿರುವುದರಿಂದ ಅದನ್ನು ಇಲ್ಲಿ ಎತ್ತಿಕೊಂಡಿಲ್ಲ.

2. 1957ರ ಸುಮಾರು ಈ ಹಾಡುಗಳನ್ನು ಹೇಳಿದ್ದ ವಕ್ತೃಗಳು ಅಂದು ಅತ್ತಾರ್ ಕಾಂಪೌಂಡದ ಗುಡಿಸಲುಗಳಲ್ಲಿದ್ದು ಅವರಿವರ ಮನೆಗೆಲಸ ಮಾಡಿ ಜೀವಿಸುತ್ತಿದ್ದ ಮಾಬೂಬಿ, ಚಂದಮ್ಮ, ಅಮೀನಾಬಿ ಮತ್ತು ಸಬೀನಾ ಮುಂತಾದವರನ್ನು 1979ರ ಸುಮಾರು ಬಾಗಲಕೋಟೆಯ ಕಾಲೇಜಿನಲ್ಲಿ ಉರ್ದು ಅಧ್ಯಾಪಕ ಜನಾಬ್ ಮೋಮಿನ್ ಅವರಿಂದ ಕೆಲವು ಈ ಬಗೆಯ ಹಾಡು ಕೇಳಿದೆ. ಈಗ ಬೀದರ ಕಾಲೇಜೊಂದರ ಪ್ರಾಚಾರ್ಯ ಮತ್ತು ಉಸ್ಮಾನಿಯಾ ವಿಶ್ವವಿದ್ಯಾಲಯದ ನನ್ನ ಹಳೆಯ ಮಿತ್ರ ಪ್ರಾ. ದೇವೇಂದ್ರಕಮಲ್ (ಉರ್ದುಕವಿ) ಅವರಲ್ಲಿ ಕೂಡ ದಖನಿಯ ಕೆಲವು ಸಂಗ್ರಹಗಳಿವೆ. ಈ ಹಿನ್ನೆಲೆಯ ಕ್ಷೇತ್ರಕಾರ್ಯ ಇಂದಿಗೂ ಕನ್ನೆನೆಲ.

'ವುಂಕ್ಕೀಗಿ ಪುದಲುs ಮಾದೇವ್ರಾ ನೆನದೇನ' ಎನ್ನುವುದು ಬೀಸುಕಲ್ಲಿನ ಹಾಡಿನ ತ್ರಿಪದಿಯೊಂದರ ಮೊದಲ ಸಾಲು.

ಬೀಸುವ ಕಾರ್ಯ ಆರಂಭಮಾಡುತ್ತಿದ್ದಂತೆ ಮೊದಲನೆಯ (ಧಾನ್ಯದ) ವುಂಕ್ಕು ಹಾಕುತ್ತಿದ್ದಂತೆ ದೇವರನ್ನು ನೆನೆಸುತ್ತಾಳೆ ಒಬ್ಬ ಗರತಿ, ಅದರ ಪೂರ್ತಿ ಪಾಠ ಹೀಗಿದೆ :

'ವುಂಕ್ಕೀಗಿ ಪುದಲುs ಮಾದೇವ್ರು ನೆನದೇನ
ಉಕ್ಕಿ ಬಂದೀತ ಹಿರಿಹೊಳಿಯು ಸುಳಿಯಾಗ
ಸಿಕ್ಕ ಬಂದೀದ ಹುದವಾಗ'

'ಚಕ್ಕಿನಾವು' ದ್ವಿಪದಿಗಳು. ಒಂದು ಚಕ್ಕಿನಾಮ ಹೀಗಿದೆ :

'ಬಿಸ್ಮಿಲ್ಲಾ ಜೋಲ್‌ಕೊ ಪೈಲಾ ಪುಕ್ಕಾಭಯಿಂಜೀ
ಬರಕವ್ ದ್ಯೊ ಇಲಾಹಿ ಮೇರಿ ಸಾಂಯಿಕಿ ಕಸೂಯಿಂಜಿ'

'ಬಿಸ್ಮಿಲ್ಲಾ ಎಂದು ಮೊದಲನೆಯ (ಧಾನ್ಯದ) ವುಂಕ್ಕ ಹಾಕಿದ್ದೇನೆ
ದೇವರೆ, ಕರುಣೆದೋರು (ಇದು) ನನ್ನ ಗಂಡನ ದುಡಿಮೆ.'

'ವುಂಕ್ಕಿ'ಗೆ ದೇವರನ್ನು ನೆನೆದ ಈ ಗರತಿ ದೇವರ ಕರುಣೆಗಾಗಿ ಪ್ರಾರ್ಥಿಸುತ್ತಾಳೆ. ತಾನು ಹಾಕುವ ಧಾನ್ಯ ತನ್ನ ಗಂಡನ ಬೆವರಿನ ಫಲ, ಶ್ರಮದ ಗಳಿಕೆ. ಆದ್ದರಿಂದ ದೇವರು ಕರುಣಿಸಲಿ; ಹುಲುಸು (ಅಭಿವೃದ್ಧಿ) ನೀಡಲಿ ಶ್ರಮದ ಗಳಿಕೆ ದೇವರಿಗೆ ಮೆಚ್ಚುಗೆ. ಖಂಡಿತವಾಗಿ ಆತನ ದಯೆ ದೊರೆಯುತ್ತದೆ. ಅದು ಆಕೆಯ ಆತ್ಮವಿಶ್ವಾಸ ಮತ್ತು ಪ್ರಾರ್ಥನೆಯ ಆಶಯ.

ಗಂಡನ ಸ್ಮರಣೆ ; ಹತ್ತಾರ ಬಗೆಯ ನೆನಪುಗಳು - ಒಲವು-ಗೆಲವು
ಪ್ರೀತಿ ಸರಸ ಉಲ್ಲಾಸ ಒಂದೊಂದೂ ಮೊಗ್ಗು. ಆ ಮೊಗ್ಗುಗಳನ್ನು
ಆಯ್ದು ಹಾರ ಕಟ್ಟುತ್ತಾಳೆ. ಬಟ್ಟೆನಿಂದ ದಾರ ಜಾರುತ್ತದೆ,
ಏನು ಮಾಡಬೇಕು ? ಹ್ಯಾಗೆ ಕಟ್ಟಬೇಕು ?

'ಯಾದಾಂ ಕಿ ಕಲಿಯಾ ಚುಕೂಂ ಹಾರ ಬನೂ ಜಿ
ಬೊಟ್ಟಾಂಸೆ ಧಾಗಾ ಫಿಸ್‌ಲ್ಯಾ ಅಬಕ್ಯಾ ಕರೂಂ ಜಿ'

'ನೆನಪಿನ ಮೊಗ್ಗ ತಯ್ದು ಹಾರ ಕಟ್ಟೇನಂದ
ಬೊಟ್ಟಾನ್ನದಾರ ಜಾರಿತ ಹೆಂಗ್ಮಾಡವೆ ಇನವಂಂದ'

ಅವಳ ಬೀಸುವ ಕ್ರಿಯೆ ಮುಂದುವರಿಯುತ್ತದೆ. ಅದರಂತೆ ನೆನಪುಗಳೂ ಹಾಡಾಗಿ ಹೊಮ್ಮುತ್ತವೆ.

ಗಂಡ ದೂರ ಹೋಗಿದ್ದಾನೆ. ದಿನಗಳೇ ಕಳೆದಿವೆ. ಬರಬೇಕಾಗಿತ್ತು, ಬರಲಿಲ್ಲ. ಮೈಯೆಲ್ಲ ವಿರಹದ ಉರಿ. ಉಕ್ಕಿಬರುವ ಕಣ್ಣೀರು. ಆದರಿಂದ ತೊಳೆದರೂ 'ಉರಿ'ಯಾಗಿರುವ ತಾನು ಆರಲಿಲ್ಲ,

ಸಂಯ್ಯಾ ಸೆ ಹೋಕು ಜಂದಾ ಅಗನ ಜಲೂಂ ಜ
ಅಂಜುವಾಕ್ ನೀವ್ ಭೀ ಧೋಯಾ ಮೈನ ಬಂರ್ಝೂಂಜ

'ಗಂಡನಿಂದ ಅಗಲಿದವ್ಯಾಲ ನಾ ಬೆಂಕಿ ಉರಿಸೀದ
ತೊಳೆದ ತೊಳೆದ ಕಣ್ಣೀರಾಗ, ತಣ್ಣಗಾಗಲಿಲ್ಲ'

ವಿರಹದ ತಾಪ ಮತ್ತು ತಾನು ಬೇರೆ ಬೇರೆ ಅಲ್ಲ. ತಾನೇ ಒಂದು 'ಉರಿ' ಎನ್ನುವ ಉನ್ಮತ್ತ ಸ್ಥಿತಿ. ಬೀಸುವಕ್ರಿಯೆ ಮುಂದುವರಿದಂತೆ, ಕಲ್ಲಿಗೆ ಮುಂಕ್ಕಿನ ಮೇಲೆ ಮುಕ್ಕು ಬೀಳುತ್ತಲೇ ಹೋಗುತ್ತವೆ. ಒಂದು ಸಂದರ್ಭದ ರೋಮಾಂಚಕ ಅನುಭವ ನೆನಪಾಗುತ್ತದೆ. ಆದರಿಂದ ಮೈ ಒಂದು ಮುಳ್ಳಿನಿಂದ ಕೂಡಿದ ಕಂಟಿ - ಮುಳ್ಳು ಕಂಟಿ ಎನ್ನುವ ಅನುಭವ. 'ಮೈಮೇಲೆಲ್ಲ ಮುಳ್ಳು' ಎನ್ನುವ ನೋವು - ಮಧುರ ನೋವಿನ ಅನಿಸಿಕೆ. ಆ ಯಾತನೆ ಕಣ್ಣಲ್ಲಿ ಕೂಡ ಈ ಮುಳ್ಳನ್ನು ಕೀಳುವುದು ಸಾಧ್ಯವೇ. ಅರರೇ ಮತ್ತೆ ರೋಮಾಂಚಕಾರಿ ನೆನಪುಗಳ ದಾಳಿ. ಮೈ ಜುಮ್ಮೆನ್ನು ತ್ತದೆ. ಅಂಗಾಂಗದಲ್ಲಿ ಹೂವು ಅರಳಿವೆ. ನೋಡಬೇಕೆಂದರೆ ಕಣ್ಣಲ್ಲಿ ಕೂಡ ನೋವಿನ ಮುಳ್ಳು

'ಅಂಖ್ಯಾಮೆ ಕಾಟೆ ಉಕ್ಕೆಂ ಕೈಸಿ ಮೈ ಕಾಡೂಂ ಜಿ
ಅಂಗನಾಂ ಮೆ 'ಫೂಲಾಂ ಖಿಲೆ ಕೈಸಿ ಮೈ ದೇಖೂಂಜಿ'

ಕಣ್ಣಾಗs ಮುಳ್ಳಿದ್ದಾವು ನಾ ಹೆಂಗ ತಗಿಯಾಲೀ
ಮೈಯಾಗs ಹೂವಳ್ಯಾವು ನಾ ಹೆಂಗ ನೋಡಾಲೀ

ತನಗಾಗಿ ಮಾಡಿಸಿದ ಚಿನ್ನದ ಸುತ್ತೋಲೆಗಳನ್ನು ತನ್ನ ನಲ್ಲ ತುಂಬ ಪ್ರೀತಿಯಿಂದ ಮಾಡಿಸಿ ತಂದದ್ದು - ಕಿವಿಯಲ್ಲಿ ಹಾಕಿಕೊಳ್ಳುವಾಗ ಆದ ನೋವು. ಹಾಕಿಸಿಕೊಂಡ ಮೇಲೆ ತನ್ನ ಪ್ರಿಯತಮ ನೋಡಿ ಸಂತೋಷಪಟ್ಟದ್ದು - ನೋವು ನಲಿವು ಒಡನೊಡನೆ ನುಗ್ಗಿಬರುತ್ತವೆ. ಬಂಗಾರ ಕಿವಿಯಲ್ಲಿ ಹಾಕಿಕೊಳ್ಳಬೇಕೆಂದರೆ ಕಿವಿಯನ್ನು ಚುಚ್ಚಬೇಕು. ಹೂವಿನ ಪಕಳೆಯಂಥ ಕಿವಿ ಏನೇನು ಕಷ್ಟ ಸೋಸಬೇಕು.

'ಸೋನಾ ಚನ್ನಸೇ ಕೊ ಕಾನಾಂ ಛೇದ್ನಾ ಪಡ್ತೆಂ
ಫೂಲ ಜೈಸೆ ಪಂಖುಡ್ಯಾಕೂ ಕ್ಯಾಕ್ಯಾ ಸೋಸ್ನಾ ಪಡ್ತೈಂ'

'ಬಂಗಾರವಾಲಿ ಹಾಕೂದಂದ್ರ ಕಿವಿ ಚುಚ್ಚಬೇಕ
ಹೂವಿನ ಪಕಳೀ ಹುಂತಾವು ಏನೇನ ಸೋಸಬೇಕs'

ಹೀಗೆ 'ಚಕ್ಕೀನಾಮೆ'ಗಳು ಮಹಿಳೆಯರ ನೋವು ನಲಿವಿನ ಅನುಭವಗಳ ಕೋಮಲ ಮತ್ತು ಹೃದಯಸ್ಪರ್ಶಿ ಸಂವೇದನೆಗಳ ವ್ಯಕ್ತರೂಪವಾಗಿವೆ.

ಚಕ್ಕಿನಾಮೆಗಳು ನಮ್ಮ ಜನಪದರ ಜೀವನದರ್ಶನಕ್ಕೆ ಮತ್ತು ಅವರ ಆಧ್ಯಾತ್ಮಿಕ ಅನುಭಾವಗಳಿಗೆ ಕೂಡ ಸ್ಪಂದಿಸಿವೆ. ಬೀಸುಕಲ್ಲು - ಅದರ ಎರಡು ಪಾಳೆಗಳು ಬೀಸುವ ಕ್ರಿಯೆ ಇತ್ಯಾದಿಗಳು ಜನಪದದ ಗಂಭೀರ ಚಿಂತನೆಗೆ ದಾರಿ ಮಾಡಿದೆ. ಈ ಚಿಂತನಶೀಲತೆಯ ಸಹಜತೆ ಮತ್ತು ಉದಾತ್ತ ರೀತಿ ಜನಪದ ಕಾವ್ಯದ ಅಮೂಲ್ಯ ಮಾದರಿ.

ಬೀಸುವ ಕ್ರಿಯೆಯಲ್ಲಿ ತಲ್ಲೀನಳಾದ ತಾಯಿಯ ಅನಿಸಿಕೆ -

ಬೀಸುಕಲ್ಲಿನ ಎರಡು ಪಾಳೆಗಳೆಂದರೆ ಏನು? ಅಥವಾ ಈ ಪಾಳೆಗಳು ಯಾವುದರ ಸಂಕೇತ? ಈ ಲೋಕ ಅಂದರೆ ಮರ್ತ್ಯಲೋಕ 'ಜರತ್' ಪರಲೋಕ-ದೇವಲೋಕ ಅಂದರೆ 'ಗೈರತ್' ಅವು ಬೇರೆಯಾಗಲು ಸಾಧ್ಯವಿಲ್ಲ. ಎರಡೂ ಪಾಳೆ ಕೂಡಿ ಬೀಸಿದಾಗ - ಜೀವನಕ್ರಿಯೆ ಸಂಘಟಿತವಾದಾಗ ಹಿಟ್ಟು ಹೊರಡುತ್ತದೆ, ಸತ್ವ ಮೈಗೂಡುತ್ತದೆ. 'ಜರತ್' ಮತ್ತು 'ಗೈರತ್' ಇಲ್ಲಿಯೇ ಇವೆ. ಈ ಲೋಕದ ಶರಣರು ಸಂತರುಗಳ ಮೂಲಕ ದೇವಲೋಕದ ಅಲ್ಲಾಹನನ್ನು ಕಾಣಲು ದರ್ಶನ ಪಡೆಯಲು ಸಾಧ್ಯ. ಅದು ಹೃದಯದಲ್ಲಿ ಮೂಡುವ ದಿವ್ಯದರ್ಶನ. ಮರ್ತ್ಯಲೋಕ ಒಂದು ಪಾಳಿ, ದೇವಲೋಕ ಇನ್ನೊಂದು ಪಾಳಿ. ಎರಡೂ ರಸೂಲ್ ಅಲ್ಲಾಹ್‌ರನ್ನು ಕಾಣುವ ದಾರಿಗಳು. ಈ ಬದುಕನ್ನು ಬಿಟ್ಟು ದೇವರಿಲ್ಲ. ಶರಣ ಸಂತರನ್ನು ಅರ್ಥ ಮಾಡಿಕೊಂಡು ಅವರು ತೋರಿದ 'ಕಾಯಕ' ದುಡಿಮೆಯ ಮೂಲಕ ಅಲ್ಲಾಹ್‌ನನ್ನು ಅನುಭಾವದಲ್ಲಿ ಆವಿಷ್ಕಾರಮಾಡಿಕೊಳ್ಳುವುದು. 'ಸೂಫಿ' ತತ್ವಜ್ಞಾನದ ಒಂದು

'ಝೂಲಕ್' - ಮಿಂಚು - ನಿಗೂಢವಾದ ಸಾಧನೆಯು ರೀತಿ ಇಲ್ಲೆಲ್ಲ ತನ್ನ ಪರಿಣಾಮು ಬೀರಿದ್ದರೆ ಅದರಲ್ಲಿ ಜನಪದರ ಮೂಲಸಂವೇದನೆ ಮತ್ತು ಅನುಭಾವನ ಕುರುಹು ಗಳಾವುವು? ಹೇಗೆ ಇಂಥ ತಾತ್ವಿಕ ರಹಸ್ಯಾನುಭವಗಳು ಲೀಲಾಜಾಲವಾಗಿ 'ಚಕ್ಕಿ ನಾಮೆ'ಗಳಲ್ಲಿ ಮೂಡಿಬಂದವು ಎನ್ನುವುದು ತತ್ವಜ್ಞಾನದ ವಿದ್ಯಾರ್ಥಿಗೆ ಒಂದು ಆಹ್ವಾನದಂತಿದೆ. ಆ ದ್ವಿಪದಿ ಹೀಗಿದೆ:

'ಐರತ್ತ ಗೈರತ್ತ ಚಕ್ಕೀಕೆ ದೊ ಪಾಟಾಂ
ಅಲ್ಲಾs ಔರ್ ರಸೂಲ್‌ಸೆ ಮಿಲ್ನೇಕೆದೋ ಬಾಟಾ.'

1988-89 ನೇ ಸಾಲಿನ ಅಕಾಡೆಮಿಯ ಕಾರ್ಯಚಟುವಟಿಕೆಗಳು

ಕನ್ನಡ ಜನಪದ ಕತೆಗಳ ರಾಜ್ಯಮಟ್ಟದ ವಿಚಾರಸಂಕಿರಣ :

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಹಕಾರದೊಂದಿಗೆ ದಿನಾಂಕ : 26-8-88 ಮತ್ತು 27-8-88 ಈ ಎರಡು ದಿನಗಳ ಕಾಲ ರಾಜ್ಯಮಟ್ಟದ ಜಾನಪದ ವಿಚಾರ ಸಂಕಿರಣವನ್ನು ಏರ್ಪಾಡು ಮಾಡಲಾಗಿತ್ತು. ಆಗಿನ ಪದವಿ ಪೂರ್ವ ಶಿಕ್ಷಣ ಮಂಡಳಿಯ ಅಧ್ಯಕ್ಷರಾದ ಶ್ರೀ ಡಿ. ಎ. ಅರಸು ಅವರು ವಿಚಾರ ಸಂಕಿರಣವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಅಕಾಡೆಮಿ ಅಧ್ಯಕ್ಷರಾದ ಡಾ. ಎಸ್. ಕೆ. ಕರೀಂಖಾನ್ ಅವರು ವಹಿಸಿದ್ದರು. ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಜೀ. ಶಂ. ಪರಮಶಿವಯ್ಯ ಅವರು ಸ್ವಾಗತಿಸಿ, ವಿಚಾರ ಸಂಕಿರಣದ ರೂಪುರೇಷೆಗಳನ್ನು ಪರಿಚಯಿಸಿದರು. ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಹಿ. ಚಿ. ಬೋರಲಿಂಗಯ್ಯ ಅವರು ಅಕಾಡೆಮಿಯ ಕಾರ್ಯಚಟುವಟಿಕೆಗಳನ್ನು ವಿವರಿಸಿದರು. ಎರಡು ದಿನಗಳ ಕಾಲ ನಡೆದ ವಿವಿಧ ಗೋಷ್ಠಿಗಳ ಅಧ್ಯಕ್ಷತೆಯನ್ನು ಡಾ. ಸೋಮಶೇಖರ ಇಮ್ರಾಪುರ, ಡಾ. ಎಲ್. ಆರ್. ಹೆಗಡೆ ಮತ್ತು ಡಾ. ಬಿ. ಎ. ವಿವೇಕರೈ ಅವರು ವಹಿಸಿದ್ದರು. ನಾಡಿನ ಎಲ್ಲ ಭಾಗಗಳಿಂದ ಬಂದಿದ್ದ ಪ್ರಖ್ಯಾತ ವಿದ್ವಾಂಸರು ತಮ್ಮ ಪ್ರಬಂಧಗಳನ್ನು ಮಂಡಿಸಿದರು. ಎರಡನೇ ದಿನ ಸಂಜೆ ವಿಚಾರ ಸಂಕಿರಣದ ಸಮಾರೋಪ ಭಾಷಣವನ್ನು ಡಾ. ಚಂದ್ರಶೇಖರ ಕಂಬಾರ ಅವರು ಮಾಡಿದರು.

ಲಾವಣಿ ಮತ್ತು ಗೀಗೀ ಸಂಪ್ರದಾಯದ ರಾಜ್ಯಮಟ್ಟದ ವಿಚಾರಸಂಕಿರಣ

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಹಕಾರ ದೊಡನೆ ದಿನಾಂಕ : 13–12–88 ಮತ್ತು 14–12–88 ಈ ಎರಡು ದಿನಗಳ ಕಾಲ ರಾಜ್ಯಮಟ್ಟದ ಲಾವಣಿ ಮತ್ತು ಗೀಗೀ ಜಾನಪದ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಕೆ. ಎಚ್. ಚಲುವರಾಜು ಅವರು ವಿಚಾರಸಂಕಿರಣವನ್ನು ಉದ್ಘಾಟಿಸಿದರು. ಅಕಾಡೆಮಿ ಅಧ್ಯಕ್ಷರಾದ ಡಾ. ಎಸ್. ಕೆ. ಕರೀಂಖಾನ್ ಅವರು ಅಧ್ಯಕ್ಷತೆ ವಹಿಸಿದ್ದರು. ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಹಿ. ಚಿ. ಬೋರಲಿಂಗಯ್ಯನವರು ಪ್ರಾಸ್ತಾವಿಕ ಭಾಷಣ ಮಾಡಿ ಈ ಸಂಕಿರಣದ ಉದ್ದೇಶವನ್ನು ವಿವರಿಸಿದರು. ನಂತರ ನಡೆದ ಎರಡು ಗೋಷ್ಠಿಗಳ ಅಧ್ಯಕ್ಷತೆಯನ್ನು ಡಾ. ಬಿ. ಬಿ. ಹೆಂಡಿ ಮತ್ತು ಡಾ. ಎಂ. ಎಸ್. ಲಠ್ಠೆ ಅವರು ವಹಿಸಿದ್ದರು. ಈ ಎರಡೂ ಗೋಷ್ಠಿಗಳಲ್ಲಿ ರಾಜ್ಯದ ಬೇರೆ ಬೇರೆ ಭಾಗ ಗಳಿಂದ ಬಂದಿದ್ದ ಹಲವಾರು ವಿದ್ವಾಂಸರುಗಳು ಭಾಗವಹಿಸಿ ತಮ್ಮ ಪ್ರಬಂಧಗಳನ್ನು ಮಂಡಿಸಿದರು. ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ಡಾ. ಮ. ಗು. ಬಿರಾದಾರ ಅವರು ವಹಿಸಿದ್ದರು. ಡಾ. ಎಲ್. ಎಸ್. ಜನಾಪುರ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅಕಾಡೆಮಿ ಸದಸ್ಯರಾದ ಡಾ ಚನ್ನಣ್ಣ ವಾಲೀಕಾರ ಅವರು ವಿಚಾರಸಂಕಿರಣದ ಸಂಚಾಲಕರಾಗಿದ್ದರು. ಈ ಎರಡೂ ದಿನಗಳ ಕಾಲ ಬಿಜಾಪುರ ಮೇಳದವರಿಂದ ಹರದೇಶಿ–ನಾಗೇಶಿ ಸಂಪ್ರದಾಯದ ಗೀತೆಗಳನ್ನು ಹಾಡಿಸ ಲಾಯಿತು.

ಕಲಾಮೇಳಗಳು

ಗುಲಬರ್ಗಾ ಜಿಲ್ಲೆಯ ಮಾಶ್ಯಾಳದಲ್ಲಿ ತಾಲ್ಲೂಕು ಮಟ್ಟದ ಮೇಳ :

ಗುಲಬರ್ಗಾ ಜಿಲ್ಲೆ ಅಫಜಲಪುರ ತಾಲ್ಲೂಕಿನ ಮಾಶ್ಯಾಳದ ಶ್ರೀ ಚೌಡೇಶ್ವರಿದೇವಿ ಜಾತ್ರಾ ಮಹೋತ್ಸವ ಸಮಿತಿಯವರು ಅಕಾಡೆಮಿಯ ಸಲಹೆ ಮತ್ತು ಮಾರ್ಗ ದರ್ಶನದ ಮೇರೆಗೆ ತಾಲೂಕು ಮಟ್ಟದ ಜನಪದ ಕಲಾಮೇಳವನ್ನು ದಿನಾಂಕ 21-5-88 ಮತ್ತು 22-5-88 ರಂದು ಏರ್ಪಾಡು ಮಾಡಿದ್ದರು. ಕಲಾವಿದರ ವರ್ಣ ರಂಜಿತ ಮೆರವಣಿಗೆಯೊಂದಿಗೆ ಆರಂಭವಾದ ಕಲಾಮೇಳ ಎರಡು ದಿನಗಳ ಕಾಲ ಅತ್ಯಂತ ಅದ್ದೂರಿಯಾಗಿ ನೆರವೇರಿತು. ಹಾಡುಗಾರಿಕೆ, ಕೋಲಾಟ, ಹಲಗೆಮೇಳ, ಲಂಬಾಣಿ ನೃತ್ಯ, ದಪ್ಪಿನಾಟ, ಬಯಲಾಟ, ಕೃಷ್ಣ ಪಾರಿಜಾತ, ಅಲಾಯಿ ಕುಣಿತ, ಡೊಳ್ಳಿನ ಮೇಳ, ರಿವಾಯತ್ ಹಾಡು, ಗೀಗೀಪದ ಮತ್ತು ಗೊಂದಲಿಗರ ಮೇಳ

ಮುಂತಾಗಿ ಹತ್ತಾರು ಕಲೆಗಳ ಪ್ರದರ್ಶನದ ಏರ್ಪಾಡು ಮಾಡಲಾಗಿತ್ತು. ಜನಪದ ಸಂಪ್ರದಾಯಗಳ ವೈವಿಧ್ಯಮಯ ಜಾತ್ರೆಯ ಜೊತೆಯಲ್ಲೇ ಈ ಕಲಾಮೇಳವೂ ನಡೆದುದರಿಂದ ಸಾವಿರಾರು ಪ್ರೇಕ್ಷಕರು ಕುತೂಹಲ ಮತ್ತು ಉತ್ಸಾಹದಿಂದ ಈ ಮೇಳವನ್ನು ವೀಕ್ಷಿಸಿದರು. ಇದೇ ಸಂದರ್ಭದಲ್ಲಿಯೇ ಜನಪದ ವಾದ್ಯಗಳು ಮತ್ತು 'ಜನಪದ ಸಾಹಿತ್ಯಕ್ಕೆ ಮುಸ್ಲಿಮರ ಕೊಡುಗೆ' ಎಂಬ ವಿಷಯದ ಮೇಲೆ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಅಕಾಡೆಮಿಯ ಅಧ್ಯಕ್ಷರಾದ ಡಾ. ಎಸ್. ಕೆ. ಕರೀಂಖಾನ್, ಶಾಸಕರಾದ ಶ್ರೀ ಮಾಲಿಕಯ್ಯ ಗುತ್ತೇದಾರ, ಮಂಡಲ ಪ್ರಧಾನರಾದ ಶ್ರೀ ಬಾಬಾಸಾಹೇಬ ಪಾಟೀಲ್ ಹಾಗೂ ಸಮಾರೋಪ ಸಮಾರಂಭಕ್ಕೆ ಆಗಮಿಸಿದ್ದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಕೆ. ಹೆಚ್. ಚೆಲುವರಾಜು ಅವರೂ ಸೇರಿದಂತೆ ಹತ್ತಾರು ಪ್ರಮುಖರು ಈ ಕಲಾಮೇಳದಲ್ಲಿ ಭಾಗವಹಿಸಿದ್ದರು. ತಾಲೂಕಿನ ಮತ್ತೊಬ್ಬ ಪ್ರಮುಖರಾದ ಶ್ರೀ ವೆಂಕಯ್ಯ ಗುತ್ತೇದಾರ ಅವರು ಕಲಾಮೇಳದ ಯಶಸ್ಸಿಗೆ ತುಂಬಾ ಸಹಕಾರವನ್ನು ನೀಡಿದರು. ಅಕಾಡೆಮಿ ಸದಸ್ಯರಾದ ಶ್ರೀ ಎ. ಕೆ. ರಾಮೇಶ್ವರ ಅವರು ಇಡೀ ಕಲಾಮೇಳದ ಸಂಚಾಲಕತ್ವ ವಹಿಸಿ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಇಡೀ ಕಲಾಮೇಳವನ್ನು ಅಕಾಡೆಮಿ ವತಿಯಿಂದ ವಿಡಿಯೋ ಚಿತ್ರೀಕರಣ ಮಾಡಿಕೊಳ್ಳಲಾಯಿತು.

ಬಿಜಾಪುರ ಜಿಲ್ಲಾ ಮಟ್ಟದ ಕಲಾಮೇಳ :

ಬಿಜಾಪುರ ಜಿಲ್ಲೆ ಬಸವನ ಬಾಗೇವಾಡಿಯ ಬಸವ ಸ್ಮಾರಕ ತತ್ವಪ್ರಸಾರ ಹಾಗೂ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಜಿಲ್ಲಾ ಮಟ್ಟದ ಬೃಹತ್ ಜಾನಪದ ಕಲಾಮೇಳವನ್ನು ದಿನಾಂಕ 29-10-88 ಮತ್ತು 30-10-88 ರಂದು ನಡೆಸಲಾಯಿತು. ಮೇಲ್ಕಂಡ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಾಳನಗೌಡಪಾಟೀಲ್ ಅವರ ಸಮರ್ಥ ನೇತೃತ್ವದಲ್ಲಿ ನಡೆದ ಈ ಮೇಳದಲ್ಲಿ ನೂರಾರು ಕಲಾವಿದರು ಭಾಗವಹಿಸಿದ್ದರು. ಕರ್ನಾಟಕ ಸರ್ಕಾರದ ಸಣ್ಣ ಕೈಗಾರಿಕೆಗಳ ಸಚಿವರಾದ ಶ್ರೀ ರಮೇಶ್ ಜಿ. ಜಿಣಗಿ ಅವರು ಅಕಾಡೆಮಿ ಅಧ್ಯಕ್ಷರಾದ ಡಾ. ಎಸ್. ಕೆ.ಕರೀಂಖಾನ್ ಅವರಿಗೆ "ಜಾನಪದ ಕಂಕಣ" ಕಟ್ಟುವ ವಿನೂತನ ಶೈಲಿಯ ಮೂಲಕ ಕಲಾಮೇಳವನ್ನು ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ಬಸವನ ಬಾಗೇವಾಡಿ ಬೀಳೂರದ ಶ್ರೀ ಮುರುಗೇಂದ್ರ ಸ್ವಾಮಿಗಳವರು ಹಾಗೂ ಲೋಕಸಭಾ ಸದಸ್ಯರಾದ ಶ್ರೀ ಎಸ್. ಎನ್. ಗುರಡ್ಡಿ ಅವರು ಮತ್ತು ಹೂವಿನ ಹಿಪ್ಪರಗಿಯ ಶಾಸಕರಾದ ಶ್ರೀ ಶಿವಪುತ್ರಪ್ಪ ದೇಸಾಯಿ ಹಾಗೂ ಮಾಜಿ ಶಾಸಕರಾದ ಶ್ರೀ ಬಿ.ಎಸ್. ಪಾಟೀಲ್ ಇವರುಗಳು ಭಾಗವಹಿಸಿದ್ದರು. ನಂತರ ನಡೆದ ರಂಗದರ್ಶನದ ಉದ್ಘಾಟನೆಯನ್ನು ಧಾರವಾಡ ಆಕಾಶವಾಣಿಯ ಶ್ರೀ ಚಾನಂದೂರು ಕೆಂಪಯ್ಯನವರು ನೆರವೇರಿಸಿದರು. ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಕಿಶೋರಚಂದ್ರ ಅವರು ಅಧ್ಯಕ್ಷತೆ ವಹಿಸಿದ್ದರು. ಎರಡು ದಿನಗಳ ಕಾಲ

ನಡೆದ ರಂಗದರ್ಶನದಲ್ಲಿ ಕರಡಿ ಮಜಲು, ಡೊಳ್ಳಿನ ಕೈಪಟ್ಟು, ಕಣಿವಾದನ, ಗೊಂದಳಿ, ಸಂಭಾಳ ವಾದ್ಯ, ತೊಗಲುಗೊಂಬೆಯಾಟ, ಚೌಡಿಕೆ, ರಿವಾಯತ್ ಹಾಡು, ಕೃಷ್ಣ ಪಾರಿಜಾತ, ದೊಡ್ಡಾಟ, ಪುರವಂತರ ಮೇಳ, ದುರುಗಮುರುಗಿ ಮುಂತಾದ ವಿಶೇಷ ಕಲೆಗಳ ಪ್ರದರ್ಶನ ನಡೆಯಿತು. ಇದೇ ಸಂದರ್ಭದಲ್ಲಿ ನಡೆದ ಎರಡು ವಿಚಾರಗೋಷ್ಠಿಗಳ ಅಧ್ಯಕ್ಷತೆಯನ್ನು ಶ್ರೀ ಎಸ್. ಬಿ. ಬಿರಾದಾರ ಮತ್ತು ಡಾ. ಸೋಮಶೇಖರ ಇಮ್ರಾಪುರ ಅವರು ವಹಿಸಿದ್ದರು. ಗೋಷ್ಠಿಗಳ ಉದ್ಘಾಟನೆಯನ್ನು ಶ್ರೀ ಮಂದೇನೂರ ಸಂಗಣ್ಣ ಮತ್ತು ಡಾ. ಜೀ. ಶಂ. ಪರಮಶಿವಯ್ಯನವರು ಮಾಡಿದರು. ಈ ವಿಚಾರಗೋಷ್ಠಿಗಳಲ್ಲಿ ನಾಡಿನ ಬೇರೆಬೇರೆ ಭಾಗಗಳಿಂದ ಬಂದಿದ್ದ ಹತ್ತಾರು ವಿದ್ವಾಂಸರುಗಳು ತಮ್ಮ ಪ್ರಬಂಧಗಳನ್ನು ಮಂಡಿಸಿದರು. 2ನೇ ದಿನ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಇಲಕಲ್ಲಿನ ಚಿತ್ತರಗಿ ಸಂಸ್ಥಾನದ ಮಠದ ಶ್ರೀ ಮಹಾಂತ ಶಿವಯೋಗಿಯವರು ವಹಿಸಿದ್ದರು. ಈ ಸಂದರ್ಭದಲ್ಲಿ ಹೊರತರಲಾದ ಸ್ಮರಣ ಸಂಚಿಕೆಯನ್ನು ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಹಿ. ಚಿ. ಬೋರಲಿಂಗಯ್ಯನವರು ಬಿಡುಗಡೆ ಮಾಡಿದರು. ಮುಖ್ಯ ಅತಿಥಿಗಳಾಗಿ ಬಸವನ ಬಾಗೇವಾಡಿ ಕ್ಷೇತ್ರದ ಶಾಸಕರಾದ ಶ್ರೀ ಕುಮಾರಗೌಡ ಪಾಟೀಲರು ಮತ್ತು ಮಾಜಿಶಾಸಕರಾದ ಶ್ರೀ ಬಿ.ಎಸ್. ಪಾಟೀಲ್ ಅವರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಬಿಜಾಪುರ ಜಿಲ್ಲೆಯ 11ಜನ ಪ್ರಮುಖ ಕಲಾವಿದರುಗಳನ್ನು ಸನ್ಮಾನಿಸಲಾಯಿತು. ಇದೇ ಕಾರ್ಯಕ್ರಮದ ಸ್ವಾಗತಾಧ್ಯಕ್ಷರಾದ ಶ್ರೀ ಆರ್. ಎಂ. ದುಂಬಾಳಿಯವರ ಸಹಕಾರ ಸ್ಮರಣೀಯ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿಶಿಷ್ಟ ಕಲೆಗಳನ್ನು ಅಕಾಡೆಮಿ ವತಿಯಿಂದ ವಿಡಿಯೋ ಚಿತ್ರೀಕರಣ ಮಾಡಿಕೊಳ್ಳಲಾಯಿತು.

ಉತ್ತರ ಕನ್ನಡ ಜಿಲ್ಲಾ ಮಟ್ಟದ ಜನಪದ ಕಲಾಮೇಳ :

ಇದೇ ಬರುವ ಮಾರ್ಚಿ ತಿಂಗಳ 3ನೇ ವಾರದಲ್ಲಿ ಅಂಕೋಲಾದಲ್ಲಿ ಉತ್ತರ ಕನ್ನಡ ಜಿಲ್ಲಾ ಮಟ್ಟದ ಜನಪದ ಕಲಾಮೇಳ ಏರ್ಪಡಿಸಲಾಗಿದೆ. ಈ ಕಲಾಮೇಳದಲ್ಲಿ ಮುಖ್ಯವಾಗಿ ಜಿಲ್ಲೆಯ ಗಿರಿಜನರಿಗೆ ಆದ್ಯತೆ ನೀಡಲಾಗಿದೆ. ನೂರಾರು ಜನ ಕಲಾವಿದರನ್ನು ಆಹ್ವಾನಿಸಲಾಗಿದೆ. ಕುಣಬಿಯರು, ಸಿದ್ದಿಯರು, ಹಾಲಕ್ಕಿಯವರು, ಮುಕ್ರಿಯರು ಮುಂತಾಗಿ ನಾನಾ ಬುಡಕಟ್ಟು ಜನಾಂಗಗಳ ಹಾಡು-ಕುಣಿತ ಮತ್ತು ಸಂಸ್ಕೃತಿ ದರ್ಶನದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಕಾಡೆಮಿ ಸದಸ್ಯರಾದ ಶ್ರೀ ಗೋವಿಂದನಾರಾಯಣ ಮುಹಾಲೆ ಅವರು ಕಾರ್ಯಕ್ರಮದ ಸಂಚಾಲಕತ್ವ ವಹಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಜನಪದ ಕಲಾಮೇಳ :

ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ, ಭೂತನೃತ್ಯ ಹಾಗೂ ವಿವಿಧ ಜನಾಂಗದವರ

ಕಲಾಪ್ರದರ್ಶನಗಳನ್ನು ವ್ಯವಸ್ಥೆಗೊಳಿಸಲಾಗಿದ್ದು ಮಾರ್ಚ್ 4ನೇ ವಾರದಲ್ಲಿ ಬಂಟ್ವಾಳದಲ್ಲಿ ಜಿಲ್ಲಾ ಮಟ್ಟದ ಕಲಾಮೇಳವನ್ನು ಏರ್ಪಡಿಸಲಾಗಿದೆ. ನೂರಾರು ಕಲಾವಿದರು ಭಾಗವಹಿಸುವ ಈ ಕಲಾಮೇಳದ ಜೊತೆಗೆ ದಕ್ಷಿಣ ಕನ್ನಡದ ಜಾನಪದ ವನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡುವ ವಿವಿಧ ವಿಚಾರಗೋಷ್ಠಿಗಳು ನಡೆಯು ಲಿವೆ. ಈ ಕಾರ್ಯಕ್ರಮದ ಸಂಚಾಲಕತ್ವವನ್ನು ಅಕಾಡೆಮಿಯ ಸದಸ್ಯರೂ ಜಿಲ್ಲೆಯ ಹೆಸರಾಂತ ಸಂಘಟಕರೂ ಆದ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ ಅವರು ವಹಿಸಿದ್ದಾರೆ.

ತೊಗಲುಗೊಂಬೆ ಕಮ್ಮಟ :

ಕರ್ನಾಟಕ, ತೊಗಲುಗೊಂಬೆಯಾಟದ ಕಲೆಗೆ ಅತ್ಯಂತ ಹೆಸರಾದದ್ದು. ಆದರೆ ಆಧುನಿಕತೆಯ ಹೊಸ ಗಾಳಿಯಲ್ಲಿ ಈ ಕಲೆ ಕಣ್ಮರೆಯಾಗುವ ಅಪಾಯದಲ್ಲಿದೆ. ಇಂಥ ಪರಂಪರಾಗತವಾದ ಮತ್ತು ಅನೇಕರ ವೃತ್ತಿಗೆ ಕಾರಣವಾದ ಈ ಕಲೆಯನ್ನು ವ್ಯವಸ್ಥಿತವಾಗಿ ಹೇಗೆ ಪುನರುಜ್ಜೀವನಗೊಳಿಸಬೇಕೆಂಬ ಬಗ್ಗೆ ಚಿಂತಿಸುವುದು ಅತ್ಯಂತ ಅಗತ್ಯ. ಈ ದಿಸೆಯಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಸಹಕಾರ ದೊಂದಿಗೆ ತೊಗಲುಗೊಂಬೆ ಕಮ್ಮಟ ಮತ್ತು ಪ್ರದರ್ಶನವನ್ನು ದಿನಾಂಕ 8-9-88 ರಿಂದ 12-9-88ರವರೆಗೆ 5 ದಿನಗಳ ಕಾಲ ಬಿ. ಆರ್. ಪ್ರಾಜೆಕ್ಟಿನಲ್ಲಿ ಏರ್ಪಡಿಸ ಲಾಗಿತ್ತು. ಡಾ. ಎಸ್. ಕೆ. ಕರೀಂಖಾನ್ ಅವರ ಅಧ್ಯಕ್ಷತೆಯಲ್ಲಿ ಡಾ. ಜೀ. ಶಂ. ಪರಮಶಿವಯ್ಯ ಅವರು ಕಮ್ಮಟವನ್ನು ಉದ್ಘಾಟಿಸಿದರು. 5 ದಿನಗಳ ಕಾಲ ನಿರಂತರವಾಗಿ ಪ್ರದರ್ಶನ, ಪ್ರಾತ್ಯಕ್ಷಿಕೆ, ಉಪನ್ಯಾಸ, ಕಲಾವಿದರ ಅನಿಸಿಕೆ ಮತ್ತು ಸ್ಥಿತಿಗತಿಗಳನ್ನು ಕುರಿತ ವಿಚಾರವಿನಿಮಯ ನಡೆಯಿತು. ದಕ್ಷಿಣ ಕರ್ನಾಟಕದ ಭಾಗದ ತೊಗಲುಗೊಂಬೆಯಾಟ, ಆಂಧ್ರ–ಕರ್ನಾಟಕ ಗಡಿ ಭಾಗದ ತೋಳುಬೊಮ್ಮಲಾಟ, ಬಿಜಾಪುರ ಭಾಗದ ಕಟಬರಾಟ, ಬಳ್ಳಾರಿಯ ಕಿಳ್ಳೇಕ್ಯಾತರ ಆಟ - ಇವುಗಳ ಮಾದರಿ ಪ್ರದರ್ಶನವನ್ನು ಏರ್ಪಡಿಸಲಾಯಿತಲ್ಲದೆ ಪರಸ್ಪರ ಕೊಟ್ಟು ತೆಗೆದುಕೊಳ್ಳಬೇಕಾದ ಕಲಾ ಅಂಶಗಳ ಬಗ್ಗೆ ಹಾಗೂ ಆ ಮೂಲಕ ಆಧುನಿಕ ಯುಗಕ್ಕೂ ತೊಗಲುಗೊಂಬೆ ಯಾಟವನ್ನು ಅಳವಡಿಸಿಕೊಳ್ಳಬೇಕಾದ ಬಗ್ಗೆ ಕಲಾವಿದರಿಗೆ ಮಾರ್ಗದರ್ಶನ ನೀಡ ಲಾಯಿತು. ಕೊನೆಯ ದಿನ ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಶಾಂತಿನಾಥ ದೇಸಾಯಿ ಅವರು ಸಮಾರೋಪ ಭಾಷಣ ಮಾಡಿದರು. ಶ್ರೀ ಕೆ.ಆರ್. ಲಿಂಗಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು. ಡಾ. ಜೀ.ಶಂ. ಪರಮಶಿವಯ್ಯ ಮತ್ತು ಡಾ. ಎಚ್. ಜೆ. ಲಕ್ಕಪ್ಪಗೌಡ ಅವರು ಸಂಚಾಲಕತ್ವ ವಹಿಸಿ ಕಾರ್ಯಕ್ರಮ ವನ್ನು ಯಶಸ್ವಿಗೊಳಿಸಿದರು. ಅಕಾಡೆಮಿ ಸದಸ್ಯರಾದ ಶ್ರೀ ಮುದೇನೂರ ಸಂಗಣ್ಣ ಅವರು ಮತ್ತು ಅಧ್ಯಕ್ಷರಾದ ಡಾ. ಎಸ್. ಕೆ. ಕರೀಂಖಾನ್ ಅವರು ಈ ಐದೂ ದಿನಗಳ ಕಾಲ ಕಲಾವಿದರೊಂದಿಗೇ ಇದ್ದುಕೊಂಡು ಮಾರ್ಗದರ್ಶನ ನೀಡಿದರು.

ಪ್ರದರ್ಶನಕ್ಕೆ ಆಹ್ವಾನಿಸಲಾಗಿದ್ದ ಕಲಾ ತಂಡಗಳ ಕಲಾವಿದರುಗಳಲ್ಲದೆ ಕರ್ನಾಟಕ ದಲ್ಲಿರುವ ಎಲ್ಲ ತೊಗಲುಗೊಂಬೆ ತಂಡಗಳ ಮುಖ್ಯ ಕಲಾಕಾರರನ್ನು ವಿಶೇಷ ಆಹ್ವಾನಿತರನ್ನಾಗಿ ಕಮ್ಮಟದಲ್ಲಿ ಒಳಪಡಿಸಲಾಗಿತ್ತು. ಈ ಇಡೀ ಕಾರ್ಯಕ್ರಮ ಹಾಗೂ ಗೊಂಬೆಯಾಟದ ವಿವಿಧ ಮಾದರಿಗಳನ್ನು ಅಕಾಡೆಮಿ ವತಿಯಿಂದ ವಿಡಿಯೋ ಚಿತ್ರೀಕರಿಸಲಾಯಿತು.

ಯಕ್ಷಗಾನ ಪ್ರಾತ್ಯಕ್ಷಿಕೆ :

ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲೂಕಿನ ಇಡಗುಂಜಿಯಲ್ಲಿ ಯಕ್ಷಗಾನದ ಮೂಲ ರೂಪವನ್ನು ಕುರಿತಂತೆ 1988ರ ನವೆಂಬರ್ 5 ಮತ್ತು 6ರಂದು ಪ್ರಾತ್ಯಕ್ಷಿಕೆ ಯನ್ನು ಅಲ್ಲಿನ ಸ್ಥಳೀಯ ಆಸಕ್ತರು ಏರ್ಪಾಡು ಮಾಡಿದ್ದರು. ಶ್ರೀ ಗಂಗಾಧರ ಶಾಸ್ತ್ರಿ ನಾಜೂಗಾರ, ಶ್ರೀಮತಿ ಸುಮಿತ್ರ ವಿ. ಭಟ್ಟ, ಶ್ರೀ ಕೆರೆಮನೆ ಮಹಾಬಲ ಹೆಗ್ಗಡೆ ಹಾಗೂ ಅಲ್ಲಿನ ಅನೇಕ ಪ್ರಮುಖರು ಮತ್ತು ಶ್ರೀ ಇಡಗುಂಜಿ ಮಹಾಗಣಪತಿ ಪ್ರತಿಷ್ಠಾನದ ಪ್ರಮುಖರುಗಳು ಈ ಸಮಾರಂಭವನ್ನು ವ್ಯವಸ್ಥೆಗೊಳಿಸಿದ್ದರು. ಶ್ರೀ ಮೂರೂರು ದೇವರು ಹೆಗಡೆ, ಶ್ರೀ ಜಿ. ವಿ. ಹಾಸ್ಯಗಾರ, ಶ್ರೀ ಕೆರೆಮನೆ ಮಹಾಬಲ ಹೆಗಡೆ ಮುಂತಾದ ಹಿರಿಯ ಯಕ್ಷಗಾನ ಪಟುಗಳು ಯಕ್ಷಗಾನದ ಮೂಲ ರೂಪಗಳನ್ನು ಕುರಿತಂತೆ ಪ್ರಾತ್ಯಕ್ಷಿತೆ ಮೂಲಕ ಉಪನ್ಯಾಸಗಳನ್ನು ನೀಡಿದರು. ಅಕಾಡೆಮಿ ಅಧ್ಯಕ್ಷರಾದ ಡಾ॥ ಎಸ್. ಕೆ. ಕರೀಂಖಾನ್ ಅವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರಲ್ಲದೆ, ಇಡೀ ಕಾರ್ಯಕ್ರಮವನ್ನು ಅಕಾಡೆಮಿ ಪರವಾಗಿ ವಿಡಿಯೋ ಚಿತ್ರೀಕರಿಸಿಕೊಳ್ಳಲಾಯಿತು.

ನಾಗವಾರದಲ್ಲಿ ಗ್ರಾಮ ಮಟ್ಟದ ಕಲಾಮೇಳ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಚೆನ್ನಪಟ್ಟಣ ತಾ. ನಾಗವಾರ ಗ್ರಾಮದಲ್ಲಿ ಗ್ರಾಮಮಟ್ಟದ ಕಲಾಮೇಳವನ್ನು ದಿನಾಂಕ : 21-11-88 ಮತ್ತು 22-11-88 ಈ ಎರಡು ದಿನಗಳ ಕಾಲ ಏರ್ಪಡಿಸಲಾಗಿತ್ತು. ನಾಗವಾರ ಗ್ರಾಮದ ಕಲಾವಿದ ರಲ್ಲದೆ ತಾಲ್ಲೂಕಿನ ಬೇರೆ ಬೇರೆ ಭಾಗಗಳಿಂದ ಬಂದಿದ್ದ ನೂರಾರು ಕಲಾವಿದರು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು. ಪಟಾ ಕುಣಿತ, ಪೂಜಾ ಕುಣಿತ, ಕೋಲಾಟ, ಭಜನೆ ಮತ್ತು ಸುಂದರಕಾಂಡ ಯಕ್ಷಗಾನ ಕಾರ್ಯಕ್ರಮಗಳನ್ನು ಪ್ರದರ್ಶಿಸಲಾಯಿತು. ಸುತ್ತಮುತ್ತಲ ಹಳ್ಳಿಗಳಿಂದ ಬಂದಿದ್ದ ಸಾವಿರಾರು ಜನ ನಾಗವಾರ ಗ್ರಾಮದ ದೊಡ್ಡ ಬಯಲಿನಲ್ಲಿ ನಡೆದ ಕಲಾಮೇಳವನ್ನು ವೀಕ್ಷಿಸಿ ಆನಂದಿಸಿದರು. ಅಕಾಡೆಮಿ ಅಧ್ಯಕ್ಷ ರಾದ ಡಾ॥ ಎಸ್. ಕೆ. ಕರೀಂಖಾನ್, ಜಾನಪದ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಎಚ್. ಎಲ್. ನಾಗೇಗೌಡ, ಅಕಾಡೆಮಿಯ ಸದಸ್ಯರಾದ ಡಾ॥ ಕಾಳೇಗೌಡ ನಾಗವಾರ ಮುಂತಾದ ಪ್ರಮುಖರು ಈ ಮೇಳದಲ್ಲಿ ಆಹ್ವಾನಿತ ಅತಿಥಿಗಳಾಗಿ ಭಾಗವಹಿಸಿದ್ದರು.

ಕರ್ನಾಟಕ ಜಾನಪದ (ಫೋಕ್ಲೋರ್ ಆಫ್ ಕರ್ನಾಟಕ) ಗ್ರಂಥ

ಕರ್ನಾಟಕ ಜನಪದ ಕಲೆಯ ಹರವು, ಆಳ ಬಹಳ ದೊಡ್ಡದು. ನಮ್ಮ ನಾಡಿನ ಇಂಥ ಶ್ರೀಮಂತ ಕಲೆಯನ್ನು ಹೊರನಾಡು ಮತ್ತು ಹೊರದೇಶದ ಜನರಿಗೆ ಪರಿಚಯಿಸುವ ವಿಚಾರ ತುಂಬ ಮಹತ್ವದ್ದಾಗುತ್ತದೆ. ಈ ದಿಸೆಯಲ್ಲಿ ಅಕಾಡೆಮಿಯು 'ಕರ್ನಾಟಕ ಜಾನಪದ' (ಫೋಕ್ಲೋರ್ ಆಫ್ ಕರ್ನಾಟಕ) ಎಂಬ ಗ್ರಂಥವನ್ನು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಹೊರತರುವ ವಿಶಿಷ್ಟ ಯೋಜನೆಯನ್ನು ರೂಪಿಸಿದೆ. ಇದೇ ವರ್ಷದಲ್ಲಿ ಪ್ರಕಟಿಸಲಾಗುವ ಈ ಗ್ರಂಥಕ್ಕೆ ನಾಡಿನ ಪ್ರತಿಭಾವಂತ ವಿದ್ವಾಂಸರುಗಳಿಂದ ಜಾನಪದದ ವಿವಿಧ ವಿಷಯಗಳ ಬಗ್ಗೆ ಲೇಖನಗಳನ್ನು ಬರೆಸಲಾಗಿದೆ. ಕರ್ನಾಟಕ ಜಾನಪದದ ಪ್ರಮುಖ ಆಯಾಮಗಳನ್ನು ಪರಿಚಯಿಸುವಂತಹ ಈ ಕೆಳಕಂಡ 20 ಲೇಖನಗಳನ್ನು ಈ ಗ್ರಂಥ ಹೊಂದಿರುತ್ತದೆ :

1) ಕನ್ನಡ ನಾಡು, ನುಡಿ, ಜನತೆ
2) ಕರ್ನಾಟಕ ಸಂಸ್ಕೃತಿ
3) ಕರ್ನಾಟಕ ಆದಿವಾಸಿ ಸಂಸ್ಕೃತಿ
4) ಕರ್ನಾಟಕದಲ್ಲಿ ಜಾನಪದ ಅಧ್ಯಯನ
5) ಜನಪದ ಪ್ರದರ್ಶನಾತ್ಮಕ ಕಲೆಗಳು
6) ಕರ್ನಾಟಕ ಯಕ್ಷಗಾನ ಪ್ರಕಾರಗಳು
7) ಕರ್ನಾಟಕದ ಸಣ್ಣಾಟಗಳು
8) ಜನಪದ ಸಂಗೀತ
9) ಕನ್ನಡ ಜನಪದ ಸಾಹಿತ್ಯ ಶೈಲಿ-ಭಾಷಾ ವೈಜ್ಞಾನಿಕ ವಿವೇಚನೆ
10) ಕನ್ನಡ ಜನಪದ ಕಾವ್ಯಗಳು
11) ಕನ್ನಡ ಜನಪದ ಗೀತ ಪ್ರಕಾರಗಳು
12) ಕನ್ನಡ ಜನಪದ ಗದ್ಯ ಕಥನಗಳು
13) ಕನ್ನಡ ಗಾದೆ, ಒಗಟುಗಳು
14) ಜನಪದ ಅಡುಗೆ ಸಂಪ್ರದಾಯಗಳು
15) ಜನಪದ ವೈದ್ಯ
16) ಜನಪದ ನಂಬಿಕೆ ಸಂಪ್ರದಾಯಗಳು
17) ಜನಪದ ಕ್ರೀಡೆಗಳು
18) ಗ್ರಾಮ ದೇವತೆಗಳು
19) ಜನಪದ ಚಿತ್ರ – ಶಿಲ್ಪಕಲೆ
20) ಗರಡಿಯ ಕಲೆ

ಈ ವರ್ಷ ಕನ್ನಡ ಆವೃತ್ತಿ ಅಚ್ಚಾಗುತ್ತಿದ್ದು ಬರುವ ವರ್ಷದಲ್ಲಿ ಈ ಗ್ರಂಥದ ಇಂಗ್ಲಿಷ್ ಆವೃತ್ತಿಯನ್ನು ಪ್ರಕಟಿಸಲಾಗುವುದು.

ವೇಷಭೂಷಣ, ವಾದ್ಯಪರಿಕರಗಳಿಗೆ ಧನಸಹಾಯ:

ಈ ವರ್ಷ ಎಲ್ಲ ಜಿಲ್ಲೆಯ ಪ್ರಾತಿನಿಧಿಕವಾದ ಕನಿಷ್ಟ ಒಂದು ಕಲಾತಂಡಕ್ಕೆ ಸಾಂಪ್ರದಾಯಿಕ ಬಣ್ಣಗಳ ಹಾಗೂ ಕಲೆಗೆ ಸರಿಹೊಂದುವಂತಹ ವೇಷಭೂಷಣ ಹಾಗೂ ವಾದ್ಯಪರಿಕರಗಳನ್ನು ಅಕಾಡೆಮಿಯಿಂದಲೇ ತಯಾರಿಸಿಕೊಡುವ ಒಂದು ವಿಶೇಷ ಯೋಜನೆಯನ್ನು ಹಮ್ಮಿಕೊಳ್ಳಲಾಗಿದ್ದು ಈ ಸಂಬಂಧವಾಗಿ ಎಲ್ಲ ವಿಧವಾದ ಕ್ರಮಂಗಳನ್ನು ಕೈಗೊಳ್ಳಲಾಗುತ್ತಿದೆ. ಒಂದೆರಡು ತಿಂಗಳ ಒಳಗಾಗಿ ಕಲಾವಿದರಿಗೆ ವೇಷಭೂಷಣ ಮತ್ತು ವಾದ್ಯಪರಿಕರಗಳನ್ನು ಪೂರೈಸಲಾಗುತ್ತದೆ. ಪ್ರತಿ ಜಿಲ್ಲೆಯಿಂದ ಆಯ್ಕೆ ಮಾಡುವ ಪ್ರಾತಿನಿಧಿಕ ತಂಡವಲ್ಲದೆ ಬುಡಕಟ್ಟು ಜನಾಂಗಗಳಾದ ಕಂಡಿಯರು, ಕಣಬಿಯರು, ಹಾಲಕ್ಕಿ ಸ್ತ್ರೀಯರು ಹಾಗೂ ಗೊಂಡರ ತಂಡಗಳಿಗೆ ವಿಶೇಷವಾದ ವೇಷಭೂಷಣಗಳನ್ನು ಒದಗಿಸುವ ಏರ್ಪಾಡು ಮಾಡಲಾಗಿದೆ. ಇವುಗಳ ಒಟ್ಟು ಖರ್ಚು ಸುಮಾರು 75,000 ರೂ. ಗಳಾಗಬಹುದೆಂದು ನಿರೀಕ್ಷಿಸಲಾಗಿದೆ.

ಜನಪದ ಜೀವನ ಮತ್ತು ಕಲೆಗಳ ದಾಖಲಾತಿ

ಅಕಾಡೆಮಿಯ ವಿಡಿಯೋ ಚಿತ್ರೀಕರಣ ಕಾರ್ಯಕ್ರಮ

(ಅ) ಬುಡಕಟ್ಟು ಜನಾಂಗಗಳ ವಿಡಿಯೋ ಚಿತ್ರೀಕರಣ

ಸಹ್ಯಾದ್ರಿ ಶ್ರೇಣಿಯ ಅಜುಬಾಜಿನಲ್ಲಿ ವಾಸವಾಗಿರುವ ಮತ್ತು ಪರಂಪರಾಗತ ಸಂಸ್ಕೃತಿ ಹಾಗೂ ಕಲೆಯನ್ನು ಉಳಿಸಿಕೊಂಡು ಬಂದಿರುವ ಬುಡಕಟ್ಟು ಜನಾಂಗಗಳ ಜೀವನ ವಿಧಾನವನ್ನು ವಿಡಿಯೋ ಚಿತ್ರೀಕರಣ ಮಾಡುವ ಬೃಹತ್ ಯೋಜನೆಯನ್ನು ಅಕಾಡೆಮಿ ಹಮ್ಮಿಕೊಂಡಿದೆ. ಕಲಾವಿದರ ಪರಿಸರಕ್ಕೇ ಹೋಗಿ ಅವರ ಜೀವನ, ಆಚರಣೆ ಮುಂತಾದ ಸಮಗ್ರ ಮಾಹಿತಿಯನ್ನು ಸೆರೆಹಿಡಿಯುವ ಮೂಲಕ ಇಡೀ ಜನಾಂಗದ ಸಂಸ್ಕೃತಿಯನ್ನು ದಾಖಲಾತಿ ಮಾಡುವ ವಿಶೇಷ ಕಾರ್ಯವನ್ನು ಈಗಾಗಲೇ ಸಾಕಷ್ಟು ಮಾಡಲಾಗಿದೆ. ಈ ನಿಟ್ಟಿನಲ್ಲಿ ಗೊಂಡರು (ಶಿವಮೊಗ್ಗ ಜಿಲ್ಲೆ), ಕಣಬಿಯರು (ಶಿವಮೊಗ್ಗ ಜಿಲ್ಲೆ), ಸಿದ್ದಿಯರು (ಉತ್ತರ ಕನ್ನಡ ಜಿಲ್ಲೆ), ಹಾಲಕ್ಕಿ ಒಕ್ಕಲಿಗರು

(ಉತ್ತರ ಕನ್ನಡ ಜಿಲ್ಲೆ), ಕೆಂಬಟ್ಟಿಯವರು (ಕೊಡಗು ಜಿಲ್ಲೆ), ಮುಕ್ರಿಯರು (ಉತ್ತರ ಕನ್ನಡ ಜಿಲ್ಲೆ), ಗೌಳಿಗರು (ಉತ್ತರ ಕನ್ನಡ ಜಿಲ್ಲೆ), ಕಂಡಿಯರು (ಕೊಡಗು ಜಿಲ್ಲೆ), ಯರವರು (ಕೊಡಗು ಜಿಲ್ಲೆ), ಫಣಿಯರು (ಕೊಡಗು ಜಿಲ್ಲೆ), ಸೋಲಿಗರು (ಮೈಸೂರು ಜಿಲ್ಲೆ) ಮುಂತಾದ ಜನಾಂಗಗಳ ಬಗ್ಗೆ ವಿಡಿಯೋ ಚಿತ್ರೀಕರಣವನ್ನು ಮಾಡಿಕೊಳ್ಳಲಾಗಿದೆ.

(ಆ) ವರ್ಣಪಾರದರ್ಶಿಕೆ ಹಾಗೂ ಛಾಯಾಚಿತ್ರಗಳು :

ಈ ಎಲ್ಲ ಜನಾಂಗಗಳಿಗೆ ಸಂಬಂಧಿಸಿದಂತೆ ಅಪೂರ್ವವಾದ ಮನಮೋಹಕವಾದ ನೂರಾರು ವರ್ಣಪಾರದರ್ಶಿಕೆಗಳನ್ನು ತೆಗೆದು ಸಂಗ್ರಹಿಸಲಾಗಿದೆ. ಜೊತೆಗೆ ಕಪ್ಪು ಬಿಳುಪು ಮತ್ತು ಬಣ್ಣದ ಛಾಯಾಚಿತ್ರಗಳನ್ನೂ ಸಂಗ್ರಹಿಸಲಾಗಿದೆ.

(ಇ) ವಿಡಿಯೋ ಸಾಕ್ಷ್ಯಚಿತ್ರ :

ಮೇಲ್ಕಾಣಿಸಿದ ಬುಡಕಟ್ಟು ಜನಾಂಗಗಳ ಸಮಗ್ರ ವಿಡಿಯೋ ಚಿತ್ರವನ್ನು ಆಧಾರವಾಗಿಟ್ಟುಕೊಂಡು ಕುಣಬಿಯರು, ಗೊಂಡರು, ಗೌಳಿಯವರು, ಹಾಲಕ್ಕಿಯವರು ಮತ್ತು ಯರವರನ್ನು ಕುರಿತಂತೆ ಒಂದೂವರೆ ಗಂಟೆ ಅವಧಿಯ ಒಂದು ವಿಡಿಯೋ ಸಾಕ್ಷ್ಯಚಿತ್ರವನ್ನು ತಯಾರಿಸಲಾಗಿದೆ.

(ಈ) ಜನಪದ ಕಲೆಗಳ ಚಿತ್ರೀಕರಣ :

ಹತ್ತಾರು ಜನಪದ ಕಲೆಗಳನ್ನು ಆಯಾ ಹಳ್ಳಿಗಳ ಪರಿಸರದಲ್ಲೇ ಚಿತ್ರೀಕರಣ ಮಾಡಿಕೊಳ್ಳಲಾಗಿದ್ದು ಚಿಟ್‌ಮೇಳ, ಕಿನ್ನರಿಜೋಗಿ ಮೇಳ, ಪಟಾಕುಣಿತ, ಚೌಡಿಕೆ, ವೀರಗಾಸೆ, ಲಂಬಾಣಿ ನೃತ್ಯ, ಕೊಂಬಾಟ್, ಸೋಮನ ಕುಣಿತ, ಕೋಲಾಟ, ಪೂಜಾ ಕುಣಿತ, ಕರಪಾಲ ಮೇಳ - ಈ ಕಲೆಗಳ ಬಗ್ಗೆ ಒಂದು ಸಾಕ್ಷ್ಯಚಿತ್ರವನ್ನು ತಯಾರಿಸಲಾಗಿದೆ.

(ಉ) ಜಾತ್ರೆಗಳ ಚಿತ್ರೀಕರಣ :

ಕರ್ನಾಟಕದಲ್ಲಿನ ಅಪೂರ್ವವಾದ ಮತ್ತು ಅಧ್ಯಯನಕ್ಕೆ ವಿಪುಲ ಮಾಹಿತಿ ಒದಗಿಸುವಂತಹ ಜಾತ್ರೆಗಳನ್ನು ಚಿತ್ರೀಕರಿಸುವ ದಿಸೆಯಲ್ಲಿ ಕೂಡಾ ಅಕಾಡೆಮಿ ಕಾರ್ಯೋನ್ಮುಖವಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯಡಕದಲ್ಲಿ ನಡೆದ ವಿಶಿಷ್ಟ 'ಸಿರಿ' ಜಾತ್ರೆ, ಗುಲ್ಬರ್ಗ ಜಿಲ್ಲೆ ಅಫಜಲ್‌ಪುರ ತಾಲ್ಲೂಕಿನ ಮಾಶ್ಯಾಳದಲ್ಲಿ ನಡೆದ 'ಚೌಡೇಶ್ವರಿ' ಜಾತ್ರೆಗಳನ್ನು ಸಂಪೂರ್ಣವಾಗಿ ಚಿತ್ರೀಕರಿಸಿಕೊಳ್ಳಲಾಗಿದ್ದು, ಈ ಮೂಲಕ ಅತ್ಯಂತ ಗಹನ ಮಾಹಿತಿಯುಳ್ಳ ವಿಚಾರಗಳನ್ನು ದಾಖಲು ಮಾಡಿದಂತಾಗಿದೆ.

ಕರ್ನಾಟಕ ಜನಪದ ಸಂಪ್ರದಾಯದಲ್ಲಿ ಮೈಲಾರಲಿಂಗನ ಸಂಪ್ರದಾಯ ಅತ್ಯಂತ ಮಹತ್ವಪೂರ್ಣವಾದದ್ದು. ಉತ್ತರ ಕರ್ನಾಟಕದ ಲಕ್ಷಾಂತರ ಜನ ಒಂದು ಕಡೆ ಸೇರಿ ಆಚರಿಸುವ ಮೈಲಾರಲಿಂಗನ ಜಾತ್ರೆ ಇಡೀ ಕರ್ನಾಟಕದಲ್ಲೇ ಅತ್ಯಂತ ದೊಡ್ಡ ಜಾತ್ರೆ. ಬಳ್ಳಾರಿ ಜಿಲ್ಲೆ ಹಡಗಲಿ ತಾಲ್ಲೂಕಿನ ತುಂಗಭದ್ರಾ ನದಿ ತೀರದಲ್ಲಿ ನೆಲೆಸಿರುವ ಮಣ್ಣ ಮೈಲಾರದ ಮೈಲಾರಲಿಂಗನ ಭಕ್ತರ ವೈಶಿಷ್ಟ್ಯಗಳು ಹಾಗೂ ಜಾತ್ರೆಯ ಮಹತ್ವದ ಸನ್ನಿವೇಶಗಳನ್ನು ಕಳೆದ ಫೆಬ್ರವರಿಯಲ್ಲಿ ಚಿತ್ರೀಕರಿಸಲಾಯಿತು.

ಇದೇ ಮಾರ್ಚಿ ಮತ್ತು ಏಪ್ರಿಲ್ ತಿಂಗಳಿನಲ್ಲಿ ನಡೆಯಲಿರುವ ಕರ್ನಾಟಕದ ಮಹತ್ವದ ಜಾತ್ರೆಗಳನ್ನು, ಹಬ್ಬ-ಹುಣ್ಣಿಮೆಗಳನ್ನು ಆಯಾ ಸಂದರ್ಭದಲ್ಲಿಯೇ ಅತ್ಯಂತ ವಾಸ್ತವಿಕ ಸ್ವರೂಪದಲ್ಲಿ ಚಿತ್ರೀಕರಣ ಮಾಡಿಕೊಳ್ಳಲು ಅಕಾಡೆಮಿ ತೀರ್ಮಾನಿಸಿದೆ. ಈ ಎಲ್ಲ ಸಂದರ್ಭಗಳಲ್ಲಿ ಮಹತ್ವಪೂರ್ಣವೆನ್ನಿಸುವ ವರ್ಣಪಾರದರ್ಶಿಕೆಗಳನ್ನು ತೆಗೆದು ಸಂಗ್ರಹಿಸಲಾಗುತ್ತದೆ.

ಈ ಮೇಲ್ಕಂಡ ಜನಾಂಗಗಳ ಮತ್ತು ಜಾತ್ರೆಗಳ, ಕಲೆಗಳ ವಿಡಿಯೋ ಕ್ಯಾಸೆಟ್‌ಗಳಲ್ಲದೆ ಅಕಾಡೆಮಿಯು ಈಗಾಗಲೇ ವಿವಿಧ ಯಕ್ಷಗಾನಗಳು, ಗೊಂಬೆಯಾಟಗಳು ಮತ್ತು ಅಕಾಡೆಮಿ ಏರ್ಪಡಿಸಿದ್ದ ಹತ್ತಾರು ಕಲಾಮೇಳಗಳಲ್ಲಿ ಪ್ರದರ್ಶಿತವಾದ ಹಲವಾರು ಕಲೆಗಳ ವಿಡಿಯೋ ಕ್ಯಾಸೆಟ್‌ಗಳು ಈಗ ಅಕಾಡೆಮಿಯಲ್ಲಿ ಲಭ್ಯವಿದೆ.

(ಊ) ಆಡಿಯೋ ಕ್ಯಾಸೆಟ್‌ಗಳು :

ಜಾನಪದದ ಮೂಲಧ್ವನಿ, ವಾದ್ಯ ಮತ್ತು ಸಂಗೀತಗಳನ್ನು ಹಲವಾರು ರೀತಿಯಲ್ಲಿ ಅನುಕರಣೆ ಮಾಡುವ ಮೂಲಕ ಇತ್ತೀಚಿನ ದಿನಗಳಲ್ಲಿ ಜನಪದ ಸಾಹಿತ್ಯದ ಮತ್ತು ಸಂಗೀತದ ಕಲಬೆರಕೀಕರಣ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಕರ್ನಾಟಕದ ಅತ್ಯುತ್ತಮ ಮೂಲ ಗಾಯಕರನ್ನು ಕರೆಸಿ ಸುಸಂಬದ್ಧವಾದ ವಾದ್ಯಗಳ ಮೂಲಕ ಮೂಲ ಸ್ವರೂಪಕ್ಕೆ ಧಕ್ಕೆಯಾಗದ ರೀತಿಯಲ್ಲಿ ಸಂಗೀತ ಜೋಡಣೆ ಮಾಡಿಸಿ ಅತ್ಯಂತ ವೈಜ್ಞಾನಿಕವಾದ ರೀತಿಯಲ್ಲಿ ಕನಿಷ್ಠ 2 ಆಡಿಯೋ ಕ್ಯಾಸೆಟ್‌ಗಳನ್ನು ಈ ವರ್ಷ ತಯಾರಿಸುವ ಯೋಜನೆಯನ್ನು ಅಕಾಡೆಮಿ ಹಾಕಿಕೊಂಡಿದೆ.

“ಹಿರಿಯರಲ್ಲಿ ಹಿರಿಯರು”



ಗುಲ್ಬರ್ಗ ವಿ. ವಿ. ಗೌರವ ಡಾಕ್ಟರೇಟ್ ಪಡೆದ ಡಾ॥ ಸಿಂಪಿ ಲಿಂಗಣ್ಣ ಮತ್ತು ಡಾ॥ ಎಸ್. ಕೆ. ಕರೀಂಖಾನ್




ಯಕ್ಷಗಾನ ಪ್ರಾತ್ಯಕ್ಷಿಕೆಯಲ್ಲಿ ಪ್ರಖ್ಯಾತ ಯಕ್ಷಗಾನ ಪಟು ಶ್ರೀ ಮಹಾಬಲ ಹೆಗಡೆ



ದಿನಾಂಕ 9-3-1989 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ
ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 23 ಜನರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಬಸವನ ಬಾಗೇವಾಡಿಯಲ್ಲಿ ನಡೆದ ಜಿಲ್ಲಾ ಜಾನಪದ ಮೇಳದ ಮುಕ್ತಾಯ ಸಮಾರಂಭ



ಗುಲ್ಬರ್ಗಾ ಜಿಲ್ಲೆ ಅಫಜಲ್‌ಪುರ ತಾಲ್ಲೂಕ್ ಮಾಶ್ಯಾಳದಲ್ಲಿ ನಡೆಯುವ ಚೌಡೇಶ್ವರಿ ಜಾತ್ರೆ



ಬಂಡಕಟ್ಟು (ಗೊಂಡರು) ಚೆಲ್ಲಿದ ನಗೆ



ಮೈಲಾರ ಜಾತ್ರೆಯ ಜನಸ್ತೋಮ



ಮೈಲಾರ ಜಾತ್ರೆಯಲ್ಲಿ 'ಚಾಮರ ಸೇವೆ'

ಅಕಾಡೆಮಿಯ ಪ್ರಕಟಣೆಗಳು

೧. ಆರಂಭದೆತ್ತು ಐನೂರು
(ಆಯ್ದ ಜನಪದ ಗೀತೆಗಳ ಸಂಗ್ರಹ)

೨. ಆನೆಬಂತೊಂದಾನೆ
(ಆಯ್ದ ಶಿಶುಪ್ರಾಸಗಳ ಸಂಗ್ರಹ)

೩. ಗಾದೆಗಳು
(ಆಯ್ದ ಗಾದೆಗಳ ಸಂಗ್ರಹ)

೪. ಪಂಚಲೋಹದ ಕುದುರೆ
(ಆಯ್ದ ಜನಪದ ಕಥೆಗಳ ಸಂಗ್ರಹ)

೫. ಪ್ರಶಸ್ತಿ ಪಡೆದ ಮಹನೀಯರು

೬. ಜಾನಪದ ಗಂಗೋತ್ರಿ
(ಅರ್ಧ ವಾರ್ಷಿಕ)

೭. ಕರ್ನಾಟಕ ಜಾನಪದ